ಶುಕ್ರವಾರ, ಮೇ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 149 | ಪುಟ 16 • www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಫೈನಲ್‌ಗೆ ಆರ್‌ಸಿಬಿ...

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಒಂಬತ್ತು ವರ್ಷಗಳ ನಂತರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು. ಗುರುವಾರ ಚಂಡೀಗಢದ ಮುಲ್ಲನಪುರದಲ್ಲಿ ನಡೆದ ಮೊದಲ ಕ್ವಾಲಿಫಯರ್‌ನಲ್ಲಿ ಆರ್‌ಸಿಬಿಯು 8 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಜಯಿಸಿತು. ಸುಯಶ್ ಶರ್ಮಾ 3 ವಿಕೆಟ್ ಪಡೆದು ಪಂದ್ಯಶ್ರೇಷ್ಠರಾದರು

ವಿವರ ಪುಟ 12

ಆಳ-ಅಗಲ ಧರ್ಮದ ಮತ್ತು ಅಮಾಯಕರಿಗೆ ಕುತ್ತು

ರೊಬಸ್ಟಾ ಕಾಫಿ ದರ ಕುಸಿತ 10

ರಾಜಕಾಲುವೆಗೆ ಅಡ್ಡಿ: ಕಟ್ಟಡಗಳ ತೆರವಿಗೆ ಸೂಚನೆ 2

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,633	24,833	₹1ಲಕ್ಷ (ಬೆಂಗಳೂರು)	₹1.03ಲಕ್ಷ (ಬೆಂಗಳೂರು)	85.48

ಪ್ರಮುಖರ ವಿರುದ್ಧದ 43 ಕ್ರಿಮಿನಲ್ ಮೊಕದ್ದಮೆ • ಸಂಪುಟದ ನಿರ್ಣಯಕ್ಕೆ ತೀರ್ಪಿನಿಂದ ಹಿನ್ನಡೆ

ಪ್ರಕರಣ ಹಿಂತೆಗೆತ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಎದುರು ಗಲಭೆ ನಡೆಸಿದ್ದ ಪ್ರಕರಣದ ಆರೋಪಿಗಳು, ಹಲವು ಪ್ರತ್ಯೇಕ ಪ್ರಕರಣಗಳಲ್ಲಿನ ಕೇಂದ್ರ-ರಾಜ್ಯದ ಹಾಲಿ ಹಾಗೂ ಮಾಜಿ ಸಚಿವರು, ಕನ್ನಡಪರ ಹೋರಾಟಗಾರರು, ರೈತ ಸಂಘದ ನಾಯಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 2008ರಿಂದ 2023ರ ನಡುವೆ ದಾಖಲಾಗಿದ್ದ ಒಟ್ಟು 43 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಪ್ರಕರಣಗಳನ್ನು ಹಿಂಪಡೆಯುವ ದಿಸೆಯಲ್ಲಿ ರಾಜ್ಯ ಸರ್ಕಾರ 2024ರ ಅಕ್ಟೋಬರ್ 10ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ಪ್ರಕಟಿಸಿತು. ಅರ್ಜಿದಾರರ ಪರ ವಾದ ಮಂಡಿಸಿದ್ದ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ, 'ನ್ಯಾಯಾಲಯ ದಲ್ಲಿ ವಿಚಾರಣಾ ಹಂತದಲ್ಲಿರುವ ಕ್ರಿಮಿನಲ್ ಪ್ರಕರಣ ಗಳನ್ನು ಹಿಂಪಡೆಯಬೇಕಾದರೆ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 321ರ ಅನ್ವಯ ಆಯಾ ನ್ಯಾಯಾಲಯಗಳ ಪ್ರಾಸಿಕ್ಯೂಟರ್ ಒಪ್ಪಿಗೆ ಪಡೆಯಬೇಕು.

8ನೇ ಪುಟ ನೋಡಿ

ಯಾರೆಲ್ಲರ ಪ್ರಕರಣ ವಾಪಸ್?



ಎಂ.ಸಿ.ಸುಧಾಕರ್



ವಿ.ಸೋಮಣ್ಣ

ಈ ಕೆಳಗಿನವರ ವಿರುದ್ಧದ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲಾಗಿತ್ತು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ನರಗುಂದದ ಬಿ.ಆರ್.ಯಾವಗಲ್, ಹಿರೇಕೆರೂರು ಶಾಸಕ ಯು.ಬಿ.ಬಣಕಾರ್, ಕಾಂಗ್ರೆಸ್ ಪಕ್ಷದ ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷ ಜಗದೇವ ಗುತ್ತೇದಾರ, ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ, ಮಾಜಿ ಶಾಸಕರಾದ ದಾವಣಗೆರೆಯ ಎಸ್.ಎ.ರವೀಂದ್ರನಾಥ್, ಬೆಳಗಾವಿಯ ಸಂಜಯ ಪಾಟೀಲ, ಬಾಗಲಕೋಟೆಯ ವೀರಣ್ಣ ಚರಂತಿಮಠ, ಹೊನ್ನಾಳಿಯ ಎಂ.ಪಿ.ರೇಣುಕಾಚಾರ್ಯ, ಬೆಳಗಾವಿಯ ಅನಿಲ ಬೆನಕೆ, ಡಾ.ಎಸ್.ಸಿದ್ದಯ್ಯ, ಬೆಂಗಳೂರು ಗಾಮಾಂತರ ಜಿಲ್ಲೆಯ ಬಿ.ಶಿವಣ್ಣ, ಭದ್ರಾವತಿಯ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ,

8ನೇ ಪುಟ ನೋಡಿ

ಮುಖ್ಯಾಂಶಗಳು

- ಸುಪ್ರೀಂ ಕೋರ್ಟ್‌ಗೆ ಪದೋನ್ನತಿ ಹೊಂದಿರುವ ಮುಖ್ಯ ನ್ಯಾ.ಅಂಜಾರಿಯಾ
- ಕೊನೆಯ ದಿನದ ಕಲಾಪದಲ್ಲಿ ತೀರ್ಪು ಪ್ರಕಟ




ಸರ್ಕಾರ ತನ್ನ ರಾಜಕೀಯ ಅನುಕೂಲಗಳಿಗಾಗಿ ಸಂವಿಧಾನದ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ ಎಂಬುದನ್ನು ತೀರ್ಪು ಎತ್ತಿ ತೋರಿಸಿದೆ

ಗಿರೀಶ್ ಭಾರದ್ವಾಜ್, ಅರ್ಜಿದಾರ



ರಾಜಕಾರಣದಲ್ಲಿ ಚುನಾವಣೆಯ ಸಂದರ್ಭವನ್ನು ಹೊರತುಪಡಿಸಿ ಅಧಿಕಾರಕ್ಕೆ ಬಂದ ನಂತರ ಜನರ ರಕ್ಷಣೆಗಾಗಿ ಶಾಂತಿ ಸುವ್ಯವಸ್ಥೆ ಕಾಪಾಡುವುದು, ಸಮಾಜಘಾತಕ ಶಕ್ತಿಗಳ ಹೆಡೆಮುರಿ ಕಟ್ಟುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ಇನ್ನು ಮುಂದಾದರೂ ಕಾಂಗ್ರೆಸ್ ಸರ್ಕಾರವು ಕಾನೂನು ಸುವ್ಯವಸ್ಥೆಯನ್ನು ಸುಭದ್ರಗೊಳಿಸುವ ಬದ್ಧತೆ ತೋರಲಿ. ಸಮಾಜಘಾತುಕ ಮುಸ್ಲಿಂ ಕೋಮುವಾದಿ ಗೂಂಡಾಗಳಿಗೆ ರಕ್ಷಣೆ ಒದಗಿಸುವುದನ್ನು ನಿಲ್ಲಿಸಲಿ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದ ಪ್ರಕರಣವನ್ನು ವಾಪಸ್ ಪಡೆಯುವುದು ಸರಿಯಲ್ಲ ಎಂದು ನಾನು ಹೇಳಿದ್ದೆ. ಒತ್ತಡ ಮತ್ತು ಓಲೈಕೆ ರಾಜಕಾರಣಕ್ಕಾಗಿ ಸರ್ಕಾರ ಪ್ರಕರಣ ವಾಪಸ್ ಪಡೆದಿತ್ತು. ಸರ್ಕಾರದ ಕ್ರಮಕ್ಕೆ ಹೈಕೋರ್ಟ್ ಈಗ ಛೀಮಾರಿ ಹಾಕಿದೆ. ರಾಜ್ಯದ ಸಚಿವ ಸಂಪುಟವು ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕೇ ಹೊರತು, ಓಲೈಕೆ ರಾಜಕಾರಣ ವನ್ನಲ್ಲ.ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆ ನಡೆಸಿದವರ ವಿರುದ್ಧ ಸರ್ಕಾರವು ಇನ್ನಾದರೂ ಕಾನೂನು ಕ್ರಮ ತೆಗೆದುಕೊಳ್ಳಲಿ

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ



ತಾವು ಕೋಮುವಾದದ ವಿರೋಧಿಗಳು ಎಂದು ಪೋಸು ನೀಡುವ ಕಾಂಗ್ರೆಸ್ ಪಕ್ಷವು, ಮತ್ತೊಂದೆಡೆ ಕೋಮುವಾದಿಗಳಿಗೆ ಆಶ್ರಯ ನೀಡುತ್ತದೆ. ಸರ್ಕಾರ ವಾಪಸ್ ಪಡೆದಿದ್ದ 43 ಪ್ರಕರಣ-ಗಳಲ್ಲಿ ಒಂದಾದರೂ ಜನಪರ ಹೋರಾಟದ, ಕನ್ನಡ ಚಳವಳಿಗಾರರ ಅಥವಾ ರೈತರ ಪರ ಹೋರಾಟದ ಪ್ರಕರಣಗಳಿದ್ದವೇ? ಪೊಲೀಸ್ ಠಾಣೆಗೆ ಬೆಂಕಿ ಹಾಕಿ, ಸಾರ್ವಜನಿಕರ ಆಸ್ತಿ ಹಾನಿ ಮಾಡಿದ ಪ್ರಕರಣಗಳವು. ಹೈಕೋರ್ಟ್ ಇವರಿಗೆ ಸರಿಯಾಗಿ ಛೀಮಾರಿ ಹಾಕಿದೆ

ಸಿ.ಟಿ.ರವಿ, ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ



ಶಾಲೆ ಪ್ರಾರಂಭ

ಬೆಂಗಳೂರಿನ ಆಡುಗೋಡಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗುರುವಾರ ಆಯೋಜಿಸಲಾಗಿದ್ದ 'ಶಾಲಾ ಪ್ರಾರಂಭೋತ್ಸವ' ದಲ್ಲಿ ವಿದ್ಯಾರ್ಥಿಗೆ ಸಿಹಿ–ಉಡುಗೊರೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಮಧು ಬಂಗಾರಪ್ಪ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪುರಸಭೆಗಳ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ

ಮೀಸಲು: ದತ್ತಾಂಶ ಬಳಕೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುರಸಭೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲು ನಿಗದಿಪಡಿಸುವ ಮುನ್ನ ಸರ್ಕಾರ ಆ ಸಂಸ್ಥೆಗಳಿಗೆ ಯಾವ್ಯಾವ ವರ್ಗದ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ ಎಂಬ ಯಥೋಚಿತ ಮಾಹಿತಿ ಸಂಗ್ರಹಿಸಬೇಕು ಮತ್ತು ಆ ನಂತರವೇ ಸ್ಥಾನಗಳ ಮೀಸಲು ಅಖೈರುಗೊಳಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಮತ್ತು ಧಾರವಾಡ ಜಿಲ್ಲೆಯ ಅಣ್ಣಿಗೇರಿ ಸೇರಿದಂತೆ ಐದು ಪಟ್ಟಣ ಪಂಚಾಯಿತಿಗಳಲ್ಲಿ ಎಸ್‌ಸಿ, ಎಸ್‌ಟಿ ಮೀಸಲು ವರ್ಗದ ಅಡಿಯಲ್ಲಿ ಯಾವುದೇ ಮಹಿಳಾ ಸದಸ್ಯರು ಆಯ್ಕೆಯಾಗಿಲ್ಲ' ಎಂದು ಆಕ್ಷೇಪಿಸಲಾದ ಐದು ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

4A ಪುಟ ನೋಡಿ

ಎರಡು ಹಂತಗಳಲ್ಲಿ ಅನ್ವಯ

'ಮೀಸಲಾತಿ ಎರಡು ಹಂತಗಳಲ್ಲಿ ಅನ್ವಯಿಸುತ್ತದೆ. ಒಂದು ಪುರಸಭೆಗೆ ಆಯ್ಕೆಯಾಗುವ ಸಮಯದಲ್ಲಿ ಮತ್ತು ನಂತರ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಗಳ ಆಯ್ಕೆ ಸಂದರ್ಭದಲ್ಲಿ. ಹೀಗಾಗಿ, ಯಾವ್ಯಾವ ವರ್ಗದ ಅಭ್ಯರ್ಥಿಗಳು ಅಯ್ಕೆಯಾಗಿದ್ದಾರೆ ಎಂಬ ದತ್ತಾಂಶ ಸಂಗ್ರಹಿಸಿ ಹುದ್ದೆಗಳಿಗೆ ಮೀಸಲು ಪಟ್ಟಿ ಮಾಡಿದರೆ ಹಾಗೂ ಒಂದು ಹುದ್ದೆಗೆ ಮೀಸಲಾತಿ ನೀಡಿದರೆ ಮತ್ತು ಆ ವರ್ಗಕ್ಕೆ ಯಾವುದೇ ಅಭ್ಯರ್ಥಿ ಕಂಡುಬಂದಿಲ್ಲ ಎಂದಾದರೆ ಸೂಕ್ತ ಬದಲಾ-ವಣೆಗಳನ್ನು ಮಾಡಲು ಸರ್ಕಾರಕ್ಕೆ ಅವಕಾಶ ಇರುತ್ತದೆ. ಇಲ್ಲವಾದರೆ ಆ ಹುದ್ದೆಗಳೂ ಖಾಲಿ ಉಳಿಯುತ್ತವೆ. ಆಗ ಮೀಸಲು ಉದ್ದೇಶ ಸಾರ್ಥಕವಾಗುವುದಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.



₹3400 ಕೋಟಿ ಟಿಡಿಆರ್ ಬಳಕೆಗೆ ತಡೆ

'ಸುಪ್ರೀಂ' ತೀರ್ಪು ಅಮಾನತು • ರಾಜ್ಯ ಸರ್ಕಾರಕ್ಕೆ ನಿರಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿ-ಕೊಂಡಿರುವ ಅರಮನೆ ಮೈದಾನದ 15.36 ಎಕರೆಗೆ ₹3,400 ಕೋಟಿ ಮೌಲ್ಯದ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣ ಪತ್ರಗಳನ್ನು ಮೈಸೂರಿನ ರಾಜ ವಂಶಸ್ಥರಿಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿದ್ದ ತೀರ್ಪನ್ನು ತ್ರಿಸದಸ್ಯ ಪೀಠ ಗುರುವಾರ ಅಮಾನತುಗೊಳಿಸಿದೆ. ಇದರಿಂದಾಗಿ, ರಾಜ್ಯ ಸರ್ಕಾರಕ್ಕೆ ನಿರಾಳವಾಗಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಂಕರ್ ದತ್ತ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು ಎಲ್ಲ ಟಿಡಿಆರ್ ಪ್ರಮಾಣ ಪತ್ರಗಳನ್ನು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿಯಲ್ಲಿ ಠೇವಣಿ ಇಡಬೇಕು. ಒಂದು ವೇಳೆ ಅದನ್ನು ಬಿಡುಗಡೆ ಮಾಡಿದ್ದರೆ ಯಾರೂ ಅದನ್ನು ಬಳಸುವಂತಿಲ್ಲ ಅಥವಾ ಯಾವುದೇ ಮೂರನೇ ವ್ಯಕ್ತಿ ಹಕ್ಕು ಪ್ರತಿಪಾದಿಸುವಂತಿಲ್ಲ ಎಂದು ಸೂಚಿಸಿದೆ.



ಟಿಡಿಆರ್ ಪ್ರಮಾಣ-ಪತ್ರಗಳ ಬಿಡುಗಡೆಗೆ ಸಂಬಂಧಿಸಿದಂತೆ ಮೇ 22ರಂದು ನೀಡಿದ್ದ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಜುಲೈ 21ರಂದು ವಿಚಾರಣೆ ನಡೆಸಲಾಗುತ್ತದೆ ಎಂದು ಪೀಠ ಹೇಳಿದೆ.

'ಒಂದು ವೇಳೆ ಮರುಪರಿಶೀಲನಾ ಅರ್ಜಿ ತಿರಸ್ಕರಿಸಿದರೆ, ಮಧ್ಯಂತರ ನಿರ್ದೇಶನಗಳು ಅಂತಹ ಆದೇಶ ಹೊರಡಿಸಿದ ದಿನಾಂಕದಿಂದ ನಾಲ್ಕು ವಾರಗಳವರೆಗೆ ಅಥವಾ ತ್ರಿಸದಸ್ಯ ಪೀಠವು ಅದನ್ನು ವಿಚಾರಣೆ ಮಾಡುವವರೆಗೆ ಜಾರಿಯಲ್ಲಿರಲಿವೆ' ಎಂದು ಪೀಠ ಸ್ಪಷ್ಟಪಡಿಸಿದೆ.

ಮುಖ್ಯ ಸಿವಿಲ್ ಮೇಲ್ಮನವಿಯ ವಿಚಾರಣೆಯನ್ನು ಆಗಸ್ಟ್ 18ರಂದು ನಡೆಸುವುದಾಗಿಯೂ ಪೀಠ ತಿಳಿಸಿದೆ. ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಲಿದೆ.

ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯಲ್ಲಿ ಸಂದರ್ಭದಲ್ಲಿ ಮೇ 22ರಂದು ನೀಡಿದ್ದ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ಕರ್ನಾಟಕ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅರ್ಜಿ ಸಲ್ಲಿಸಿದ್ದರು.

10ನೇ ಪುಟ ನೋಡಿ

ಅಬ್ದುಲ್ ಹತ್ಯೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಕುರಿಯಾಳ ಗ್ರಾಮದ ಇರಾ ಕೋಡಿಯಲ್ಲಿ ಇದೇ 27ರಂದು ಬಡಗಬೆಳ್ಳೂರು ಗ್ರಾಮದ ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಅವರನ್ನು ಹತ್ಯೆ ಮಾಡಿದ ಹಾಗೂ ಅವರ ಜೊತೆಗಿದ್ದ ಕಲಂಧರ್ ಶಾಫಿ ಮೇಲೆ ಹಲ್ಲೆ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.



ಬಂಟ್ವಾಳ ತಾಲ್ಲೂಕಿನ ಕುರಿಯಾಳ ಗ್ರಾಮದ ಮುಂಡರಕೋಡಿ ಮನೆಯ ದೀಪಕ್ (21), ಅಮ್ಮುಂಜೆ ಗ್ರಾಮದ ಶಿವಾಜಿ ನಗರ ಭದ್ರಕಾಳಿ ದೇವಸ್ಥಾನ ಬಳಿಯ ನಿವಾಸಿ ಪೃಥ್ವಿರಾಜ್ (21) ಹಾಗೂ ಬಂಟ್ವಾಳದ ನಿವಾಸಿ ಚಿಂತನ್ (19) ಬಂಧಿತರು ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ತಿಳಿಸಿದ್ದಾರೆ.

'ಬೈಕ್‌ನಲ್ಲಿ ಬಂದು ಅಬ್ದುಲ್ ರಹಿಮಾನ್ ಮೇಲೆ ಹಲ್ಲೆ ಮಾಡಿದ ಇನ್ನಿಬ್ಬರು ಆರೋಪಿಗಳು ತಲೆಮರೆಸಿ-ಕೊಂಡಿದ್ದಾರೆ. ಬಂಧಿತ ಈ ಮೂವರೂ ಹತ್ಯೆಯಲ್ಲಿ ನೇರವಾಗಿ ಭಾಗಿಯಾಗಿದ್ದಾರೆ' ಎಂದು ಅವರು ತಿಳಿಸಿದರು.

'ಆರೋಪಿಗಳ ಪತ್ತೆಗಾಗಿ ಬಂಟ್ವಾಳ ಡಿವೈಎಸ್‌ಪಿ ವಿಜಯ ಪ್ರಸಾದ್ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ, ಅವರ ನೇತೃತ್ವದಲ್ಲಿ ಐದು ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿತ್ತು. ಬಂಟ್ವಾಳ ತಾಲ್ಲೂಕಿನ ಕಳ್ಳಿಗೆ ಗ್ರಾಮದ ಕನಪಾಡಿ ಎಂಬಲ್ಲಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ಬಂಧಿಸಲಾಗಿದೆ. ಆರೋಪಿಗಳ ವಿಚಾರಣೆ ನಡೆಸಲಾಗುತ್ತಿದೆ. ಉಳಿದ ಆರೋಪಿಗಳ ಪತ್ತೆ ಕಾರ್ಯ ಪ್ರಗತಿಯಲ್ಲಿದೆ' ಎಂದು ಮಾಹಿತಿ ನೀಡಿದರು. ಅಬ್ದುಲ್ ರಹಿಮಾನ್ ಕೊಲೆ ಮತ್ತು ಕಲಂದರ್ ಶಾಫಿ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಎಂ.ಕೃಷ್ಣಗೆ 'ಕಸಾಪ ದತ್ತಿ ಪ್ರಶಸ್ತಿ'


ಎಂ.ಕೃಷ್ಣ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2025ನೇ ಸಾಲಿನ 'ಎಂ.ಎಲ್. ಮಾದಯ್ಯ ದತ್ತಿ ಪ್ರಶಸ್ತಿ'ಗೆ ಕೋಲಾರದ ಸಿವಿಲ್ ಎಂಜಿನಿಯರ್ ಎಂ.ಕೃಷ್ಣ ಆಯ್ಕೆಯಾಗಿದ್ದಾರೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ದತ್ತಿ ದಾನಿ ಎಂ.ಎಲ್. ಮಾದಯ್ಯ ಅವರ ಆಶಯದಂತೆ ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಎಂ.ಕೃಷ್ಣ ಅವರು ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿದ್ದಾರೆ.

ಮಾನ್ಯತಾ ಟೆಕ್ ಪಾರ್ಕ್ ಬಳಿ ವಿಪತ್ತು ನಿರ್ವಹಣೆ ಕಾಯ್ದೆಯಡಿ ಕ್ರಮ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ರಾಜಕಾಲುವೆಗೆ ಅಡ್ಡಿ: ಕಟ್ಟಡಗಳ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ


ಡಿ.ಕೆ.ಶಿವಕುಮಾರ್ ಅವರು ಮಾನ್ಯತಾ ಟೆಕ್ ಪಾರ್ಕ್ ಬಳಿ ಮಳೆನೀರು ಹರಿವಿಗೆ ಅಡ್ಡಿಯಾಗಿರುವ ಪ್ರದೇಶಗಳನ್ನು ಗುರುವಾರ ಪರಿಶೀಲಿಸಿದರು

ಬೆಂಗಳೂರು: ಮಾನ್ಯತಾ ಟೆಕ್ ಪಾರ್ಕ್ ಹಾಗೂ ಸುತ್ತಮುತ್ತ ಮಳೆನೀರು ಹರಿಯಲು ಅಡ್ಡವಿರುವ ಕಟ್ಟಡಗಳನ್ನು ವಿಪತ್ತು ನಿರ್ವಹಣೆ ಕಾಯ್ದೆಯಡಿ ಶೀಘ್ರ ತೆರವುಗೊಳಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕದ ಮಾನ್ಯತಾ ಟೆಕ್ ಪಾರ್ಕ್ ಬಳಿ ಪ್ರವಾಹಕ್ಕೆ ಕಾರಣವಾಗುತ್ತಿರುವ ರಾಜಕಾಲುವೆ ಹಾಗೂ ನಾಲೆಗಳನ್ನು ಶಿವಕುಮಾರ್ ಅವರು ಗುರುವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ನಾನು ಹಾಗೂ ಮುಖ್ಯಮಂತ್ರಿಯವರು ಈಗಾಗಲೇ ಮಳೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದೇವೆ. ಮಾನ್ಯತಾ ಟೆಕ್‌ಪಾರ್ಕ್ ಬಳಿಯ ಮ್ಯಾನ್ಯೋ ಜಂಕ್ಷನ್‌ನಿಂದ ಸಮಸ್ಯೆ ಆರಂಭವಾಗಿ ನಂತರ ಸುತ್ತಮುತ್ತಲಿನ ಪ್ರದೇಶಗಳಿಗೂ ಸಮಸ್ಯೆಯಾಗುತ್ತಿದೆ. ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅಡ್ಡಿಪಡಿಸುತ್ತಿದ್ದಾರೆ. ನಮ್ಮ ಅಧಿಕಾರಿಗಳೂ ಸಹಕಾರ ನೀಡುತ್ತಿರಲಿಲ್ಲ. ಹೀಗಾಗಿ ಸಮಸ್ಯೆಗೆ ಕಾರಣವಾಗಿರುವ ಪ್ರದೇಶಗಳಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ ಅಡಿ ಕಟ್ಟಡ ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

'ಯಾರ ಆಸ್ತಿಯನ್ನೂ ನಷ್ಟ ಮಾಡಲು ಇಷ್ಟವಿಲ್ಲ. ಯಾರಿಗೂ ಅನ್ಯಾಯ ಮಾಡಲು ಬಯಸುವುದಿಲ್ಲ. ನೀರು ಸರಾಗವಾಗಿ ಹರಿಯಬೇಕು. ಹೀಗಾಗಿ ನಾನೇ ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದ್ದೇನೆ. ಕಾಮಗಾರಿ ಮುಂದುವರಿಸಲು ನನ್ನ ಮುಂದೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಟಿಡಿಆರ್ ಕೂಡ ನೀಡಲಾಗುತ್ತದೆ. ಪ್ರವಾಹಮುಕ್ತಗೊಳಿಸಲು ಶಾಶ್ವತ ಪರಿಹಾರ ಕಂಡು ಹಿಡಿಯುವುದು ಮುಖ್ಯ' ಎಂದು ತಿಳಿಸಿದರು.

'ಬೆಂಗಳೂರಿನ ಘನತೆ ಹಾಳಾಗಲು ಬಿಡುವುದಿಲ್ಲ. ಹೀಗಾಗಿ ಕಾಮಗಾರಿಗೆ ಸಹಕಾರ ನೀಡುವಂತೆ ಈ ಭಾಗದ ಜಮೀನು ಮಾಲೀಕರಿಗೆ ಮನವಿ ಮಾಡಿದ್ದೇವೆ. ತಾಂತ್ರಿಕ ಕಾರಣಗಳಿಂದ ತಪ್ಪಾಗಿದ್ದರೆ ನಾವು ಅದಕ್ಕೆ ಪರಿಹಾರ ನೀಡುತ್ತೇವೆ. ಇದಕ್ಕೆ ಎಲ್ಲರೂ ಒಪ್ಪಿಗೆ ನೀಡಿದ್ದು, ನಾವು ನಮ್ಮ ಕೆಲಸ ಮುಂದುವರಿಸುತ್ತೇವೆ. ಈ ವಿಚಾರದಲ್ಲಿರುವ ಅಡಚಣೆಗಳನ್ನು ತೆರವುಗೊಳಿಸಲು ಪಾಲಿಕೆ ಮುಖ್ಯ ಆಯುಕ್ತರು ಹಾಗೂ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ' ಎಂದರು.

'ಕಟ್ಟಡಗಳಿಗೆ ನಕ್ಷೆ ಅನುಮೋದನೆ ಆಗಿದೆ' ಎಂದು ಮಾಲೀಕರೊಬ್ಬರು ಹೇಳಿದಾಗ, 'ನಕ್ಷೆಗಳ ಗೊಂದಲ ಏನೇ ಇದ್ದರೂ ನೀರು ಹರಿಯಲು ಜಾಗ ಮಾಡಲೇಬೇಕು' ಎಂದು ಶಿವಕುಮಾರ್ ತಿಳಿಸಿದರು.

'ಘನತ್ಯಾಜ್ಯ ನಿರ್ವಹಣೆಗೆ ಶುಲ್ಕ: ಬಿಜೆಪಿ ಜತೆ ಚರ್ಚೆ'

'ಘನತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕ ವಿಧಿಸಿರುವ ಬಗ್ಗೆ ಬಿಜೆಪಿಯವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಪರಿಶೀಲಿಸಿ, ಅವರೊಂದಿಗೆ ಮಾತುಕತೆ ನಡೆಸುತ್ತೇನೆ. ಅವರ ಅಭಿಪ್ರಾಯಕ್ಕೂ ಗೌರವ ನೀಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬಳಕೆದಾರರ ಶುಲ್ಕ ವಿಧಿಸುವ ಬಗ್ಗೆ ಅವರ ಕಾಲದಲ್ಲೇ ತೆಗೆದುಕೊಂಡ ತೀರ್ಮಾನವನ್ನು ನಾವು ಬಿಜೆಪಿಯವರಿಗೆ ಮನವರಿಕೆ ಮಾಡಿಕೊಡುತ್ತೇವೆ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಬೆಟ್ಟದಾಸನಪುರದಲ್ಲಿ ಪುನರ್ವಸತಿ ಶೀಘ್ರ'

ಪ್ರಜಾವಾಣಿ ವಾರ್ತೆ

ಅಂಕಿ ಅಂಶಗಳು

240 ಘಟಕಗಳು
ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸುತ್ತಿರುವ ಮನೆಗಳು

₹18.83 ಕೋಟಿ
ಜಿ+3 ಕಟ್ಟಡಗಳ ನಿರ್ಮಾಣ ವೆಚ್ಚ

900 ಚದರಡಿ
ಪ್ರತಿ ಘಟಕದ ಕಾರ್ಪೆಟ್ ಪ್ರದೇಶ

ವರದಿ ಪರಿಣಾಮ

ಬೆಂಗಳೂರು: ಪುಟ್ಟೇನಹಳ್ಳಿ ಕೆರೆಯಲ್ಲಿ ಒತ್ತುವರಿ ಮಾಡಿಕೊಂಡವರಿಗೆ ಪುನರ್ವಸತಿಗಾಗಿ ಬೆಟ್ಟದಾಸನಪುರದಲ್ಲಿ ಮನೆಗಳನ್ನು ಶೀಘ್ರ ನಿರ್ಮಾಣ ಮಾಡಿಕೊಡಲು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಪ್ರಜಾವಾಣಿ'ಯ ಮೇ 27ರ ಸಂಚಿಕೆಯಲ್ಲಿ 'ಪುಟ್ಟೇನಹಳ್ಳಿ ಕೆರೆ ಒತ್ತುವರಿ ಹೆಚ್ಚಳ' ಶೀರ್ಷಿಕೆಯಡಿ ಪ್ರಕಟವಾಗಿದ್ದ ವಿಶೇಷ ವರದಿಯನ್ನು ಉಲ್ಲೇಖಿಸಿರುವ ಸಚಿವರು, 'ನಿರ್ಮಾಣ ಕಾರ್ಯವನ್ನು ಕೈಗೊಂಡು, ಆದಷ್ಟು ಬೇಗ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಬೇಕು' ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತರಿಗೆ ಆದೇಶಿಸಿದ್ದಾರೆ.

ಪುಟ್ಟೇನಹಳ್ಳಿ ಕೆರೆಯಲ್ಲಿ ಒತ್ತುವರಿ ಮಾಡಿಕೊಂಡ 118 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಕಂದಾಯ ಇಲಾಖೆ ಬೆಟ್ಟದಾಸನಪುರದ ಸರ್ವೆ ನಂಬರ್ 20ರಲ್ಲಿ 2 ಎಕರೆ 24 ಗುಂಟೆ ಜಮೀನನ್ನು ಕೊಳಗೇರಿ ಅಭಿವೃದ್ಧಿ ಮಂಡಳಿಗೆ 2014ರಲ್ಲಿ ಹಸ್ತಾಂತರಿಸಿತ್ತು. ಬಿಬಿಎಂಪಿ ₹1 ಕೋಟಿ ಅನುದಾನವನ್ನೂ ನೀಡಿತ್ತು. ಮಂಡಳಿ ಹಲವು ಕಾರಣಗಳಿಂದ ಮನೆಗಳನ್ನು ನಿರ್ಮಿಸಿರಲಿಲ್ಲ. ಇದರಿಂದ ಪುಟ್ಟೇನಹಳ್ಳಿ ಕೆರೆಯಲ್ಲಿ ಒತ್ತುವರಿ ಹೆಚ್ಚಾಗಿತ್ತು. ಈ ಬಗ್ಗೆ ವಿವರವಾದ ವರದಿ ಪ್ರಕಟವಾದ ಬಳಿಕ, ಸಚಿವರು ಅಧಿಕಾರಿಗಳ ಸಭೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

'ಪ್ರಧಾನಮಂತ್ರಿ ಆವಾಸ್ ಯೋಜನೆಯ– ಸರ್ವರಿಗೂ ಸೂರು ಯೋಜನೆಯಡಿ ಬೆಟ್ಟದಾಸನಪುರದಲ್ಲಿ 10 ಬ್ಲಾಕ್‌ಗಳಲ್ಲಿ ನಾಲ್ಕು ಅಂತಸ್ತಿನ ಕಟ್ಟಡಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಇದಕ್ಕಾಗಿ ಟೆಂಡರ್ ಕರೆದು ಗುತ್ತಿಗೆಯನ್ನೂ ವಹಿಸಲಾಗಿದೆ. ಈ ಹಿಂದೆ 'ಒತ್ತುವರಿದಾರರು ಶೆಡ್, ಮನೆ ಬೇಡ, ನಿವೇಶನ ಬೇಕು' ಎಂದು ಒತ್ತಾಯಿಸಿದ್ದರು. ನ್ಯಾಯಾಲಯದಲ್ಲಿ ಪ್ರಕರಣವಿದ್ದು, ಕೊನೆಗೆ ಫ್ಲ್ಯಾಟ್‌ಗಳನ್ನು ಪಡೆದುಕೊಳ್ಳುವುದಾಗಿ ಹೇಳಿದ್ದಾರೆ. ಹೀಗಾಗಿ, ನಿರ್ಮಾಣ ಕಾರ್ಯ ಆರಂಭಿಸಲಾಗುತ್ತದೆ. 'ಫಾಸ್ಟ್ ಟ್ರ್ಯಾಕ್' ಮಾದರಿ ಯಲ್ಲಿ ಸುಮಾರು ಒಂದೂವರೆ ವರ್ಷದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತ ಅಶೋಕ್ ತಿಳಿಸಿದರು.

'ಪರಿಶೀಲಿಸಿ ಕ್ರಮ'

ಬೆಟ್ಟದಾಸನಪುರದಲ್ಲಿ ನಿರ್ಮಿಸುತ್ತಿರುವ ಮನೆಗಳನ್ನು ನಮ್ಮ ಕ್ಷೇತ್ರದ ಜನರಿಗೆ ಕೊಡಲು ಆದ್ಯತೆ ನೀಡಲಾಗುತ್ತದೆ. ಬೇರೆ ಕ್ಷೇತ್ರದ ಜನರಿಗೆ ಇಲ್ಲಿ ಹೇಗೆ ಕೊಡುವುದು? ಈ ಜಾಗವನ್ನು ಪುಟ್ಟೇನಹಳ್ಳಿ ಕೆರೆಯಲ್ಲಿನ ಒತ್ತುವರಿದಾರರಿಗೆ ಪುನರ್ವಸತಿ ಕಲ್ಪಿಸಲೆಂದೇ ಕೊಟ್ಟಿರುವ ಬಗ್ಗೆ ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ತಿಳಿಸಿದರು.

ಪಂಚಾಯಿತಿ ಚುನಾವಣೆಗೆ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಪಕ್ಷದ ಕಾರ್ಯಕರ್ತರನ್ನು ಸಜ್ಜುಗೊಳಿಸಲು ಎಲ್ಲ ನಾಯಕರು ರಾಜ್ಯ ಪ್ರವಾಸ ಹಮ್ಮಿಕೊಳ್ಳಲು ಪ್ರಮುಖ ನಾಯಕರ ಸಮಿತಿ ಸಭೆ ನಿರ್ಧರಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್ ನೇತೃತ್ವದಲ್ಲಿ ಎರಡು ದಿನಗಳಿಂದ ಹಲವು ಸಭೆಗಳು ನಡೆದಿವೆ. ರಾಜ್ಯ ಎಸ್‌ಟಿ ಮೋರ್ಚಾ, ಮಹಿಳಾ ಮೋರ್ಚಾ, ಯುವ ಮೋರ್ಚಾಗಳ ಪ್ರಮುಖರ ಸಭೆ ನಡೆದಿದೆ. ಬೇರೆ ಬೇರೆ ಸಮುದಾಯಗಳ ಪ್ರಮುಖರ ಸಭೆ ನಡೆಸಲಾಗುತ್ತಿದೆ. ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ವೇಳೆಗೆ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಲು ಚರ್ಚೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಕುಮ್ಮಕ್ಕಿನಿಂದ ಬಿಜೆಪಿ ನಾಯಕರು, ಜನಪ್ರತಿನಿಧಿಗಳು, ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಬಗ್ಗಬಾರದು. ಗೂಂಡಾ ಸರ್ಕಾರದ ವಿರುದ್ಧ ಯಶಸ್ವಿಯಾಗಿ ಹೋರಾಟ ಮುಂದುವರಿಸಲು ಸಭೆ ಸಮ್ಮತಿ ನೀಡಿದೆ ಎಂದರು.

ಪ್ರತಿ ವಿಭಾಗಕ್ಕೆ ಒಂದು ತಂಡ ರಚಿಸಿ, ಜಿಲ್ಲಾ ಪ್ರವಾಸ ಹಮ್ಮಿಕೊಳ್ಳುವ ಕುರಿತು ಯೋಜನೆ ರೂಪಿಸಲಾಗುವುದು ಎಂದರು.

ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಸಂಸದ ಬಸವರಾಜ ಬೊಮ್ಮಾಯಿ ಇದ್ದರು.

ಸೌಲಭ್ಯ ವಂಚಿತ ಕುಟುಂಬಗಳಿಗೆ 'ಜಾಯ್ ಹೋಮ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ಫೌಂಡೇಷನ್ ರಾಜ್ಯದ 50 ಸೌಲಭ್ಯ ವಂಚಿತ ಬಡ ಕುಟುಂಬಗಳಿಗೆ 'ಜಾಯ್ ಹೋಮ್ಸ್' ಶೀರ್ಷಿಕೆಯಡಿ ಮನೆಗಳನ್ನು ಒದಗಿಸಲು ಮುಂದಾಗಿದ್ದು, ಇದರ ಉದ್ಘಾಟನಾ ಕಾರ್ಯಕ್ರಮವನ್ನು ಇದೇ 31ರಂದು ಬೆಳಿಗ್ಗೆ 11 ಗಂಟೆಗೆ ಹೊಸೂರು ಮುಖ್ಯ ರಸ್ತೆಯಲ್ಲಿರುವ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಗೃಹ ಸಚಿವ ಜಿ. ಪರಮೇಶ್ವರ ಭಾಗವಹಿಸಲಿದ್ದು, 50 ಕುಟುಂಬಗಳಿಗೆ ಮನೆಯ ಕೀಗಳನ್ನು ಹಸ್ತಾಂತರಿಸಲಾಗುತ್ತದೆ. ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಉಪಸ್ಥಿತರಿರುತ್ತಾರೆ.

'ಸಂಸ್ಥೆಯ 'ಜಾಯ್ ಹೋಮ್ಸ್' ಯೋಜನೆಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ಭಾಗವಾಗಿದೆ. ಶಾಶ್ವತ ಮತ್ತು ಸುಂದರ ವಸತಿಗಳನ್ನು ಒದಗಿಸುವುದು ಯೋಜನೆಯ ಉದ್ದೇಶ' ಎಂದು ಜೋಯಾಲುಕ್ಕಾಸ್ ಪ್ರಕಟಣೆ ತಿಳಿಸಿದೆ.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ–122050. Email: roc.cpace@mca.gov.in

ಸತ್ಯಮೇವ ಜಯತೇ

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ–ಪೇಸ್/ಎಸ್‌ಟಿಕೆ–2/248(2)/2025–26/462 ದಿ:20.05.2025

ಉಲ್ಲೇಖ:

(1) ಕರ್ನಾಟಕ ರಾಜ್ಯದ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ (44) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AB3978785	U79110KA2023PTC181533	ಟ್ರಾವೆಲ್ ಗಾಡ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
2	AB3962105	U74999KA2016PTC095864	ಸಿಂಟಲ್ ಎಚ್‌ಆರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
3	AB3942322	U72200KA2015PTC084019	9ಬಿಟ್ಸ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್
4	AB3094739	U72900KA2019PTC121849	ವೇಜ್‌ಫೈರ್ ಟೆಕ್ನೋಲಿಂಕ್ ಪ್ರೈವೇಟ್ ಲಿಮಿಟೆಡ್
5	AB3885727	U15400KA2021PTC146427	ಮ್ಯಾಕ್ಸ್‌ನೇಚರ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
6	AB3884801	U70200KA2019PTC126440	ಕಾಡೇಶ್ ಎಕ್ಸ್‌ಪಾನ್ಸ್ ಪ್ರೈವೇಟ್ ಲಿಮಿಟೆಡ್
7	AB3113324	U51109KA2014FTC076108	ಆರ್‌ಇಪಿ ಮಷೀನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
8	AB3874304	U72900KA2016PTC098438	ಫ್ಲೈಹೈ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
9	AB3869618	U72900KA2020PTC142223	ಸೆನ್‌ಸಿನ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
10	AB3867217	U52603KA2019PTC127103	ಟೀ ಪೋಷನ್ಸ್ ಪ್ರೈವೇಟ್ ಲಿಮಿಟೆಡ್
11	AB3863778	U74999KA2017PTC102589	ಸ್ಕಿಲ್ ಹ್ಯಾಟ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
12	AB3854309	U17114KA2001PTC029363	ಕೆ.ಜಿ.ಎಂ.ಸ್ಟೆಟರ್ಸ್ ಅಂಡ್ ನಿಟ್ಸ್ ಪ್ರೈವೇಟ್ ಲಿಮಿಟೆಡ್
13	AB3133510	U72900KA2020PTC136882	ನಾರಾಸಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
14	AB3852510	U50200KA2013PTC070706	ಟ್ಯುಯೊನೊ ಮೋಟರ್ಸ್ ಪ್ರೈವೇಟ್ ಲಿಮಿಟೆಡ್
15	AB3833245	U74999KA2020OPC141195	ಪದ್ಮಪರ್ಣ ಚೌಧರಿ ಕನ್ಸಲ್ಟಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
16	AB3832958	U72900KA2021PTC148143	ಅನ್‌ಕ್ಲಟರ್ ಅನ್‌ಬಂಡಲ್ ಪ್ರೈವೇಟ್ ಲಿಮಿಟೆಡ್
17	AB3185931	U62013KA2024PTC190159	ಗ್ಲೋಬಲ್ ಒಪನ್ ಡಿಸ್ಟ್ರಿಬ್ಯೂಷನ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
18	AB3215225	U55209KA2022PTC160199	ಅಡ್ವೆಸ್ ಅಮೆರಿಕ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೆಂಟರ್ ಪ್ರೈವೇಟ್ ಲಿಮಿಟೆಡ್
19	AB3221223	U46419KA2023PTC177149	ವಿವಾ ವೇರ್‌ಹೌಸಿಂಗ್ ಅಂಡ್ ಲಾಜಿಸ್ಟಿಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
20	AB3795128	U72900KA2020PTC141126	ಶ್ರೀಮತ ಜ್ವಾಲಾಮುಖಿ ಸಿನಿಮಾಸ್ ಪ್ರೈವೇಟ್ ಲಿಮಿಟೆಡ್
21	AB3770795	U52390KA2012PTC063269	ಸ್ವೀಟ್ ಚಿಲ್ಲೀಸ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್
22	AB3747145	U72900KA2022PTC160448	ಆಟೋರೂಟ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
23	AB3740196	U62011KA2024PTC192577	ರಿಕನ್ಸೋಲ್ ಪ್ರೈವೇಟ್ ಲಿಮಿಟೆಡ್
24	AB3727646	U55101KA2016PTC097555	ವಿಲ್ಲಕೊಮೆನ್ ಹಾಸ್ಪಿಟ್ಯಾಲಿಟಿ ಟೆಕ್ನಾಲಜೀಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
25	AB3260188	U80302KA2022OPC166954	ವಿಡ್‌ವೈಬ್ ಲರ್ನಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
26	AB3714420	U74900KA2012PTC062440	ವರ್ಲ್ಡ್ ಕ್ಲಾಸ್ ಮಾರ್ಬಲ್ಸ್ ಪ್ರೈವೇಟ್ ಲಿಮಿಟೆಡ್
27	AB3708343	U01500KA2024PTC183665	ನಾಕಾಗ್ರೊ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್
28	AB3639672	U01110KA2021PTC144512	ಫಾರ್ಮರ್ಸ್ ಶಾಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
29	AB3626678	U80902KA2018PTC117440	ಎಕ್ಸೆಲ್ಲ್‌ಆರ್ ಪ್ಲಾಟ್‌ಫಾರಂ ಪ್ರೈವೇಟ್ ಲಿಮಿಟೆಡ್
30	AB3616852	U74140KA2001PTC029469	ಪ್ರಯಾಗ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
31	AB3609904	U74999KA2019PTC121002	ಸಿಆರ್‌ಎಂ ಕನ್ಸಲ್ಟನ್ಸಿ ಸರ್ವೀಸ್ ಪ್ರೈವೇಟ್ ಲಿಮಿಟೆಡ್
32	AB3605527	U31009KA2024PTC187837	ಸ್ಪಾಜಿಯಮ್ ಮಾಡ್ಯೂಲಾರ್ ಫರ್ನಿಚರ್ ಪ್ರೈವೇಟ್ ಲಿಮಿಟೆಡ್
33	AB3597456	U72900KA2018PTC109542	ಕೂಲ್‌ಸೋಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
34	AB3595729	U24239KA2022PLC156976	ಕ್ಯೆಂಡ್‌ಮ್ಯಾನ್ಸ್ ಲ್ಯಾಬೊರೇಟರೀಸ್ ಲಿಮಿಟೆಡ್
35	AB3594406	U51909KA1993PTC013858	ಆರ್ವಿ ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್
36	AB3593562	U72300KA2018PTC109573	ಆಬ್ಲೊಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
37	AB3582595	U65929KA2022PTC163266	ಪೌರ್ಣಮಿ ಇನ್ವೆಸ್ಟ್‌ಮೆಂಟ್ಸ್ ಅಂಡ್ ರಿಯಾಲ್ಟೀಸ್ ಪ್ರೈವೇಟ್ ಲಿಮಿಟೆಡ್
38	AB3551206	U74909KA2023PTC178084	ಯುಕ್ಯೂಎ ಸರ್ಟಿಫಿಕೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
39	AB3542194	U72200KA2012PTC063674	ಡೆಂಟ್ರೊಡೇಟಾ ಪ್ರೈವೇಟ್ ಲಿಮಿಟೆಡ್
40	AB3529715	U62091KA2023PTC179826	ಯೂಲರ್ ಎನಿಗ್ಮಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
41	AB3525145	U80300KA2022PTC156971	ಕ್ವೀನ್ಸ್‌ವೇ ಅಕಾಡೆಮಿ ಟ್ಯೂಟರಿಂಗ್ ಪ್ರೈವೇಟ್ ಲಿಮಿಟೆಡ್
42	AB3495761	U74999KA2018PTC112474	ಏಕಾಂಶ್ ಡಿಸೈನ್ಸ್ ಪ್ರೈವೇಟ್ ಲಿಮಿಟೆಡ್
43	AB3459003	U80901KA2018PTC119786	ಬಾಲಾಜಿ ಸ್ಕಿಲ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
44	AB3449873	U55101KA2016PTC098556	ಸೆನ್ಯಾಕಲ್ ಪ್ಲಸ್ ಬಿಜ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಇರ್ಫಾನ್ ಟರ್ಕಿ, ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0210/2526

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ – 562123,
E-mail: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23718487

ಸಂಖ್ಯೆ: ಮಾ.ನ.ಕಾ/ಕಲ್ಯಾಣ ಶಾಖೆ/ಸಿ.ಆರ್/01/2025–26 ದಿನಾಂಕ: 28–05–2025

ಸಾರ್ವಜನಿಕ ಪ್ರಕಟಣೆ

ಮಾದನಾಯಕನಹಳ್ಳಿ ನಗರಸಭೆಯ 2025–26ನೇ ಸಾಲಿಗೆ ಎಸ್.ಎಫ್.ಸಿ ನಿಧಿ ಮತ್ತು ನಗರಸಭಾನಿಧಿ ಹಾಗೂ 2023–24 ಮತ್ತು 2024–25ನೇ ಸಾಲಿನ ನಗರಸಭಾ ನಿಧಿಯ ಉಳಿಕೆ ಮೊತ್ತ ಅನುದಾನದಲ್ಲಿ ವೈಯಕ್ತಿಕ ಅನುದಾನದಡಿ **ಶೇ.17.15ರ ಯೋಜನೆ (ಪರಿಶಿಷ್ಟ ಜಾತಿ) ಮತ್ತು ಶೇ.6.95ರ ಯೋಜನೆ (ಪರಿಶಿಷ್ಟ ಪಂಗಡದವರಿಗೆ) ಶೇ.7.25ರ ಯೋಜನೆ (ಹಿಂದುಳಿದವರಿಗೆ) ಹಾಗೂ ಶೇ.5ರ ಯೋಜನೆ** (ವಿಕಲಚೇತನರಿಗೆ) ಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯ ಅರ್ಹ ಅಭ್ಯರ್ಥಿ / ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಸ್.ಎಫ್.ಸಿ ಮುಕ್ತನಿಧಿ

ಶೇ.17.15ರ ಯೋಜನೆ (ಪರಿಶಿಷ್ಟ ಜಾತಿ) ಹಾಗೂ ಶೇ.6.95ರ ಯೋಜನೆ (ಪರಿಶಿಷ್ಟ ಪಂಗಡ)

1. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿವಿಧ ಹಂತಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಹದ ಧನ ನೀಡುವುದು.
2. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಗ್ರಾಮಠಾಣಾದಲ್ಲಿ ವಾಸಿಸುವ (ಗ್ರಾಮ ಪಂಚಾಯಿತಿಯ ನಮೂನೆ 9 & 11 ಅಥವಾ ನಗರಸಭೆ ನಮೂನೆ–3 ಹೊಂದಿರುವಂತಹ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ಜನರಿಗೆ ಮನೆ ರಿಪೇರಿಗಾಗಿ ಸಹಾಯ ಧನ ನೀಡುವುದು.

ಶೇ.7.25ರ ಯೋಜನೆ (ಹಿಂದುಳಿದವರಿಗೆ)

3. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಹಿಂದುಳಿದ ವರ್ಗದ ವಿವಿಧ ಹಂತಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಹದ ಧನ ನೀಡುವುದು.

ಶೇ.5ರ ಕಾರ್ಯಕ್ರಮ (ಅಂಗವಿಕಲರಿಗೆ)

4. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಅಂಗವಿಕಲರಿಗೆ ಅಂಗವಿಕಲ ಉಪಯೋಗಕ್ಕೆ ಸಾಧನ ಸಲಕರಣೆ ಖರೀದಿಸಿ ನೀಡುವುದು.

ನಗರಸಭಾ ನಿಧಿ

ಶೇ.17.15ರ ಯೋಜನೆ (ಪರಿಶಿಷ್ಟ ಜಾತಿ) ಹಾಗೂ ಶೇ.6.95ರ ಯೋಜನೆ (ಪರಿಶಿಷ್ಟ ಪಂಗಡ)

1. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಗ್ರಾಮಠಾಣದಲ್ಲಿ ವಾಸಿಸುವ (ಗ್ರಾಮ ಪಂಚಾಯಿತಿಯ ನಮೂನೆ 9 & 11 ಅಥವಾ ನಗರಸಭೆಯ ನಮೂನೆ–3 ಹೊಂದಿರುವಂತಹ) ಪರಿಶಿಷ್ಠ ಪಂಗಡದ ಬಡ ಜನರ ಮನೆ ರಿಪೇರಿಗಾಗಿ ಸಹಾಯ ಧನ ನೀಡುವುದು.
2. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿ.ಇ/ಎಂ.ಬಿ.ಬಿ.ಎಸ್ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್–ಟಾಪ್ ಖರೀದಿಸಲು ಸಹಾಯಧನ ನೀಡುವುದು.'
3. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ನೀಡುವುದು.'
4. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಂ.ಬಿ.ಬಿ.ಎಸ್/ಬಿ.ಇ ವ್ಯಾಸಾಂಗಕ್ಕಾಗಿ ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿರುವ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಪ್ರವೇಶ ಶುಲ್ಕ ಪಾವತಿಸುವುದು.
5. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಸರ್ಕಾರದ ಅನುಮೋದಿತ ಸಂಘ ಸಂಸ್ಥೆಗಳಿಂದ ಟೈಲರಿಂಗ್ ತರಬೇತಿ ಪ್ರಮಾಣ ಪತ್ರ ಪಡೆದಿರುವಂತವರಿಗೆ ಹೊಲಿಗೆ ಯಂತ್ರ ಖರೀದಿ ನೀಡುವುದು.
6. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡವರ ಮನೆಗಳಿಗೆ ಯು.ಪಿ.ಎಸ್ ಖರೀದಿಸಿ ಅಳವಡಿಸುವುದು.

ಶೇ.7.25ರ ಯೋಜನೆ (ಹಿಂದುಳಿದವರಿಗೆ)

1. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಹಿಂದುಳಿದ ವರ್ಗದ ವಿವಿಧ ಹಂತಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಹದ ಧನ ನೀಡುವುದು.
2. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಹಿಂದುಳಿದ ವರ್ಗದ ಬಿ.ಇ/ಎಂ.ಬಿ.ಬಿ.ಎಸ್ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್–ಟಾಪ್ ಖರೀದಿಸಲು ಸಹಾಯಧನ ನೀಡುವುದು.
3. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಹಿಂದುಳಿದ ವರ್ಗದ ಮಹಿಳೆಯರು ಸರ್ಕಾರದ ಅನುಮೋದಿತ ಸಂಘ ಸಂಸ್ಥೆಗಳಿಂದ ಟೈಲರಿಂಗ್ ತರಬೇತಿ ಪ್ರಮಾಣ ಪತ್ರ ಪಡೆದಿರುವಂತವರಿಗೆ ಹೊಲಿಗೆ ಯಂತ್ರ ಖರೀದಿಸಿ ನೀಡುವುದು.

ಶೇ.5ರ ಕಾರ್ಯಕ್ರಮ (ಅಂಗವಿಕಲರಿಗೆ)

1. ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ವಿಕಲಚೇತನರಿಗೆ ಮೋಟರ್ ಟ್ರೈಸೈಕಲ್ ಖರೀದಿಸಿ ನೀಡುವುದು.

ವಿ.ಸೂ: ಅರ್ಜಿ ನಮೂನೆಯನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆದು ಭರ್ತಿ ಮಾಡಿ, ದಾಖಲೆಗಳನ್ನು ದೃಢೀಕರಿಸಿ ಲಗತ್ತುಗಳೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಅರ್ಹ ಪ.ಜಾ/ಪ.ಪಂ ವರ್ಗದವರು ಮತ್ತು ಇತರೆ ಹಿಂದುಳಿದ ಬಡ ಜನಾಂಗದವರು ಹಾಗೂ ವಿಕಲಚೇತನರು ಅರ್ಜಿಗಳನ್ನು ದಿನಾಂಕ: **30–06–2025** ರೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಅರ್ಜಿಗಳನ್ನು ಅಥವಾ ಅಪೂರ್ಣ ಮಾಹಿತಿಯುಳ್ಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಈ ಕಛೇರಿಯ ಕಲ್ಯಾಣ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ಸಹಿ/–
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ
ಆಡಳಿತಾಧಿಕಾರಿಗಳು ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/ಸ್ಕ್ಯಾನ್/
912/2025–26





ಸ್ವಾವಲಂಬಿ ಗ್ರಾಮ
ಸದೃಢ ಕರ್ನಾಟಕ



ಕಲ್ಯಾಣ ಪಥ
₹1,000
ಕೋಟಿ
ಕಲ್ಯಾಣ ಕರ್ನಾಟಕದ 1,150 ಕಿ.ಮೀ ಗ್ರಾಮೀಣ ರಸ್ತೆಗಳ ಅಭಿವೃದ್ಧಿ

ಪ್ರಗತಿ ಪಥ
₹5,200
ಕೋಟಿ
ರಾಜ್ಯಾದ್ಯಂತ 7,110 ಕಿ.ಮೀ ಗ್ರಾಮೀಣ ರಸ್ತೆಗಳ ಸುಧಾರಣೆ

3,888
ರಾಜ್ಯಾದ್ಯಂತ ಕೂಸಿನಮನೆಗಳ ನಿರ್ಮಾಣ

₹1,273.34
ಕೋಟಿ ತೆರಿಗೆ ಸಂಗ್ರಹ
ಗ್ರಾಮ ಪಂಚಾಯತಿಗಳಿಂದ 2024-25ನೇ ಸಾಲಿನಲ್ಲಿ ಸಾರ್ವತ್ರಿಕ ದಾಖಲೆ

3,469
ತ್ಯಾಜ್ಯ ನಿರ್ವಹಣೆಯ ವಾಹನ ಚಾಲಕಿಯರು

₹22,624
ಕೋಟಿ
ಜಲ ಜೀವನ್ ಮಿಷನ್ ಯೋಜನೆಗಾಗಿ ರಾಜ್ಯ ಸರ್ಕಾರದಿಂದ ಅನುದಾನ

₹370
ನರೇಗಾ ಕೂಲಿ ಕಾರ್ಮಿಕರಿಗೆ ವೇತನ ಹೆಚ್ಚಳ

20 ಲಕ್ಷ ಗ್ರಾಮೀಣ ಆಸ್ತಿಗಳ ಸೃಜನೆ

81
ಸರ್ಕಾರಿ ಸೇವೆಗಳು ಬಾಪೂಜಿ ಸೇವಾ ಕೇಂದ್ರದಲ್ಲಿ ಲಭ್ಯ

5,762
ಗ್ರಾಮೀಣ ಗ್ರಂಥಾಲಯಗಳನ್ನು 'ಅರಿವು' ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ, ಡಿಜಿಟಲ್ ಸ್ಪರ್ಶ

1.49 ಕೋಟಿ
ಪಂಚತಂತ್ರ 2.0 ತಂತ್ರಾಂಶದಲ್ಲಿ ಗ್ರಾಮೀಣ ಆಸ್ತಿಗಳ ನೋಂದಣಿ

26,484
ಗ್ರಾಮಗಳಿಗೆ ಬೂದು ನೀರು ನಿರ್ವಹಣೆ ಅನುಷ್ಠಾನಕ್ಕೆ ಆಡಳಿತಾತ್ಮಕ ಅನುಮೋದನೆ

34,056
ನೀರಿನ ಮಾದರಿಗಳ ಪರೀಕ್ಷೆ
'ಜೀವಜಲ' ಮೊಬೈಲ್ ಅಪ್ಲಿಕೇಶನ್ ಮತ್ತು ಪೋರ್ಟಲ್ ಅಭಿವೃದ್ಧಿ.
ಸಹಾಯವಾಣಿ ವಾಟ್ಸಪ್ ನಂಬರ್
82775 06000

ಕರ್ನಾಟಕ ಭಾರತದಲ್ಲೇ ನಂಬರ್ 1
ಪಂಚಾಯತ್ ಸಬಲೀಕರಣ, ಆರ್ಥಿಕ ಸ್ವಾಯತ್ತತೆ, ಸುಧಾರಣೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು" - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.

ಪ್ರಕಟಣೆ: ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಸಿನಿ ಸಮ್ಮಾನ 3ನೇ ಆವೃತ್ತಿಗೆ ದಿನಗಣನೆ



ತೀರ್ಪುಗಾರರ ಸಮಾಗಮ

‘ಪ್ರಜಾವಾಣಿ’ ದಿನಪತ್ರಿಕೆ ಹಾಗೂ ಕನ್ನಡ ಚಿತ್ರರಂಗದ ಒಡನಾಟಕ್ಕೆ ಹಲವು ದಶಕಗಳ ಇತಿಹಾಸವಿದೆ. ಚಿತ್ರರಂಗದ ಏಳುಬೀಳುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ, ಅದರ ನಾಡಿಮಿಡಿತ ಕೇಳಿಸಿಕೊಳ್ಳುತ್ತಾ, ಅದರೊಳಗಿನ ಸರಿ–ತಪ್ಪುಗಳನ್ನು ಹೊಣೆಗಾರಿಕೆಯಿಂದ ಓದುಗರಿಗೆ ದಾಟಿಸುತ್ತಾ, ಸಿನಿಮಾಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದಲೂ ನೋಡುವ ಗಾಂಭೀರ್ಯವನ್ನು ‘ಪ್ರಜಾವಾಣಿ’ ಇಂದಿಗೂ ಉಳಿಸಿಕೊಂಡು ಬಂದಿದೆ. ಸದ್ಯ 78 ವರ್ಷಗಳನ್ನು ಪೂರೈಸುತ್ತಿರುವ ‘ಪ್ರಜಾವಾಣಿ’ಯು 2023ರಲ್ಲಿ ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮ ಆರಂಭಿಸಿತ್ತು. ಈ ಕಾರ್ಯಕ್ರಮದ ಮೂರನೇ ಆವೃತ್ತಿಯ ಸಮಯ ಇದಾಗಿದೆ.



ಚಂದನವನದ ಘಮಲನ್ನು ಪಸರಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ತನ್ನ ‘ಅಮೃತ ಸಂಭ್ರಮ’ದ ಸಂದರ್ಭದಲ್ಲಿ ‘ಪ್ರಜಾವಾಣಿ’ ಆರಂಭಿಸಿದ್ದ ಈ ವರ್ಣರಂಜಿತ, ಅರ್ಥಗರ್ಭಿತ ಕಾರ್ಯಕ್ರಮದ ಮೂರನೇ ಆವೃತ್ತಿ ಜೂನ್ 27ರಂದು ಬೆಂಗಳೂರಿನಲ್ಲಿ ನಡೆಯಲಿದೆ.

ಮೂರನೇ ಆವೃತ್ತಿಯ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಬುಧವಾರ (ಮೇ 28) ಸಿನಿ ಸಮ್ಮಾನದ ಮುಖ್ಯ ತೀರ್ಪುಗಾರರು ಹಾಗೂ ತಾಂತ್ರಿಕ ತೀರ್ಪುಗಾರರ ಸಮಾಗಮವಿತ್ತು. ಈ ಕಾರ್ಯಕ್ರಮದ ಮುಖಾಂತರ ಮೂರನೇ ಆವೃತ್ತಿಗೆ ಅಧಿಕೃತ ಚಾಲನೆ ದೊರೆಯಿತು.

ಹೊಸಬರು–ಅನುಭವಿಗಳ ಸಮ್ಮಿಲನ

‘ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ತೀರ್ಪುಗಾರರ ಮಂಡಳಿಯಲ್ಲಿ ಕೆಲವು ಹೊಸ ಮುಖಗಳು ಈ ವರ್ಷ ಸೇರ್ಪಡೆಗೊಂಡಿದ್ದವು. ತಮ್ಮದೇ ರಂಗದ ಗೆಳೆಯರ ಬಳಿ ಹರಟುತ್ತಾ, ಸಿನಿ ಸಮ್ಮಾನದ ಪ್ರಕ್ರಿಯೆಗಳ ಬಗ್ಗೆ ಚರ್ಚಿಸುತ್ತಾ ಮೊದಲ ಮತ್ತು ಎರಡನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ನೆನಪುಗಳನ್ನು ಅವರೆಲ್ಲರೂ ಮೆಲುಕು ಹಾಕಿದರು. ತೀರ್ಪುಗಾರರ ಸಮ್ಮಿಲನಕ್ಕೂ ಮುನ್ನ ‘ಕನ್ನಡ ಚಿತ್ರರಂಗದ ಸದ್ಯದ ಸ್ಥಿತಿಗತಿ’ ಕುರಿತ ದುಂಡು ಮೇಜಿನ ಸಭೆ ನಡೆಯಿತು. ಈ ಸಭೆಯಲ್ಲಿ ಚರ್ಚೆಗೊಂಡ ಅಂಶಗಳ ಬಗ್ಗೆಯೂ ತೀರ್ಪುಗಾರರು ಪರಸ್ಪರ ಚರ್ಚೆಯಲ್ಲಿ ತೊಡಗಿದ್ದರು. ಮೊದಲೆರಡು ಆವೃತ್ತಿಗಳ ವಿಡಿಯೊ ತುಣುಕುಗಳು ಇಡೀ ಸಭೆಗೆ ಚೈತನ್ಯ ತುಂಬಿತು.

ಮೂರನೇ ಆವೃತ್ತಿಯ ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥರಾದ ನಿರ್ದೇಶಕ ಟಿ.ಎಸ್.ನಾಗಾಭರಣ, ಮುಖ್ಯ ತೀರ್ಪುಗಾರರಾದ ನಿರ್ದೇಶಕ ಪಿ.ಶೇಷಾದ್ರಿ, ನಿರ್ದೇಶಕಿ ಡಿ. ಸುಮನ್ ಕಿತ್ತೂರು, ನಟ ಕಿಶೋರ್, ನಟಿ ಪೂಜಾ ಗಾಂಧಿ ಹಾಗೂ ತಾಂತ್ರಿಕ ತೀರ್ಪುಗಾರರ ಮಂಡಳಿಯಲ್ಲಿರುವ ಕಲಾ ನಿರ್ದೇಶಕ ಶಶಿಧರ ಅಡಪ, ಸಿನಿಮಾ ವಿಮರ್ಶಕರಾದ ಗಂಗಾಧರ್ ಮೊದಲಿಯಾರ್ ಹಾಗೂ ಬಾ.ನಾ.ಸುಬ್ರಹ್ಮಣ್ಯ, ಸಂಕಲನಕಾರರಾದ ಎಂ.ಎನ್.ಸ್ವಾಮಿ ಹಾಗೂ ಕೆಂಪರಾಜು, ನೃತ್ಯ ನಿರ್ದೇಶಕಿ ಹರಿಣಿ, ಚಿತ್ರಸಾಹಿತಿ–ನಿರ್ದೇಶಕ ನಾಗೇಂದ್ರ ಪ್ರಸಾದ್, ಛಾಯಾಚಿತ್ರಗ್ರಾಹಕ ಸತ್ಯ ಹೆಗಡೆ, ಸಾಹಿತಿ–ಸಿನಿಮಾ ವಿಮರ್ಶಕಿ ಪ್ರತಿಭಾ ನಂದಕುಮಾರ್, ಧ್ವನಿ ಗ್ರಹಣ ಪರಿಣಿತ ಜಾನ್ಸನ್, ನಿರ್ದೇಶಕರಾದ ಜಯತೀರ್ಥ ಹಾಗೂ ಬಿ.ಎಂ.ಗಿರಿರಾಜ್, ನಟರಾದ ಶಿವಧ್ವಜ್ ಹಾಗೂ ಪಿ.ಡಿ.ಸತೀಶ್‌ಚಂದ್ರ, ಸಾಹಿತಿ–ಸಿನಿಮಾ ವಿಮರ್ಶಕಿ ಸಂಧ್ಯಾರಾಣಿ, ಸಿನಿಮಾ ವಿಮರ್ಶಕಿ ಪ್ರೀತಿ ನಾಗರಾಜ್, ಸಿನಿಮಾ ವಿಮರ್ಶಕ ಹರೀಶ್ ಮಲ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್. ತಿಲಕ್ ಕುಮಾರ್, ನಿರ್ದೇಶಕರಾದ ಕೆ.ಎನ್. ಶಾಂತಕುಮಾರ್, ಪಾರುಲ್ ಶಾ, ಚೈತನ್ಯ ನೆಟ್ಟಕಲ್ಲಪ್ಪ, ಸೌಭಾಗ್ಯಲಕ್ಷ್ಮಿ, ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.



ಸಿನಿ ಸಮ್ಮಾನದ ಮೂರನೇ ಆವೃತ್ತಿಗೆ ಚಾಲನೆ ದೊರೆತ ಸಂದರ್ಭ. ನಟ ಕಿಶೋರ್, ನಿರ್ದೇಶಕಿ ಡಿ.ಸುಮನ್ ಕಿತ್ತೂರು, ನಟಿ ಪೂಜಾ ಗಾಂಧಿ, ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥ ಟಿ.ಎಸ್.ನಾಗಾಭರಣ, ನಿರ್ದೇಶಕ ಪಿ.ಶೇಷಾದ್ರಿ ಇದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ ಕೆ.ವಿಶ್ವನಾಥ್, ಛಾಯಾಚಿತ್ರಗ್ರಾಹಕರ ಸಂಘದ ಅಧ್ಯಕ್ಷ ಜೆ.ಜಿ.ಕೃಷ್ಣ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗಿದ್ದು, ಶೀಘ್ರದಲ್ಲೇ ನಾಮನಿರ್ದೇಶನ ಪಟ್ಟಿ ಬಿಡುಗಡೆಯಾಗಲಿದೆ. 15 ವಿಭಾಗಗಳಲ್ಲಿ ಅಸಾಧಾರಣ ಪ್ರತಿಭೆಗಳ ಗುರುತಿಸುವಿಕೆ ಈ ಮೂಲಕ ನಡೆಯಲಿದ್ದು, ಜೊತೆಗೆ ಸಾರ್ವಜನಿಕರೂ ಶ್ರೇಷ್ಠ ನಟ, ನಟಿ, ಚಿತ್ರ ಹಾಗೂ ಅತ್ಯುತ್ತಮ ಸಂಗೀತ ನಿರ್ದೇಶಕರನ್ನು ಮತದಾನದ ಮುಖಾಂತರ ಆಯ್ಕೆ ಮಾಡುವ ಪ್ರಕ್ರಿಯೆ ಇರಲಿದೆ ❖

> **ಪಾರದರ್ಶಕ ಆಯ್ಕೆ**
> ಬಹಳ ದೊಡ್ಡ ತೀರ್ಪುಗಾರರ ಸಾಗರವಿದು. ಈ ಪ್ರಶಸ್ತಿಯ ಪ್ರಕ್ರಿಯೆಯನ್ನು ಗಮನಿಸಿದಾಗ ಯಾರು ಯಾರನ್ನೂ ಶಿಫಾರಸು ಮಾಡುವುದಕ್ಕಾಗಲಿ, ಪ್ರಭಾವ ಬೀರಲು ಸಾಧ್ಯವಿಲ್ಲ. ಇಲ್ಲಿ ಸಿನಿಮಾ ಹಾಗೂ ಅದರ ಗುಣಗಳಷ್ಟೇ ಪ್ರಭಾವ ಬೀರಲು ಸಾಧ್ಯ. ಪಾರದರ್ಶಕವಾಗಿರುವ ಏಕೈಕ ತೀರ್ಪುಗಾರರ ಸಮಿತಿ ಇದ್ದರೆ ಅದು ‘ಪ್ರಜಾವಾಣಿ’ಯ ಈ ‘ಸಿನಿ ಸಮ್ಮಾನ’ದಲ್ಲಿದೆ.
> **–ಟಿ.ಎಸ್.ನಾಗಾಭರಣ**
> ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥ

‘ನಮ್ಮ ಸಿನಿಮಾ–ನಮ್ಮ ಹೆಮ್ಮೆಯ ಕನಸು’

ಮೂರನೇ ಆವೃತ್ತಿಗೆ ಅಧಿಕೃತ ಚಾಲನೆ ನೀಡಿ ಮಾತನಾಡಿದ ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥರಾದ ಟಿ.ಎಸ್.ನಾಗಾಭರಣ, ‘ಸಾಹಿತ್ಯ ಕೃತಿಯನ್ನು, ಚಿತ್ರಕಲೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಕೆಲವೇ ಅಂಶಗಳಲ್ಲಿ ಮಾತನಾಡಬಹುದು. ಆದರೆ ಸಿನಿಮಾವನ್ನು ಅವಲೋಕಿಸಿ ಶ್ರೇಷ್ಠ ಗುಣಗಳನ್ನು ಹುಡುಕುವುದು ಕಷ್ಟಕರ. ಏಕೆಂದರೆ ಇದೊಂದು ಸಾಂಘಿಕ ಕಾರ್ಯ. ಒಂದು ಕಮ್ಮಿ ಒಂದು ಹೆಚ್ಚು ಎಂದಿಲ್ಲ’ ಎಂದರು.

‘ಪ್ರೇಕ್ಷಕನಿಗೆ ಸಿನಿಮಾ ಮನರಂಜನೆಯ ಜೊತೆಗೆ ಮನೋವಿಸ್ತಾರವನ್ನು ಮಾಡುತ್ತದೆ. ಸಿನಿಮಾದ ಗುಣಾತ್ಮಕ ಅಂಶಗಳನ್ನು ಪರಿಗಣಿಸಿ ಅದಕ್ಕೊಂದು ಸಮ್ಮಾನ ನೀಡಿ ಅದನ್ನು ಚಿರಸ್ಥಾಯಿಯಾಗಿಸುವ ಕೆಲಸ ಈ ಕಾರ್ಯಕ್ರಮದ ಮೂಲಕ ಆಗುತ್ತಿದೆ. ಹೊಸ ಹೊಸ ಯೋಜನೆಗಳು ‘ಸಿನಿ ಸಮ್ಮಾನ’ದ ಪ್ರತಿ ಆವೃತ್ತಿಯಲ್ಲೂ ಕಾರ್ಯಗತವಾಗಿದೆ. ಈ ವರ್ಷ ಕನ್ನಡ ಸಿನಿಮಾಗೆ ನಮ್ಮ ಕೊಡುಗೆ ಏನಿರಬೇಕು ಎನ್ನುವ ಚಿಂತನೆ ನಡೆಯಿತು. ಇದೊಂದು ಸಣ್ಣ ಹೆಜ್ಜೆ. ಇಂತಹ ಸಣ್ಣ ಸಣ್ಣ ಹೆಜ್ಜೆಗಳ ಮೂಲಕ ಭವಿಷ್ಯದಲ್ಲಿ ನಮ್ಮ ಸಿನಿಮಾ ನಮ್ಮ ಹೆಮ್ಮೆಯಾಗಬೇಕು, ವೈಭವವಾಗಬೇಕು ಎನ್ನುವ ಕನಸನ್ನು ಪ್ರಜಾವಾಣಿ ಕಾಣುತ್ತಿದೆ. ಇದು ಅಭಿನಂದನಾರ್ಹ’ ಎಂದರು ನಾಗಾಭರಣ.

> ಪ್ರಶಸ್ತಿಯನ್ನು ಯಾವ ಸಂಸ್ಥೆ ಯಾರಿಗೆ ಕೊಡುತ್ತಿದೆ ಎನ್ನುವುದರಲ್ಲಿ ಪ್ರಶಸ್ತಿಯ ಗೌರವ ಅಡಗಿದೆ. ಇಂತಹ ವಿಶ್ವಾಸಾರ್ಹತೆ ಹೊಂದಿರುವ ಸಂಸ್ಥೆಗಳಲ್ಲಿ ಪ್ರಜಾವಾಣಿಯೂ ಒಂದು. ಈ ಪ್ರಶಸ್ತಿಯ ಪ್ರಕ್ರಿಯೆ ಸರಳವಾಗಿಲ್ಲ. ರಾಷ್ಟ್ರ ಪ್ರಶಸ್ತಿಗೆ ಹತ್ತಿರವಾಗಿ ಈ ಪ್ರಶಸ್ತಿ ಇದೆ. ಹೀಗಾಗಿ ಅರ್ಹರಿಗೆ ಪ್ರಶಸ್ತಿ ದೊರಕುತ್ತಿದೆ.
> **–ಪಿ.ಶೇಷಾದ್ರಿ,** ಮುಖ್ಯ ತೀರ್ಪುಗಾರ

> ನನಗೆ ವೈಯಕ್ತಿಕವಾಗಿ ಪೈಪೋಟಿಯಲ್ಲಿ ನಂಬಿಕೆ ಇಲ್ಲ. ಆದರೂ ಒಳ್ಳೆಯ ಕೆಲಸವನ್ನು ಗುರುತಿಸಿ, ದಾಖಲಿಸಬೇಕು. ನನ್ನ ಪ್ರಕಾರದಲ್ಲಿ ನಾಮನಿರ್ದೇಶಿತರೆಲ್ಲರೂ ವಿಜೇತರೇ. ಒಳ್ಳೆಯ ಕೆಲಸವನ್ನು ಗುರುತಿಸುವ ಕೆಲಸ ಇಲ್ಲಿ ಪ್ರಾಮಾಣಿಕವಾಗಿ ಆಗುತ್ತದೆ ಎನ್ನುವ ನಂಬಿಕೆ ನನಗಿದೆ.
> **–ಕಿಶೋರ್,** ಮುಖ್ಯ ತೀರ್ಪುಗಾರ

> ನಮ್ಮನ್ನೆಲ್ಲರನ್ನು ರೂಪಿಸಿದ್ದೇ ಪ್ರಜಾವಾಣಿ. ಇದೇ ಸಂಸ್ಥೆಯ ಪ್ರಶಸ್ತಿ ಕಾರ್ಯಕ್ರಮಕ್ಕೆ ಮುಖ್ಯ ತೀರ್ಪುಗಾರಳಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆ ತಂದಿದೆ. ಇದು ಬೇರೆ ಪ್ರಶಸ್ತಿಗಳಂತಲ್ಲ. ಇದೀಗ ಚಿತ್ರತಂಡಗಳೇ ‘ಪ್ರಜಾವಾಣಿ ಪ್ರಶಸ್ತಿ ಯಾವಾಗ?’ ಎಂದು ಕೇಳುವ ಹಂತಕ್ಕೆ ಇದು ಬೆಳೆದಿದೆ.
> **–ಡಿ. ಸುಮನ್ ಕಿತ್ತೂರು,** ಮುಖ್ಯ ತೀರ್ಪುಗಾರ್ತಿ

> ಮೂರನೇ ಆವೃತ್ತಿಗೆ ಕಾಲಿಡುತ್ತಿದ್ದೇವೆ. ಪ್ರತಿಭೆಗಳಿಗೆ ಒಳ್ಳೆಯ ವೇದಿಕೆ ದೊರಕಿದೆ. ತಾಂತ್ರಿಕ ತೀರ್ಪುಗಾರಳಾಗಿದ್ದ ನಾನು ಈ ವರ್ಷ ಮುಖ್ಯ ತೀರ್ಪುಗಾರಳಾಗಿದ್ದೇನೆ. ಇದರಿಂದ ಜವಾಬ್ದಾರಿಯೂ ಹೆಚ್ಚಿದೆ. ಕಳೆದ ವರ್ಷಕ್ಕಿಂತ ಅದ್ದೂರಿಯಾಗಿ ಈ ವರ್ಷ ಕಾರ್ಯಕ್ರಮ ನಡೆಯಲಿದೆ.
> **–ಪೂಜಾ ಗಾಂಧಿ,** ಮುಖ್ಯ ತೀರ್ಪುಗಾರ್ತಿ

ಹೃತಿಕ್ ಜೊತೆ ಹೊಂಬಾಳೆ ಸಿನಿಮಾ

ಒಟ್ಟು ಏಳು ಸಿನಿಮಾಗಳ ನಿರ್ಮಾಣ



ಹೃತಿಕ್ ರೋಷನ್

ಭಾರತೀಯ ಚಿತ್ರರಂಗದ ಅತ್ಯಂತ ದೊಡ್ಡ ನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ ಹೊಂಬಾಳೆ ಫಿಲ್ಮ್ಸ್ ‘ಕೆ.ಜಿ.ಎಫ್’ ಸರಣಿ ಮೂಲಕ ಕನ್ನಡ ಚಿತ್ರರಂಗವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದಿತ್ತು. ಇದೀಗ ಬಾಲಿವುಡ್ ನಟ ಹೃತಿಕ್ ರೋಷನ್ ಜೊತೆ ಸಿನಿಮಾ ಮಾಡುತ್ತಿರುವಾಗಿ ಹೊಂಬಾಳೆ ಫಿಲ್ಮ್ಸ್‌ನ ಸಂಸ್ಥಾಪಕ ವಿಜಯ್ ಕಿರಗಂದೂರು ತಿಳಿಸಿದ್ದಾರೆ. ಈ ಮೂಲಕ ತಮ್ಮ ಸಿನಿ ಬ್ಯಾಂಕ್‌ಗೆ ಮತ್ತೊಂದು ಸಿನಿಮಾವನ್ನು ಹೊಂಬಾಳೆ ಸೇರ್ಪಡೆ ಮಾಡಿದೆ.

ಸದ್ಯ ‘ವಾರ್–2’ ಹಾಗೂ ‘ಕ್ರಿಶ್–4’ ಬಿಡುಗಡೆಯ ನಿರೀಕ್ಷೆಯಲ್ಲಿರುವ ಹೃತಿಕ್ ಹೊಸ ಪ್ರಾಜೆಕ್ಟ್‌ಗೆ ಹಸಿರು ನಿಶಾನೆ ನೀಡಿದ್ದಾರೆ. ‘ಕೆ.ಜಿ.ಎಫ್.’ ಸರಣಿ, ‘ಸಲಾರ್–1’ ಹಾಗೂ ‘ಕಾಂತಾರ’ ಮೂಲಕ ಹಿಟ್ ಪ್ಯಾನ್ ಇಂಡಿಯಾ ಸಿನಿಮಾಗಳನ್ನು ನೀಡಿರುವ ಹೊಂಬಾಳೆ ಇದೀಗ ಮತ್ತೊಂದು ಬಿಗ್‌ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾ ನಿರ್ಮಾಣಕ್ಕೆ ಸಜ್ಜಾಗಿದೆ.

ಸದ್ಯ ರಿಷಬ್ ಶೆಟ್ಟಿ ನಿರ್ದೇಶನದ ‘ಕಾಂತಾರ’ ಪ್ರೀಕ್ವೆಲ್ ನಿರ್ಮಾಣ ಮಾಡುತ್ತಿರುವ ಹೊಂಬಾಳೆ ಫಿಲ್ಮ್ಸ್ ಬಳಿಕ ‘ಸಲಾರ್’ ಸಿನಿಮಾದ ಎರಡನೇ ಭಾಗ ಕೈಗೆತ್ತಿಕೊಳ್ಳಲಿದೆ. ಇದು 2026ರಲ್ಲಿ ತೆರೆಕಾಣಲಿದೆ. ಇದರ ಜೊತೆಗೆ ನಟ ಪ್ರಭಾಸ್ ಅವರ ಇನ್ನೆರಡು ಸಿನಿಮಾಗಳನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡಲಿದೆ. ಈ ಎರಡೂ ಸಿನಿಮಾಗಳು ಕ್ರಮವಾಗಿ 2027 ಹಾಗೂ 2028ರಲ್ಲಿ ಬಿಡುಗಡೆಯಾಗಲಿವೆ. ಪೃಥ್ವಿರಾಜ್ ನಿರ್ದೇಶನದ ಸಿನಿಮಾವೊಂದನ್ನು ತನ್ನ ಬ್ಯಾನರ್‌ನಡಿ ನಿರ್ಮಾಣ ಮಾಡುತ್ತಿರುವುದಾಗಿ ಇತ್ತೀಚೆಗೆ ಹೊಂಬಾಳೆ ತಿಳಿಸಿತ್ತು. ಜೊತೆಗೆ ‘ಕೆ.ಜಿ.ಎಫ್. ಚಾಪ್ಟರ್ 3’ ಸೆಟ್ಟೇರುವ ಮುನ್ಸೂಚನೆಯನ್ನು ಹೊಂಬಾಳೆ ಫಿಲ್ಮ್ಸ್ ತಿಂಗಳ ಹಿಂದೆಯೇ ನೀಡಿತ್ತು. ❖

> ಇತ್ತೀಚಿನ ವರ್ಷಗಳಲ್ಲಿ ವಿಭಿನ್ನವಾದ ಕಥೆಗಳನ್ನು ಹೊಂಬಾಳೆ ಫಿಲ್ಮ್ಸ್ ಪ್ರೇಕ್ಷಕರ ಎದುರಿಗೆ ಇರಿಸಿದೆ. ಇದೀಗ ದೊಡ್ಡದಾದ ಕನಸೊಂದನ್ನು ಕಾಣುತ್ತಿದ್ದೇವೆ. ನಮ್ಮ ಈ ಕನಸಿಗೆ ಜೀವ ತುಂಬಲಿದ್ದೇವೆ.
> **ಹೃತಿಕ್ ರೋಷನ್,** ನಟ



ವಿಜಯ್ ಕಿರಗಂದೂರು

ರಾಮಾಯಣಕ್ಕೆ ಬಂದ ಗೈ ನೋರಿಸ್

ತಮ್ಮ ನಟನೆಯ 19ನೇ ಸಿನಿಮಾ ‘ಟಾಕ್ಸಿಕ್’ ಚಿತ್ರೀಕರಣದ ಜೊತೆಜೊತೆಯೇ ಯಶ್ ‘ರಾಮಾಯಣ’ಕ್ಕೂ ಇತ್ತೀಚೆಗೆ ಹೆಜ್ಜೆ ಇಟ್ಟಿದ್ದರು. ಈ ಸಿನಿಮಾ ಸೆಟ್‌ನೊಳಗಿಂದ ಮೊದಲ ಸುದ್ದಿ ಹೊರಬಿದ್ದಿದೆ. ಹಾಲಿವುಡ್‌ನ ಖ್ಯಾತ ಸಾಹಸ ನಿರ್ದೇಶಕ ಗೈ ನೋರಿಸ್ ಇದೀಗ ‘ರಾಮಾಯಣ’ ಚಿತ್ರತಂಡ ಸೇರಿಕೊಂಡಿದ್ದಾರೆ.

ಯಶ್ ಜೊತೆಗೂಡಿ ಗೈ ನೋರಿಸ್ ಸಾಹಸ ದೃಶ್ಯಗಳನ್ನು ಯೋಜನೆ ಮಾಡುತ್ತಿರುವ ಫೋಟೊವನ್ನು ಚಿತ್ರತಂಡ ಹಂಚಿಕೊಂಡಿದೆ. ‘ಟಾಕ್ಸಿಕ್’ ಚಿತ್ರದಲ್ಲಿ ಹಾಲಿವುಡ್ ಸಾಹಸ ನಿರ್ದೇಶಕ ಜೆ.ಜೆ.ಪೆರ್ರಿ ಜೊತೆಗೂಡಿ ಕೆಲಸ ಮಾಡಿರುವ ಯಶ್ ಇದೀಗ ಮತ್ತೋರ್ವ ಹಾಲಿವುಡ್ ಸಾಹಸ ನಿರ್ದೇಶಕರೊಬ್ಬರ ಜೊತೆ ಸಿನಿಮಾ ಮಾಡುತ್ತಿದ್ದಾರೆ. ನಿತೇಶ್ ತಿವಾರಿ ನಿರ್ದೇಶನದಲ್ಲಿ ‘ರಾಮಾಯಣ’ ಸಿನಿಮಾ ಮೂಡಿಬರಲಿದ್ದು, ನಮಿತ್ ಮಲ್ಹೋತ್ರಾ ಅವರ ಪ್ರೈಂ ಫೋಕಸ್ ಸ್ಟುಡಿಯೊಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಲಿದೆ. ಯಶ್ ತಮ್ಮ ಮಾನ್‌ಸ್ಟರ್‌ಮೈಂಡ್ ಪ್ರೊಡಕ್ಷನ್‌ನಡಿ ಸಹ ನಿರ್ಮಾಪಕರಾಗಿದ್ದಾರೆ. ಬಾಲಿವುಡ್ ನಟ ರಣಬೀರ್ ಕಪೂರ್ ‘ರಾಮ’ನ ಪಾತ್ರದಲ್ಲಿ, ನಟಿ ಸಾಯಿ ಪಲ್ಲವಿ ‘ಸೀತೆ’ಯಾಗಿ ಹಾಗೂ ಯಶ್ ರಾವಣನ ಪಾತ್ರಧಾರಿಯಾಗಿ ನಟಿಸಲಿದ್ದಾರೆ

‘ರಾಮಾಯಣ’ ಸಿನಿಮಾಗಾಗಿ ಬೃಹತ್ ಸೆಟ್‌ಗಳನ್ನು ಹಾಕಲಾಗಿದ್ದು ಬಿಗ್‌ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣವಾಗುತ್ತಿದೆ. ಹಾಲಿವುಡ್‌ನ ‘ಮ್ಯಾಡ್ ಮ್ಯಾಕ್ಸ್’, ‘ದಿ ಸುಸೈಡ್ ಸ್ಕ್ವಾಡ್’ ಸಿನಿಮಾಗಳಿಗೆ ಸ್ಟಂಟ್ ಡೈರೆಕ್ಷನ್ ಮಾಡಿರುವ ಗೈ ನೋರಿಸ್ ಇದೀಗ ‘ರಾಮಾಯಣ’ದ ಸಾಹಸ ದೃಶ್ಯಗಳಿಗೆ ಜೀವ ತುಂಬಲಿದ್ದಾರೆ. ರಾವಣನ ಸಾಹಸ ದೃಶ್ಯಗಳನ್ನು ಅದ್ದೂರಿಯಾಗಿ ಸೆರೆಹಿಡಿಯುವ ಯೋಜನೆ ಹಾಕಿಕೊಂಡಿದೆ ಚಿತ್ರತಂಡ. ಈಗಾಗಲೇ ಚಿತ್ರದ ಚಿತ್ರೀಕರಣ ಪ್ರಾರಂಭವಾಗಿದ್ದು, ‘ರಾಮಾಯಣ’ ಭಾಗ 1ರಲ್ಲಿ ಸುಮಾರು 60–70 ದಿನ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳಿದ್ದಾರೆ ಯಶ್.

‘ಟಾಕ್ಸಿಕ್’ 2026ರ ಮಾರ್ಚ್ 19ರಂದು ತೆರೆಕಾಣುತ್ತಿದ್ದು, 2026ರ ದೀಪಾವಳಿಗೆ ‘ರಾಮಾಯಣ’ದ ಮೊದಲ ಭಾಗವೂ ತೆರೆಕಾಣಲಿದೆ. 2027ರ ದೀಪಾವಳಿಗೆ ಎರಡನೇ ಭಾಗ ತೆರೆಕಾಣಲಿದೆ. ❖



ಗೈ ನೋರಿಸ್, ಯಶ್

ಜುಲೈ 18ಕ್ಕೆ ಎಕ್ಕ



ಯುವ ರಾಜ್‌ಕುಮಾರ್

‘ರತ್ನನ್ ಪ್ರಪಂಚ’ ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ ‘ಎಕ್ಕ’ ಸಿನಿಮಾ ಜೂನ್ 6ರ ಬದಲಾಗಿ ಜುಲೈ 18ರಂದು ತೆರೆಕಾಣಲಿದೆ ಎಂದು ಚಿತ್ರತಂಡ ಘೋಷಿಸಿದೆ. ‘ಯುವ’ ಸಿನಿಮಾ ಬಳಿಕ ಯುವ ನಟಿಸಿರುವ ಸಿನಿಮಾ ಇದಾಗಿದೆ. ಈಗಾಗಲೇ ಟೀಸರ್ ಹಾಗೂ ಟೈಟಲ್ ಟ್ರ್ಯಾಕ್ ಮೂಲಕ ಚಂದನವನದಲ್ಲಿ ಸದ್ದು ಮಾಡಿದೆ ಈ ಸಿನಿಮಾ. ‘ಜಾಕಿ’ ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಕಾಣಿಸಿಕೊಂಡಿದ್ದ ಸ್ಟೈಲ್‌ನಲ್ಲೇ ‘ಎಕ್ಕ’ ಸಿನಿಮಾದ ಟೀಸರ್‌ನಲ್ಲಿ ಯುವ ಕಾಣಿಸಿಕೊಂಡಿದ್ದಾರೆ. ಬೆಂಗಳೂರು ಭೂಗತ ಜಗತ್ತಿನ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಪದ ಹಾಗೂ ‘ಸಲಗ’ ಸಿನಿಮಾ ಖ್ಯಾತಿಯ ಸಂಜನಾ ಆನಂದ್ ನಾಯಕಿಯರಾಗಿ ನಟಿಸಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಅತುಲ್ ಕುಲಕರ್ಣಿ, ಡೆಡ್ಲಿ ಆದಿತ್ಯ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ❖

ತೆರೆಗಳಲ್ಲಿಂದು ಎರಡು ಸಿನಿಮಾಗಳು



ಗೀತಪ್ರಿಯಾ

ಇಂದು (ಮೇ 30) ತೆರೆಗಳಲ್ಲಿ ಎರಡು ಸಿನಿಮಾ ಬಿಡುಗಡೆಯಾಗುತ್ತಿವೆ.

ತಾಯವ್ವ: ಗೀತಪ್ರಿಯಾ ನಿರ್ಮಾಣ ಮಾಡಿ ನಾಯಕಿಯಾಗಿ ನಟಿಸಿದ ಸಿನಿಮಾ ಇದಾಗಿದೆ. ‘ಇದು ಅಪ್ಪಟ ಗ್ರಾಮೀಣ ಸೊಗಡಿನ, ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಸಾಮಾಜಿಕ ಕಳಕಳಿಯ ಚಿತ್ರ. ಗ್ರಾಮೀಣ ಪ್ರದೇಶದ ಸೂಲಗಿತ್ತಿ ಮಹಿಳೆಯೊಬ್ಬಳು ಹೇಗೆ ಹೆಣ್ಣುಮಕ್ಕಳ ರಕ್ಷಣೆ ಮಾಡಿ, ಸಮಾಜಕ್ಕೆ ಮಾದರಿಯಾಗುತ್ತಾಳೆ ಎಂಬ ವಿಷಯದ ಸುತ್ತ ಚಿತ್ರದ ಕಥಾಹಂದರವಿದೆ’ ಎಂದಿದೆ ಚಿತ್ರತಂಡ. ‘ತಾಯವ್ವ’ಳಾಗಿ ಗೀತಪ್ರಿಯಾ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ‘ಅಮರ ಫಿಲಂಸ್’ ಬ್ಯಾನರಿನಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಸಾತ್ವಿಕ ಪವನ್ ಕುಮಾರ್ ನಿರ್ದೇಶನ ಮಾಡಿದ್ದಾರೆ.

ಠಾಣೆ: ಎಸ್.ಭಗತ್ ರಾಜ್ ನಿರ್ದೇಶನದ, ಪ್ರವೀಣ್ ನಾಯಕನಾಗಿ ನಟಿಸಿರುವ ಸಿನಿಮಾವಿದು. ಪಿ.ಸಿ.ಡಿ 2 ಫಿಲಂ ಫ್ಯಾಕ್ಟರಿ ಲಾಂಛನದಲ್ಲಿ ಗಾಯತ್ರಿ ಎಂ. ಈ ಸಿನಿಮಾ ನಿರ್ಮಿಸಿದ್ದಾರೆ. ಒಂದು ಪೊಲೀಸ್ ಠಾಣೆಯಲ್ಲಿನ ಒಂದು ಪ್ರಕರಣದ ಕುರಿತು ಹಾಗೂ ನಾಲ್ಕು ಪ್ರಮುಖ ಪಾತ್ರಗಳ ಸುತ್ತ ನಡೆಯುವ ಕಥಾಹಂದರವನ್ನು ಈ ಚಿತ್ರ ಹೊಂದಿದೆ. ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ನಾಯಕ ಪ್ರವೀಣ್ ಅವರಿಗೆ ಇದು ಚೊಚ್ಚಲ ಸಿನಿಮಾ. ರೋಹಿತ್ ನಾಗೇಶ್, ಪಿ.ಡಿ.ಸತೀಶ್ ಚಂದ್ರ, ಮಾನಸ ಹೊಳ್ಳ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಶ್ರೀಕೃಷ್ಣದೇವರಾಯ ವಿ.ವಿ. ಘಟಿಕೋತ್ಸವ ಹಗರಣ– ಸರ್ಕಾರಕ್ಕೆ ವರದಿ ಸಲ್ಲಿಕೆ

3,330 ಪ್ರಮಾಣ ಪತ್ರಗಳಲ್ಲಿ ಅಕ್ರಮ

• ಹರಿಶಂಕರ್ ಆರ್.

ಬಳ್ಳಾರಿ: ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ (ವಿಎಸ್‌ಕೆಯು) ನಡೆದಿದೆ ಎನ್ನಲಾದ ಘಟಿಕೋತ್ಸವ ಪ್ರಮಾಣ ಪತ್ರ ಹಗರಣದ ವರದಿಯನ್ನು ವಿಶ್ವವಿದ್ಯಾಲಯವು ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿದೆ.

'ಒಟ್ಟು 3,330 ಮಂದಿಯಿಂದ ಅಕ್ರಮವಾಗಿ ಹಣ ಪಡೆದು, ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು ಹಂಚಲಾಗಿದೆ' ಎಂದು ತನಿಖಾ ಸಮಿತಿ ತನ್ನ ವರದಿಯಲ್ಲಿ ಹೇಳಿದೆ. ತನಿಖಾ ತಂಡವು ಒಟ್ಟು 45 ಸಾವಿರ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದ್ದು, 68 ಪುಟಗಳ ವರದಿಯನ್ನು ಸಲ್ಲಿಸಿದೆ.

'ಒಂದೊಂದು ಪ್ರಮಾಣ ಪತ್ರಕ್ಕೆ ಕನಿಷ್ಠ ₹8 ಸಾವಿರಕ್ಕೂ ಹೆಚ್ಚಿನ ಹಣವನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿರಬಹುದು. ಇದರಿಂದ ವಿಶ್ವವಿದ್ಯಾಲಯದ ಬೊಕ್ಕಸಕ್ಕೆ ಭಾರೀ ಪ್ರಮಾಣದಲ್ಲಿ ಆರ್ಥಿಕ ನಷ್ಟವಾಗಿದೆ ಎಂಬ ಅಂಶ ವರದಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

> **ಘಟಿಕೋತ್ಸವದ ಎರಡೂವರೆ ಸಾವಿರದಷ್ಟು ಪ್ರಮಾಣ ಪತ್ರಗಳು ಅಕ್ರಮವಾಗಿರುವುದು ಗೊತ್ತಾಗಿದೆ. ಕನಿಷ್ಠ ₹70 ಲಕ್ಷದಷ್ಟು ವಂಚನೆ ಆಗಿರಬಹುದು**
> **ಪ್ರೊ ಮುನಿರಾಜು,** ಕುಲಪತಿ, ವಿಎಸ್‌ಕೆಯು, ಬಳ್ಳಾರಿ

ಇದೇ ವರ್ಷ ಫೆಬ್ರುವರಿಯಲ್ಲಿ ಘಟಿಕೋತ್ಸವ ಪ್ರಮಾಣ ಪತ್ರ ಹಗರಣ ಬಯಲಾಗಿತ್ತು. ಇದರ ತನಿಖೆಗೆ ಮೌಲ್ಯಮಾಪನ ಕುಲಸಚಿವರು ಫೆಬ್ರುವರಿ 20ರಂದು 9 ಜನರ ಸಮಿತಿ ರಚಿಸಿದ್ದರು. ಐದು ದಿನಗಳಲ್ಲಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, ತಡವಾಗಿ ವರದಿ ಸಲ್ಲಿಕೆಯಾಗಿದೆ. 'ಇದೇ ವರದಿ ಆಧರಿಸಿ ಈ ಹಿಂದಿನ ಇಬ್ಬರು ಮೌಲ್ಯಮಾಪನ ಕುಲಸಚಿವರು ಸೇರಿ, ಹಲವು ಸಿಬ್ಬಂದಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಅವರನ್ನು ತನಿಖಾ ಸಮಿತಿಯು ವಿಚಾರಣೆಗೆ ಒಳಪಡಿಸಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ ಮುನಿರಾಜು 'ಪ್ರಜಾವಾಣಿ'ಗೆ ತಿಳಿಸಿದರು. 'ತನಿಖಾ ವರದಿ ಸಲ್ಲಿಕೆಯಾಗಿದೆ. ಆದರೆ, ಆರೋಪಿಗಳ ವಿಚಾರಣೆ ನಡೆದಿಲ್ಲ. ವಿಚಾರಣೆ ಬಳಿಕ ವಿಷಯವನ್ನು ಸಿಂಡಿಕೇಟ್ ಸಭೆಗೆ ತರಲಾಗುವುದು. ನಂತರ ಉನ್ನತ ಮಟ್ಟದ ತನಿಖೆ ನಡೆಸಬೇಕೆ ಅಥವಾ ಅಥವಾ ಎಫ್‌ಐಆರ್ ದಾಖಲಿಸಬೇಕೆ ಎಂಬುದನ್ನು ತೀರ್ಮಾನಿಸುತ್ತೇವೆ' ಎಂದರು.

ಏನಿದು ಹಗರಣ?

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕುಲಪತಿ ಸಹಿ ನಕಲು ಮಾಡಿ ಸಾವಿರಾರು ಮಂದಿಗೆ ಘಟಿಕೋತ್ಸವದ ನಕಲಿ ಪ್ರಮಾಣ ಪತ್ರಗಳನ್ನು ಹಂಚಲಾಗಿದೆ ಎಂಬ ಆರೋಪ ವ್ಯಕ್ತವಾಗಿತ್ತು. ಇದರಲ್ಲಿ ವಿಶ್ವವಿದ್ಯಾಲಯದ ಉನ್ನತ ಹುದ್ದೆಯಲ್ಲಿದ್ದವರು, ಪರೀಕ್ಷಾಂಗ ವಿಭಾಗದ ಗುತ್ತಿಗೆ ನೌಕರರು ಭಾಗಿಯಾಗಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿತ್ತು. ಇದರ ತನಿಖೆಗೆ ತಂಡ ರಚಿಸಲಾಗಿತ್ತು. 10 ವರ್ಷಗಳ ಪ್ರಮಾಣ ಪತ್ರಗಳನ್ನು ಮತ್ತು ಅವುಗಳಿಗೆ ನೀಡಲಾಗಿದ್ದ ರಸೀದಿಗಳನ್ನು ತನಿಖಾ ತಂಡ ಜಾಲಾಡಿತ್ತು.

ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕ್ರಮಕ್ಕೆ ಆಗ್ರಹ

ರಾಜ್ಯಪಾಲಗೆ ಕಾಂಗ್ರೆಸ್ ನಿಯೋಗ ದೂರು

ಪ್ರಜಾವಾಣಿ ವಾರ್ತೆ


ಕಾಂಗ್ರೆಸ್ ನಿಯೋಗದಿಂದ ರಾಜ್ಯಪಾಲ ಥಾವರಚಂದ್ ಗೆಹಲೋತ್‌ಗೆ ದೂರು

ಬೆಂಗಳೂರು: ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರನ್ನು ಪಾಕಿಸ್ತಾನಿ ಎಂದು ನಿಂದಿಸಿರುವ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ನಾಯಿಗೆ ಹೋಲಿಸಿದ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕಾನೂನಾತ್ಮಕ ಹಾಗೂ ಸಂವಿಧಾನಾತ್ಮಕವಾಗಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಿಧಾನ ಪರಿಷತ್ ಸದಸ್ಯರನ್ನು ಒಳಗೊಂಡ ಕಾಂಗ್ರೆಸ್ ನಿಯೋಗ ರಾಜ್ಯಪಾಲರಿಗೆ ಗುರುವಾರ ದೂರು ಸಲ್ಲಿಸಿದೆ.

ವಿಧಾನ ಪರಿಷತ್ ಆಡಳಿತ ಪಕ್ಷದ ನಾಯಕ ಎನ್.ಎಸ್. ಬೋಸರಾಜು ಮತ್ತು ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿದೆ.

ಬಳಿಕ ಮಾತನಾಡಿದ ಬೋಸರಾಜು, 'ಬೀದಿಯಲ್ಲಿ ನಿಂತು ರವಿಕುಮಾರ್ ಮತ್ತು ಛಲವಾದಿ ನಾರಾಯಣಸ್ವಾಮಿ ಸಂವಿಧಾನ ವಿರೋಧಿ ಮಾತುಗಳನ್ನು ಆಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿಯ ಹೇಳಿಕೆ ನೀಡುವುದು ಸಮಂಜಸವಲ್ಲ' ಎಂದರು.

ಸಲೀಂ ಅಹ್ಮದ್ ಮಾತನಾಡಿ, 'ಛಲವಾದಿ ನಾರಾಯಣಸ್ವಾಮಿ ಮತ್ತು ರವಿಕುಮಾರ್ ಅವರನ್ನು ಪರಿಷತ್ ಸದಸ್ಯತ್ವದಿಂದ ಅಮಾನತುಗೊಳಿಸಬೇಕು' ಎಂದು ಆಗ್ರಹಿಸಿದರು.

ಪರಿಷತ್ ಸದಸ್ಯರಾದ ವಸಂತಕುಮಾರ್, ಎಂ.ಎಲ್. ಅನಿಲ್ ಕುಮಾರ್, ಜಗದೇವ ಗುತ್ತೇದಾರ್, ಎಸ್. ರವಿ, ಡಿ.ಟಿ. ಶ್ರೀನಿವಾಸ್, ದಿನೇಶ್ ಗೂಳಿಗೌಡ, ಚನ್ನರಾಜ್ ಹಟ್ಟಿಹೊಳಿ, ಬಸವನಗೌಡ ಬಾದರ್ಲಿ, ಪುಟ್ಟಣ್ಣ, ನಸೀರ್ ಅಹ್ಮದ್, ಗೋವಿಂದರಾಜು, ನಾಗರಾಜ್ ಯಾದವ್, ಮಂಜುನಾಥ್ ಭಂಡಾರಿ ನಿಯೋಗದಲ್ಲಿದ್ದರು.

ಶಾಸಕ ರವಿಕುಮಾರ್ ವಿರುದ್ಧ ಹೈಕೋರ್ಟ್ ಗರಂ

ತನಿಖೆಗೆ ಸಹಕರಿಸಿ: ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ತನಿಖೆಗೆ ಸಹಕರಿಸಿ' ಎಂದು ಆರೋಪಿಯಾದ ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್‌ಗೆ ಹೈಕೋರ್ಟ್ ತಾಕೀತು ಮಾಡಿದೆ.

'ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿಜೆಪಿ ಶಾಸಕ ಎನ್.ರವಿಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಆರೋಪಿಯು ತನಿಖೆಗೆ ಸಹಕರಿಸುವುದಾದರೆ ಬಂಧಿಸುವುದಿಲ್ಲ' ಎಂದು ಮೌಖಿಕ ಭರವಸೆ ನೀಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಆರೋಪಿಯು ಒಂದು ವೇಳೆ ಕ್ಷಮಾಪಣೆ ಕೇಳಿದರೆ ಅದನ್ನು ಪ್ರಮಾಣಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ. ವಿನೋದ್ ಕುಮಾರ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಜೂನ್ 19ಕ್ಕೆ ಮುಂದೂಡಿತು. ರವಿಕುಮಾರ್ ವಿರುದ್ಧ ಇದೇ 26ರಂದು ಎಫ್‌ಐಆರ್ ದಾಖಲಾಗಿದ್ದು, ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 197, 224, 299, 302, 351,353 ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989ರ ಕಲಂ 31(1)(ಆರ್)ರ ಅಪರಾಧಗಳಡಿ ಕಲಬುರಗಿ ಜಿಲ್ಲಾ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ನ್ಯಾಯಿಕ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ನೋಟಿಸ್ ಜಾರಿ

ಕಲಬುರಗಿ: ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣ ಸಂಬಂಧ ಆರೋಪಿಯಾದ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್‌ಗೆ ಪೊಲೀಸರು ಎರಡನೇ ನೋಟಿಸ್ ನೀಡಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜಾತಿ ನಿಂದನೆ ಮಾಡಿ ಹಾಗೂ ಜಿಲ್ಲಾಧಿಕಾರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರೋಪದಡಿ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆಗೆ ಹಾಜರು ಆಗುವಂತೆ ಎರಡು ದಿನಗಳ ಹಿಂದೆಯೇ ನೋಟಿಸ್ ನೀಡಲಾಗಿತ್ತು. ವಿಚಾರಣೆಗೆ ಗೈರಾಗಿದ್ದರಿಂದ ಮತ್ತೊಂದು ನೋಟಿಸ್ ಹೊರಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಎರಡನೇ ಕೋವಿಡ್ ಮರಣ ಪ್ರಕರಣ ವರದಿ

ಕೋವಿಡ್: 70 ವರ್ಷದ ವೃದ್ಧ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಾಗಿದ್ದ ಬೆಳಗಾವಿಯ ಬೆನಕನಹಳ್ಳಿ ಗ್ರಾಮದ 70 ವರ್ಷದ ವೃದ್ಧರೊಬ್ಬರು ಬುಧವಾರ ರಾತ್ರಿ ಮೃತಪಟ್ಟಿದ್ದು, ಈ ವರ್ಷ ರಾಜ್ಯದಲ್ಲಿ ವರದಿಯಾದ ಎರಡನೇ ಕೋವಿಡ್ ಮರಣ ಪ್ರಕರಣ ಇದಾಗಿದೆ.

ಅವರು ಮಧುಮೇಹ, ಅಧಿಕ ರಕ್ತದೊತ್ತಡ, ಮೂತ್ರಪಿಂಡ, ಹೃದಯ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದರು ಉಸಿರಾಟ ಸಂಬಂಧಿ ತೊಂದರೆ ಕಾರಣ ಇದೇ 26 ರಂದು ಅಲ್ಲಿನ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅವರಿಗೆ ಕೋವಿಡ್ ಮಾರ್ಗಸೂಚಿಗಳ ಅನುಸಾರ ಚಿಕಿತ್ಸೆ ಒದಗಿಸಿ, ರೋಗಿಯ ಸ್ಥಿತಿಗತಿ ಮೇಲೆ ನಿಗಾ ಇರಿಸಲಾಗಿತ್ತು. ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದ ಕಾರಣ ಅವರು ಮೃತಪಟ್ಟಿದ್ದಾರೆ ಎಂದು ಹೇಳಿದೆ.

ರಾಜ್ಯದಲ್ಲಿ ಗುರುವಾರ 42 ಕೋವಿಡ್ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಈ ವರ್ಷ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 253ಕ್ಕೆ ಏರಿಕೆಯಾಗಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದ್ದು, 24 ಗಂಟೆಗಳ ಅವಧಿಯಲ್ಲಿ 513 ಮಾದರಿಗಳ ಪರೀಕ್ಷೆ ಮಾಡಲಾಗಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 148ಕ್ಕೆ ತಲುಪಿದೆ.

ಬಂಡೀಪುರದಲ್ಲಿ ರಾತ್ರಿ ಸಂಚಾರ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಂಡೀಪುರ ರಕ್ಷಿತಾರಣ್ಯದೊಳಗೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ ವೇಳೆ ಕಾರಿನಲ್ಲಿ ಸಂಚರಿಸುತ್ತಿರುವ ವಿಡಿಯೊವೊಂದನ್ನು 'ಆಲ್ಟ್ ನ್ಯೂಸ್' ಸಂಸ್ಥಾಪಕ ಮಹಮ್ಮದ್ ಜುಬೇರ್ 'ಎಕ್ಸ್'ನಲ್ಲಿ ಹಂಚಿಕೊಂಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದೆ.

'ಬಂಡೀಪುರ' ಎಂಬ ಶೀರ್ಷಿಕೆಯೊಂದಿಗೆ ಹಂಚಿಕೊಂಡಿರುವ ವಿಡಿಯೊಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರತಿಕ್ರಿಯಿಸಿದ್ದು, 'ಬಂಡೀಪುರ ಅರಣ್ಯದೊಳಗೆ ರಾತ್ರಿ ವಾಹನಗಳ ಸಂಚಾರ ನಿರ್ಬಂಧವನ್ನು ಕಾಂಗ್ರೆಸ್ ಸರ್ಕಾರ ತೆಗೆದುಹಾಕಿದೆಯೇ' ಎಂದು ಪ್ರಶ್ನಿಸಿದ್ದಾರೆ.'ರಾತ್ರಿ ಸಂಚಾರಕ್ಕೆ ಮಹಮ್ಮದ್ ಜುಬೇರ್ ಅವರಿಗೆ ವಿಶೇಷ ಅನುಮತಿ ನೀಡಲಾಗಿದೆಯೇ?' ಎಂದು ಕೇಳಿದ್ದಾರೆ.

'ಮಹಮ್ಮದ್ ವಾಹನ ಪ್ರವೇಶಕ್ಕೆ ಹೇಗೆ ಅನುಮತಿ ನೀಡಲಾಯಿತು? ನಿಯಮಬಾಹಿರವಾಗಿ ಸಂಚರಿಸಿದ್ದರೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಒತ್ತಾಯಿಸಿದ್ದಾರೆ.

'ಪುರಾವೆ ನೀಡಿದರೆ ಕ್ರಮ'

'ಬಂಡೀಪುರ ಅರಣ್ಯದೊಳಗೆ ರಾತ್ರಿ 9ರಿಂದ ಬೆಳಿಗ್ಗೆ 6ರವರೆಗೆ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ನಿಷೇಧದ ಅವಧಿಯಲ್ಲಿ ಚೆಕ್‌ಪೋಸ್ಟ್ ದಾಟಿ ವಾಹನಗಳು ಪ್ರವೇಶಿಸುವುದು ಸಾಧ್ಯವಿಲ್ಲ. ನಿಯಮ ಉಲ್ಲಂಘಿಸಿರುವ ಬಗ್ಗೆ ಪುರಾವೆ ನೀಡಿದರೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದ ನಿರ್ದೇಶಕ ಪ್ರಭಾಕರನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮೀಸಲು: ದತ್ತಾಂಶ ಬಳಕೆಗೆ ಆದೇಶ

ಒಂದನೇ ಪುಟದಿಂದ...

'ಪುರಸಭೆಗಳಿಗೆ ಆಯ್ಕೆಯಾದ ವ್ಯಕ್ತಿಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸಬೇಕು ಮತ್ತು ನಿರ್ದಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಉಪಸ್ಥಿತಿಯನ್ನು ಪರಿಗಣಿಸಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ಮೀಸಲು ಪಟ್ಟಿ ಅಂತಿಮಗೊಳಿಸಬೇಕು' ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.



'ಹಾಲಿ ನಿಗದಿಪಡಿಸಿರುವ ಅವಧಿ ಮುಗಿಯುವವರೆಗೆ ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಗಳನ್ನು ಖಾಲಿ ಬಿಡಬೇಕು' ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, 'ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಗಳನ್ನು ಖಾಲಿ ಬಿಟ್ಟರೆ ಸಂಸ್ಥೆಗಳ ಆಡಳಿತ ನಿರ್ವಹಣೆಗೆ ತೊಂದರೆ ಆಗುತ್ತದೆ. ಹಾಗಾಗಿ, ಸರ್ಕಾರ ಆ ಹುದ್ದೆಗಳ ಮೀಸಲು ಮುಕ್ತವಾಗಿ ಇರಿಸಿ ಚುನಾವಣೆ ನಡೆಸಬಹುದು' ಎಂದು ಆದೇಶಿಸಿದೆ.

'ಚುನಾಯಿತ ಪುರಸಭೆ ಪ್ರತಿನಿಧಿಗಳ ದತ್ತಾಂಶ ಸಂಗ್ರಹಿಸಿ ಮೀಸಲಾತಿ ಪಟ್ಟಿ ಮಾಡಿದರೆ ಮತ್ತು ಮೀಸಲು ವರ್ಗಕ್ಕೆ ಯಾವುದೇ ಅಭ್ಯರ್ಥಿ ಕಂಡುಬಂದಿಲ್ಲ ಎಂದಾದರೆ, ಅದಕ್ಕೆ ಅನುಗುಣವಾಗಿ ಸೂಕ್ತ ಬದಲಾವಣೆ ಮಾಡಬಹುದು' ಎಂದೂ ಹೇಳಿದೆ.

ರಸ್ತೆಯ ಬದಿ ನಿಂತಿದ್ದವನಿಗೆ ಸಿಡಿದಿದ್ದ ಕೆಸರು

ಕೆಸರು ಸಿಡಿದಿದ್ದರಿಂದ ಯುವಕ ಬಸ್ ಅಡ್ಡಗಟ್ಟಿ ನನ್ನ ಹಾಗೂ ನಿರ್ವಾಹಕನೊಂದಿಗೆ ಮಾತಿನ ಚಕಮಕಿ ನಡೆಸಿದ. ಬಳಿಕ ನನ್ನ ಮೇಲೆ ಮತ್ತು ಜಗಳ ಬಿಡಿಸಲು ಬಂದ ನಿರ್ವಾಹಕ ಸಿದ್ದಲಿಂಗಪ್ಪ ಮೇಲೆ ಹಲ್ಲೆ ನಡೆಸಿದ್ದಾನೆ – ದೂರಿನಲ್ಲಿ ಬಸ್ ಚಾಲಕನ ಹೇಳಿಕೆ.

ಎಫ್‌ಐಆರ್‌ಗೆ ಹೆದರಿ 18 ವರ್ಷದ ಯುವಕ ನೇಣಿಗೆ ಶರಣು

ಲಿಂಗಸುಗೂರು (ರಾಯಚೂರು ಜಿಲ್ಲೆ): ಬಸ್ ಚಲಿಸುವಾಗ ಕೆಸರು ಸಿಡಿದಿದ್ದಕ್ಕೆ ಬಸ್ ಚಾಲಕ ಹಾಗೂ ನಿರ್ವಾಹಕರೊಂದಿಗೆ ಮಾತಿನ ಚಕಮಕಿ ನಡೆದಿದ್ದು, ತನ್ನ ಮೇಲೆ ಬಸ್ ಚಾಲಕ ಪ್ರಕರಣ ದಾಖಲಿಸಿದ್ದರಿಂದ ಬಂಧನವಾಗುವ ಭೀತಿಯಿಂದ ಯುವಕ ಗುರುವಾರ ನೇಣಿಗೆ ಶರಣಾಗಿದ್ದಾನೆ.

ತಾಲ್ಲೂಕಿನ ಹುನಕುಂಟಿ ಗ್ರಾಮದ ಮುತ್ತಣ್ಣ ದೇವಪ್ಪ ಕುರಿ (18) ನೇಣಿಗೆ ಶರಣಾದ ಯುವಕ.

ಘಟನೆಯ ವಿವರ: ಸಜ್ಜಲಗುಡ್ಡ-ಬೆಂಗಳೂರು ಮಾರ್ಗದ ಬಸ್ ಬುಧವಾರ ಸಂಜೆ ಸಜ್ಜಲಗುಡ್ಡಕ್ಕೆ ತೆರಳುವಾಗ ಹುನಕುಂಟಿ ಗ್ರಾಮದಲ್ಲಿ ಯುವಕ ಮುತ್ತಣ್ಣ ದೇವಪ್ಪ ಕುರಿ ಅವರಿಗೆ ಕೆಸರು ಸಿಡಿದಿತ್ತು. ಘಟನೆ ಕುರಿತು ಬಸ್ ಚಾಲಕ ಬಸಪ್ಪ ಕುಂಬಾರ ಲಿಂಗಸುಗೂರು ಪೊಲೀಸ್ ಠಾಣೆಗೆ ಮುತ್ತಣ್ಣ ಕುರಿ ವಿರುದ್ಧ ದೂರು ನೀಡಿದ್ದರು.



ಈ ವಿಷಯ ಮುತ್ತಣ್ಣನಿಗೆ ಗೊತ್ತಾಗಿತ್ತು. 'ತನ್ನ ಮೇಲೆ ಪ್ರಕರಣ ದಾಖಲಾಗಿದೆ' ಎಂದು ಹೆದರಿದ ಮುತ್ತಣ್ಣ ಜಮೀನೊಂದರಲ್ಲಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮುತ್ತಣ್ಣನ ಸಾವಿಗೆ ಚಾಲಕ ಮತ್ತು ನಿರ್ವಾಹಕ ಕಾರಣ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ಕುಟುಂಬ ಸದಸ್ಯರು ಹಾಗೂ ಗ್ರಾಮಸ್ಥರು ಪಟ್ಟಣದ ಸಾರಿಗೆ ಘಟಕದ ಎದುರು ಮುತ್ತಣ್ಣನ ಶವ ಇಟ್ಟು ಪ್ರತಿಭಟನೆ ನಡೆಸಿದರು. ಇದರಿಂದ ಕೆಲ ಹೊತ್ತು ವಾತಾವರಣ ಬಿಗುವಿನಿಂದ ಕೂಡಿತ್ತು.

ಚಾಲಕ, ನಿರ್ವಾಹಕನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮುತ್ತಣ್ಣ ಕುಟುಂಬದವರು ದೂರು ದಾಖಲಿಸಿದ್ದಾರೆ.

ಅಬ್ದುಲ್ ಕೊಲೆ: ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಸಭೆಯಲ್ಲಿ ಗದ್ದಲ

ಮುಖಂಡರ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಟ್ವಾಳದ ಇರಾ ಕೋಡಿಯಲ್ಲಿ ನಡೆದ ಅಬ್ದುಲ್ ರಹಿಮಾನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾ ಕಾಂಗ್ರೆಸ್‌ನ ಮುಸ್ಲಿಂ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮುಖಂಡರ ರಾಜೀನಾಮೆಗೆ ಆಗ್ರಹಿಸಲಾಯಿತು. ವೇದಿಕೆಯತ್ತ ನುಗ್ಗಿದ ಕಾರ್ಯಕರ್ತರು ಗದ್ದಲ ಎಬ್ಬಿಸಿದ್ದರಿಂದ ಸಭೆಯನ್ನು ಅರ್ಧಕ್ಕೇ ಮೊಟಕುಗೊಳಿಸಲಾಯಿತು.

ನಗರದ ಬೋಳಾರ್‌ನಲ್ಲಿರುವ ಶಾದಿ ಮಹಲ್‌ನಲ್ಲಿ ಸಂಜೆ ಆಯೋಜಿಸಿದ್ದ ಸಭೆಯಲ್ಲಿ ಕಾಂಗ್ರೆಸ್ ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಶಾಹುಲ್ ಹಮೀದ್ ಮಾತನಾಡಿ, ‘ಜಿಲ್ಲೆಯಲ್ಲಿ ನಡೆಯುತ್ತಿರುವ ಕೋಮು ಹಿಂಸೆ ತಡೆಯಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಪ್ರೀತಿಯಿಂದ ಕಟ್ಟಿಬೆಳೆಸಿದ ಪಕ್ಷದಲ್ಲಿದ್ದರೂ ನಮಗೆ ಏನೂ ಮಾಡಲಾಗುತ್ತಿಲ್ಲ. ಹೀಗಾಗಿ ರಹಿಮಾನ್ ಕೊಲೆಗೆ ನಾವೆಲ್ಲರೂ ಹೊಣೆಗಾರರಾಗುತ್ತೇವೆ. ಆದ್ದರಿಂದ ರಾಜೀನಾಮೆ ನೀಡಲು ಮುಂದಾಗಿದ್ದೆವು. ಆದರೆ ಸ್ವಲ್ಪ ಕಾಲ ಕಾಯುವಂತೆ ಸರ್ಕಾರದ ಪ್ರತಿನಿಧಿಗಳು ಕೋರಿದ್ದಾರೆ’ ಎಂದರು.

ಅಷ್ಟರಲ್ಲಿ ಸಭಾಂಗಣದ ವಿವಿಧ ಕಡೆಯಿಂದ ಎದ್ದುನಿಂತ ಕಾರ್ಯಕರ್ತರು ‘ನಿಮ್ಮ ಭಾಷಣ ನಮಗೆ ಬೇಕಾಗಿಲ್ಲ. ಸುತ್ತು ಬಳಸಿ ಮಾತನಾಡದೆ, ರಾಜೀನಾಮೆ ಕೊಡುತ್ತೀರೋ ಇಲ್ಲವೋ ಎಂಬುದನ್ನು ನೇರವಾಗಿ ಹೇಳಿ’ ಎಂದರು.

ಅದಕ್ಕೆ ಶಾಹುಲ್ ಉತ್ತರಿಸುತ್ತಿದ್ದಂತೆ ಮತ್ತೆ ಏರುಧ್ವನಿಯಲ್ಲಿ ಮಾತನಾಡಿದ ಕೆಲ ಕಾರ್ಯಕರ್ತರು ವೇದಿಕೆಯತ್ತ ನುಗ್ಗಿದರು. ರಾಜೀನಾಮೆ ನೀಡಲೇ ಬೇಕು, ಅದು ಬಿಟ್ಟು ಬೇರೆ ಮಾತನಾಡಬೇಡಿ ಎಂದು ಒತ್ತಾಯಿಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್, ಮುಖಂಡರಾದ ಅಶ್ರಫ್, ಅಬ್ದುಲ್ ರವೂಫ್ ಮುಂತಾದವರು ಕಾರ್ಯಕರ್ತರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ.

ಕೆಲ ಕಾಲ ಗೊಂದಲ ಮುಂದುವರಿಯಿತು. ‘ನಾವು ರಾಜೀನಾಮೆ ಸಲ್ಲಿಸಿ ಆಗಿದೆ. ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ’ ಎಂದು ಹೇಳಿ ಅಬ್ದುಲ್ ರವೂಫ್ ಕುಳಿತುಕೊಂಡು ಸಭೆ ಮುಂದುವರಿಸಲು ಅವಕಾಶ ನೀಡಬೇಕು ಎಂದು ಕೋರಿದರು. ಆದರೂ ಕಾರ್ಯಕರ್ತರ ಆಕ್ರೋಶ ತಣಿಯಲಿಲ್ಲ. ‘ಇದು ಕಾಂಗ್ರೆಸ್ ಸಭೆ. ನೀವೆಲ್ಲ ನಿಷ್ಠಾವಂತ ಕಾರ್ಯಕರ್ತರಾಗಿದ್ದರೆ ಶಾಂತರಾಗಬೇಕು’ ಎಂದು ಕೋರಲಾಯಿತು. ಆದರೂ ಗದ್ದಲ ಮುಂದುವರಿಯಿತು. ಕೊನೆಗೆ ಶಾಹುಲ್ ಹಮೀದ್ ‘ನಾವೆಲ್ಲರೂ ರಾಜೀನಾಮೆ ಸಲ್ಲಿಸಿದ್ದೇವೆ. ಸಾಮೂಹಿಕ ರಾಜೀನಾಮೆ ಪತ್ರವನ್ನು ಒಂದು ವಾರದ ಒಳಗೆ ಕೆಪಿಸಿಸಿಗೆ ಕಳುಹಿಸಲಾಗುವುದು’ ಎಂದರು.

ಕಾಂಗ್ರೆಸ್‌ನ ವಿವಿಧ ಘಟಕಗಳಲ್ಲಿರುವ ಮುಸ್ಲಿಂ ಮುಖಂಡರು ರಾಜೀನಾಮೆ ಪತ್ರ ಭರ್ತಿ ಮಾಡಿಕೊಟ್ಟರು.



ಸಭೆಯಲ್ಲಿ ಮುಖಂಡರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು – ಪ್ರಜಾವಾಣಿ ಚಿತ್ರ

‘ಕೊಲೆಗೆ ರಾಜ್ಯ ಸರ್ಕಾರವೇ ಹೊಣೆ’

‘ಅಬ್ದುಲ್ ರಹಿಮಾನ್ ಅವರ ಕೊಲೆಗೆ ರಾಜ್ಯ ಸರ್ಕಾರವೇ ಹೊಣೆಯಾಗಿದ್ದು ಗೃಹ ಇಲಾಖೆಯ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ’ ಎಂದು ಎಸ್‌ಕೆಎಸ್‌ಎಸ್‌ಎಫ್ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಅನೀಸ್ ಕೌಸರಿ ಅವರು ಆರೋಪಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ‘ಜಿಲ್ಲೆಯಲ್ಲಿ ಕಾನೂನಿನ ಭಯವಿಲ್ಲದೆ ದ್ವೇಷ ಭಾಷಣ ಮಾಡಲಾಗುತ್ತಿದೆ. ಸುಹಾಸ್ ಶೆಟ್ಟಿ ಕೊಲೆಯ ನಂತರ ಇದು ತಾರಕಕ್ಕೇರಿದೆ. ಇಂಥ ಕೃತ್ಯ ನಡೆಸುವವರನ್ನು ಬಂಧಿಸಿ ಶಿಕ್ಷೆಗೆ ಗುರಿಯಾಗಿಸಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಬದುಕು ದುಸ್ತರವಾಗಬಹುದು’ ಎಂದರು.

> ಕಾಂಗ್ರೆಸ್ ಪಕ್ಷದಲ್ಲಿರುವ ಮುಸ್ಲಿಂ ಮುಖಂಡರೆಲ್ಲರೂ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದ್ದಾರೆ. ಒಂದು ವಾರದಲ್ಲಿ ಅದನ್ನೆಲ್ಲ ಒಟ್ಟು ಮಾಡಿ ಪ್ರದೇಶ ಕಾಂಗ್ರೆಸ್ ಸಮಿತಿಗೆ ಕಳುಹಿಸಲಾಗುವುದು. ಮುಂದಿನ ತೀರ್ಮಾನ ಸಮಿತಿಗೆ ಬಿಟ್ಟದ್ದು
>
> **ಶಾಹುಲ್ ಹಮೀದ್,** ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ

ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗದಲ್ಲಿ ಕಾರ್ಯನಿರ್ವಹಣೆ

ಕೋಮುವಾದ, ಸಂಘರ್ಷ ನಿಗ್ರಹಕ್ಕೆ ವಿಶೇಷ ಕಾರ್ಯಪಡೆ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮು ದ್ವೇಷ ಪ್ರಚೋದನೆಯನ್ನು ನಿಗ್ರಹಿಸಲು ರಾಜ್ಯ ಸರ್ಕಾರವು ‘ವಿಶೇಷ ಕಾರ್ಯಪಡೆ’ಯನ್ನು ರಚಿಸಿದೆ. ಈ ಕಾರ್ಯಪಡೆಯು ಮೂರು ತಂಡಗಳನ್ನು ಹೊಂದಿದ್ದು ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲಿವೆ.

‘ದಕ್ಷಿಣ ಕನ್ನಡ ಜಿಲ್ಲೆಯು ಕೋಮು ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಹೆಚ್ಚು ಸೂಕ್ಷ್ಮವಾಗುತ್ತಿದ್ದು, ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತವಾಗುತ್ತಿವೆ. ಶಾಂತಿ, ಸಾಮಾಜಿಕ ಒಗ್ಗಟ್ಟನ್ನು ತರುವ ಉದ್ದೇಶದಿಂದ ಈ ಕಾರ್ಯಪಡೆ ರಚಿಸಲಾಗುತ್ತಿದೆ’ ಎಂದು ಗೃಹ ಇಲಾಖೆಯು ಆದೇಶ ಪತ್ರದಲ್ಲಿ ತಿಳಿಸಿದೆ.

ಈಗಾಗಲೇ ಅಸ್ತಿತ್ವದಲ್ಲಿ ಇರುವ ನಕ್ಸಲ್ ನಿಗ್ರಹ ಪಡೆಯಿಂದ ಒಂದು ಡಿಜಿಪಿ, ಒಂದು ಡಿವೈಎಸ್‌ಪಿ, ಒಂದು ಸಹಾಯಕ ಕಮಾಂಡೆಂಟ್ ನಾಲ್ವರು ಪಿಐ, 16 ಪಿಎಸ್‌ಐ ಸೇರಿ 248 ಹುದ್ದೆಗಳನ್ನು ಬೇರ್ಪಡಿಸಲಾಗಿದೆ. ಇಷ್ಟೇ ಸಿಬ್ಬಂದಿ ಇರುವ ವಿಶೇಷ ಕಾರ್ಯಪಡೆಯನ್ನು ರಚಿಲಾಗಿದೆ.

ವಿಶೇಷ ಕಾರ್ಯಪಡೆಯ ಪ್ರತಿ ತಂಡಕ್ಕೆ ಆಯಾ ಜಿಲ್ಲಾ ಪೊಲೀಸ್ ಕಮಿಷನರ್ ಅಥವಾ ಎಸ್‌ಪಿ ಅಗತ್ಯ ಮೂಲಸೌಕರ್ಯವನ್ನು ಒದಗಿಸಬೇಕು. ಈ ತಂಡಗಳು ಸಂಬಂಧಿತ ವಲಯ ಐಜಿಪಿ ಅವರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಲಿವೆ ಎಂದು ಆದೇಶದಲ್ಲಿ ತಿಳಿಸಿದೆ.

ಕಾರ್ಯಪಡೆ ಕರ್ತವ್ಯ

1. ದ್ವೇಷ ಭಾಷಣ, ಉದ್ರೇಕಕಾರಿ ಘಟನೆಗಳು ಮತ್ತು ಕೋಮು ಸಂಬಂಧಿ ಘಟನೆಗಳ ಸಂಬಂಧ ಮಾಧ್ಯಮ ಹಾಗೂ ಸಾಮಾಜಿಕ ಮಾಧ್ಯಮಗಳಿಂದ ಗುಪ್ತಚರ ಮಾಹಿತಿ ಸಂಗ್ರಹ. ಇದಕ್ಕಾಗಿ ತಾಂತ್ರಿಕ ಕೋಶ ರಚನೆ
2. ಸಂಭಾವ್ಯ ಕೋಮು ಹಿಂಸಾಚಾರದ ಬಗ್ಗೆ ಕಣ್ಗಾವಲು ಮತ್ತು ಮಾನವ ಗುಪ್ತಚರ ಮೂಲಕ ಎಚ್ಚರಿಕೆ ರವಾನೆ
3. ಕಟ್ಟುನಿಟ್ಟಿನ ಕ್ರಮಗಳ ಮೂಲಕ ಜನರ ವಿಶ್ವಾಸವೃದ್ಧಿ ಕ್ರಮ ಕೈಗೊಳ್ಳುವುದು
4. ಮೂಲಭೂತವಾದ ಪ್ರತಿಪಾದನೆಯನ್ನು ಗುರುತಿಸುವುದು
5. ಕೋಮು ಗಲಭೆ ಸಂದರ್ಭಗಳಲ್ಲಿ ವಿಶೇಷ ಕಾರ್ಯಪಡೆಯ ಅಧಿಕಾರಿ ಮತ್ತು ಸಿಬ್ಬಂದಿಯ ನಿಯೋಜನೆ

ಮಂಗಳೂರು ಕಮಿಷನರ್, ಎಸ್‌ಪಿ ಬದಲಾವಣೆ

ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಅವರನ್ನು ಬದಲಿಸಿ, ಆ ಜಾಗಕ್ಕೆ ಗುಪ್ತಚರ ವಿಭಾಗದ ಡಿಜಿಪಿ ಸುಧೀರ್ ಕುಮಾರ್ ರೆಡ್ಡಿ ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ಅವರನ್ನು ವರ್ಗಾವಣೆ ಮಾಡಿ ಆ ಜಾಗಕ್ಕೆ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ಅರುಣ್ ಅವರನ್ನು ನಿಯೋಜಿಸಲಾಗಿದೆ. ದ್ವೇಷ ಭಾಷಣ ಮಾಡಿದ್ದ ಆರೋಪದಲ್ಲಿ ಬಿಜೆಪಿ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿದ ಕಾರಣಕ್ಕೆ ಬಿಜೆಪಿ ಮುಖಂಡರ ಕೆಂಗಣ್ಣಿಗೆ ಅರುಣ್ ಅವರು ಈ ಹಿಂದೆ ಗುರಿಯಾಗಿದ್ದರು.

ಗುಪ್ತಚರ ವಿಭಾಗದ ವರಿಷ್ಠ ಹರಿರಾಮ್ ಶಂಕರ್ ಅವರನ್ನು ಉಡುಪಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಿಸಲಾಗಿದೆ. ಹರಿರಾಮ್ ಶಂಕರ್ ಅವರು ಈ ಹಿಂದೆ ಮಂಗಳೂರು ಡಿಸಿಪಿ ಮತ್ತು ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಅನುಪಮ್ ಅಗರವಾಲ್ ಅವರನ್ನು ಸಿಐಡಿ (ಆರ್ಥಿಕ ಅಪರಾಧಗಳು) ವಿಭಾಗದ ಡಿಜಿಪಿ ಆಗಿ ನೇಮಿಸಲಾಗಿದೆ. ಆದರೆ, ಯತೀಶ್ ಎನ್. ಅವರಿಗೆ ಹುದ್ದೆ ತೋರಿಸಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಜಿ. ಪರಮೇಶ್ವರ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಜೊತೆ ಚರ್ಚೆ ನಡೆಸಿದ ಬೆನ್ನಲ್ಲೆ ಈ ಆದೇಶ ಹೊರಬಿದ್ದಿದೆ.

ದಕ್ಷಿಣ ಕನ್ನಡ: ಹರಿಪ್ರಸಾದ್‌ಗೆ ಜವಾಬ್ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಮು ಗಲಭೆಗೆ ಕಾರಣರಾಗುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಕಾನೂನಿನ ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಯಾರೂ ಕಾನೂನಿಗಿಂತ ದೊಡ್ಡವರಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರ ಮನೆಯಲ್ಲಿ ಗುರುವಾರ ಬೆಳಿಗ್ಗೆ ಉಪಾಹಾರ ಸೇವಿಸಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ, ‘ಸಾಮಾನ್ಯ ವಿಷಯಗಳ ಜೊತೆಗೆ ಮಂಗಳೂರಿನಲ್ಲಿ ಸೌಹಾರ್ದ ನೆಲಸಬೇಕು, ದ್ವೇಷ ಯಾವುದೇ ಕಾರಣಕ್ಕೂ ಇರಬಾರದು ಎಂಬ ಬಗ್ಗೆ ಹರಿಪ್ರಸಾದ್ ಜೊತೆ ಚರ್ಚೆ ನಡೆಸಿದ್ದೇನೆ’ ಎಂದರು.



ಸಿದ್ದರಾಮಯ್ಯ ಮತ್ತು ಬಿ.ಕೆ. ಹರಿಪ್ರಸಾದ್ ಮಾತುಕತೆ

ಪರಿಸ್ಥಿತಿ ನಿಭಾಯಿಸಲು ವಿಫಲ: ಮಂಗಳೂರಿನಲ್ಲಿ ನಡೆದ ಕೊಲೆ ಘಟನೆಗಳ ನಂತರದಲ್ಲಿ ಶಾಂತಿ, ಸೌಹಾರ್ದ ನೆಲಸುವಂತೆ ಮಾಡುವಲ್ಲಿ ಉಳ್ಳಾಲ ಕ್ಷೇತ್ರದ ಶಾಸಕರೂ ಆಗಿರುವ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ವಿಫಲವಾಗಿರುವ ಬಗ್ಗೆ ಹರಿಪ್ರಸಾದ್ ಜೊತೆ ಮುಖ್ಯಮಂತ್ರಿ ವಿಚಾರ ವಿನಿಮಯ ನಡೆಸಿದರು. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಗೆ ತೆರಳಿ ಪರಿಶೀಲನೆ ನಡೆಸುವಂತೆ ಜವಾಬ್ದಾರಿ ನೀಡಿದ್ದಾರೆ ಎಂದು ಗೊತ್ತಾಗಿದೆ.

ಇದೇ ಸಂದರ್ಭದಲ್ಲಿ ಪರಿಷತ್ ಸಭಾಪತಿ ಸ್ಥಾನದ ಬಗ್ಗೆಯೂ ಹರಿಪ್ರಸಾದ್ ಅವರ ಜೊತೆ ಮುಖ್ಯಮಂತ್ರಿ ಪ್ರಸ್ತಾಪಿಸಿದ್ದಾರೆ. ಆದರೆ, ಸಭಾಪತಿ ಸ್ಥಾನವನ್ನು ಈಗಾಗಲೇ ನಿರಾಕರಿಸಿರುವ ಅವರು, ಈ ಹಿಂದಿನ ಮಾತನ್ನೇ ಪುನರುಚ್ಚರಿಸಿದ್ದಾರೆ ಎಂದು ಗೊತ್ತಾಗಿದೆ.

ಪಕ್ಷದ ಸಂಸದ ತರೂರ್ ಮೇಲೆಯೇ ಮುಗಿಬಿದ್ದ ‘ಕೈ’ ನಾಯಕರು

‘ಪ್ರತೀಕಾರದ ಬಗ್ಗೆ ಮಾತ್ರ ಮಾತನಾಡಿರುವೆ’

ಪ್ರಜಾವಾಣಿ ವಾರ್ತೆ/ಪಿಟಿಐ

ಪನಾಮಾ ಸಿಟಿ/ನವದೆಹಲಿ: ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತೀಯ ಪಡೆಗಳು ನಡೆಸಿದ ಕಾರ್ಯಾಚರಣೆಯನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಹೊಗಳಿದ ಬೆನ್ನಲ್ಲೇ, ಅವರ ಮತ್ತು ಪಕ್ಷದ ಕೆಲ ನಾಯಕರ ನಡುವಿನ ಜಟಾಪಟಿ ತೀವ್ರಗೊಂಡಿದೆ.

‘ಆಪರೇಷನ್ ಸಿಂಧೂರ’ ಶ್ಲಾಘಿಸಿದ ತಮ್ಮ ನಡೆಯನ್ನು ಟೀಕಿಸಿದವರ ವಿರುದ್ಧ ತರೂರ್ ಹರಿಹಾಯ್ದಿದ್ದಾರೆ. ಇನ್ನೊಂದೆಡೆ, 2018ರಲ್ಲಿ ಪ್ರಕಟವಾಗಿರುವ ತರೂರ್ ಅವರ ಕೃತಿ ‘ದಿ ಪ್ಯಾರಡಾಕ್ಸಿಕಲ್ ಪ್ರೈಮ್ ಮಿನಿಸ್ಟರ್: ನರೇಂದ್ರ ಮೋದಿ ಅಂಡ್ ಹಿಸ್ ಇಂಡಿಯಾ’ದ ಕೆಲ ಭಾಗಗಳನ್ನು ಉಲ್ಲೇಖಿಸುವ ಮೂಲಕ ಕಾಂಗ್ರೆಸ್ ಮುಖಂಡರು ತರೂರ್ ಅವರಿಗೆ ತಿರುಗೇಟು ನೀಡಿದ್ದಾರೆ.

‘ಮೋದಿ ನೇತೃತ್ವದ ಸರ್ಕಾರ ಸಶಸ್ತ್ರ ಪಡೆಗಳ ಕಾರ್ಯವನ್ನು ರಾಜಕೀಯಗೊಳಿಸುವುದಕ್ಕೆ ಹಿಂಜರಿಯಲಿಲ್ಲ’ ಎಂದು ತರೂರ್ ಈ ಕೃತಿಯಲ್ಲಿ ಟೀಕಿಸಿದ್ದಾರೆ. ಪುಸ್ತಕದ ಈ ಭಾಗಗಳನ್ನು ಕಾಂಗ್ರೆಸ್ ನಾಯಕ ಪವನ್ ಖೇರಾ ಹಂಚಿಕೊಂಡು, ತರೂರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ತರೂರ್ ಹೇಳಿಕೆ: ‘ದೇಶದಲ್ಲಿ ಇತ್ತೀಚಿನ ಉಗ್ರರ ದಾಳಿಗೆ ಭಾರತ ಪ್ರತೀಕಾರ ತೀರಿಸಿಕೊಂಡಿರುವ ಬಗ್ಗೆ ಮಾತ್ರ ನಾನು ಮಾತನಾಡಿರುವೆ. ಈ ಹಿಂದಿನ ಯುದ್ಧಗಳ ಕುರಿತಲ್ಲ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಗುರುವಾರ ಹೇಳಿದ್ದಾರೆ.

‘ಆಪರೇಷನ್ ಸಿಂಧೂರ’ ಶ್ಲಾಘಿಸಿ ತಾವು ನೀಡಿರುವ ಹೇಳಿಕೆಗಳಿಗೆ ಸಂಬಂಧಿಸಿ ಅಪಸ್ವರ ಎತ್ತಿರುವ ಪಕ್ಷದ ಕೆಲ ನಾಯಕರಿಗೆ ಅವರು ಈ ಮೂಲಕ ತಿರುಗೇಟು ನೀಡಿದ್ದಾರೆ.

ಪನಾಮಾ ಸಿಟಿಯಲ್ಲಿ ಮಾತನಾಡಿದ್ದ ತರೂರ್, ‘ಮೊದಲ ಬಾರಿಗೆ ಭಾರತೀಯ ಪಡೆಗಳು ಎಲ್‌ಒಸಿ ದಾಟಿ, ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ನಿರ್ದಿಷ್ಟ ದಾಳಿ ನಡೆಸಿವೆ. ಇಂತಹ ಕಾರ್ಯಾಚರಣೆಯನ್ನು ನಾವು ಈ ಹಿಂದೆ ಕೈಗೊಂಡಿರಲಿಲ್ಲ’ ಎಂದು ಹೇಳಿದ್ದರು.

ತರೂರ್ ಅವರ ಹೇಳಿಕೆಗಳ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದ ಕಾಂಗ್ರೆಸ್ ನಾಯಕ ಉದಿತ್ ರಾಜ್, ‘ತರೂರ್ ಅವರನ್ನು ಬಿಜೆಪಿ ಶೀಘ್ರವೇ ಪಕ್ಷದ ಸೂಪರ್ ವಕ್ತಾರರನ್ನಾಗಿ ಮಾಡಬೇಕು’ ಎಂದು ಟೀಕಿಸಿದ್ದರು.

ತಮ್ಮ ಹೇಳಿಕೆಗಳ ಬಗ್ಗೆ ಸ್ವಪಕ್ಷೀಯರೇ ಟೀಕೆ ಮಾಡುತ್ತಿರುವ ಕುರಿತು ಪ್ರತಿಕ್ರಿಯಿಸಿದ ತರೂರ್, ‘ಕೆಲವು ಟೀಕಾಕಾರರು ಹಾಗೂ ಟ್ರೋಲ್ ಮಾಡುವವರು ನನ್ನ ಅಭಿಪ್ರಾಯ ಮತ್ತು ಮಾತುಗಳನ್ನು ತಿರುಚುತ್ತಿದ್ದು, ಅದನ್ನು ಸ್ವಾಗತಿಸುವೆ. ಅವರಿಗೆ ಸರಿ ಎನಿಸಿದ್ದನ್ನು ಅವರು ಮಾಡಲಿ. ನಾನು ಹಲವು ಉತ್ತಮ ಕಾರ್ಯ ಮಾಡಬೇಕಿದ್ದು, ಅದನ್ನು ಮುಂದುವರಿಸುವೆ’ ಎಂದು ಹೇಳಿದ್ದಾರೆ.

> **ಪಕ್ಷವನ್ನು ಟೀಕಿಸುವ ಬದಲು ತರೂರ್ ತಮ್ಮ ಕರ್ತವ್ಯ ನಿಭಾಯಿಸಲಿ. ಕಾಂಗ್ರೆಸ್ ನೇತೃತ್ವದ ಸರ್ಕಾರ ಇಂತಹ ಕಾರ್ಯಾಚರಣೆ ಕೈಗೊಂಡಿದೆ. ಆದರೆ ಪ್ರಚಾರ ಮಾಡಿಲ್ಲ**
>
> **ಉದಿತ್ ರಾಜ್,** ಕಾಂಗ್ರೆಸ್ ಮುಖಂಡ

> **ಈ ವಿಚಾರದಲ್ಲಿ ಹಗೆತನ ಇಲ್ಲ. ಜೈರಾಮ್ ರಮೇಶ್ ಹಾಗೂ ಪವನ್ ಖೇರಾ ಅವರು ತಪ್ಪು ಕಲ್ಪನೆ ಹೋಗಲಾಡಿಸುವ ಪ್ರಯತ್ನ ಮಾಡಿದ್ದಾರಷ್ಟೆ**
>
> **ರಣದೀಪ್ ಸುರ್ಜೇವಾಲಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> **ಕಾಂಗ್ರೆಸ್ ಏನನ್ನು ಬಯಸುತ್ತದೆ? ಸಂಸದರು ವಿದೇಶಗಳಿಗೆ ಹೋಗಿ ಭಾರತ ಮತ್ತು ನಮ್ಮ ಪ್ರಧಾನಿ ವಿರುದ್ಧ ಮಾತನಾಡಬೇಕೇ?**
>
> **ಕಿರಣ್ ರಿಜಿಜು,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ಆರಂಭ

ಜೈನ ಅಭಿವೃದ್ಧಿ ನಿಗಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈನ ಅಭಿವೃದ್ಧಿ ನಿಗಮ' ಸ್ಥಾಪಿಸಿ ಪ್ರತಿವರ್ಷ ₹200 ಕೋಟಿ ಅನುದಾನ ಬಿಡುಗಡೆ ಮಾಡುವುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ಜೈನ ಸಮಾಜ ಹಿತರಕ್ಷಣಾ ಒಕ್ಕೂಟದ ನೇತೃತ್ವದಲ್ಲಿ ಜೈನ ಸಮುದಾಯದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರದಿಂದ ಉಪವಾಸ ಸತ್ಯಾಗ್ರಹ ಆರಂಭವಾಯಿತು.

'ಅಲ್ಪಸಂಖ್ಯಾತರಿಗೆ ಇರುವ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಜೈನ ಸಮುದಾಯಕ್ಕೆ ಕೊಡುವುದರಲ್ಲಿ ರಾಜ್ಯ ಸರ್ಕಾರ ತಾರತಮ್ಯ ಎಸಗುತ್ತಿದೆ. ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಬೇಡಿಕೆಗಳನ್ನು ಈಡೇರಿಸಿಲ್ಲ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಬೆಂಗಳೂರು, ಬೆಳಗಾವಿ, ತುಮಕೂರು ಸೇರಿ ವಿವಿಧ ಭಾಗದಿಂದ ಬಂದವರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನವು ಇದುವರೆಗೂ ಜೈನ ಸಮುದಾಯಕ್ಕೆ ಲಭಿಸಿಲ್ಲ. ಅಧ್ಯಕ್ಷ ಸ್ಥಾನವನ್ನು ಜೈನ ಸಮುದಾಯಕ್ಕೆ ನೀಡಬೇಕು. ನಿಗಮದ ಅಧ್ಯಕ್ಷ ಸ್ಥಾನ ಎಲ್ಲ ಅಲ್ಪಸಂಖ್ಯಾತ ಸಮುದಾಯಗಳಿಗೂ ಸಿಗುವಂತೆ ನಿಯಮ ರೂಪಿಸುವಂತೆ ಆಗ್ರಹಿಸಿದರು.

ಜೈನ ಸಮುದಾಯಕ್ಕೆ ಇರುವ ಮೀಸಲಾತಿ ಪ್ರಮಾಣವನ್ನು ಶೇಕಡ 20ಕ್ಕೆ ಹೆಚ್ಚಿಸಬೇಕು. ಪ್ರಾಚೀನ ಜೈನ ಬಸದಿ ಮತ್ತು ಬಸದಿಗಳ ಆಸ್ತಿಗಳ ಸಂರಕ್ಷಣೆಗಾಗಿ ಕಾನೂನು ರೂಪಿಸಬೇಕು. ಎಲ್ಲ ಪ್ರಾಚೀನ ಬಸದಿ ಮತ್ತು ಆಸ್ತಿಗಳ ಭೂಮಾಪನ ಮಾಡಬೇಕು. ಅತಿಕ್ರಮಣ ತೆರವು ಮಾಡಲು ವಿಶೇಷ ಕಾನೂನು ರೂಪಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದ ಪ್ರಾಚೀನ ಜೈನ ಬಸದಿ ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು ಮತ್ತು ಭದ್ರತಾ ಸಿಬ್ಬಂದಿ ನೇಮಿಸಬೇಕು ಎಂದು ಆಗ್ರಹಿಸಿದರು.

ಕ್ರೈಸ್ತ ಧರ್ಮೀಯರ ಅಭಿವೃದ್ಧಿಗೆ ಪ್ರತಿವರ್ಷ ₹250 ಕೋಟಿಯನ್ನು ಸರ್ಕಾರ ಮಂಜೂರು ಮಾಡುತ್ತಿದೆ. ಜೈನರ ಬೇಡಿಕೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆಪಾದಿಸಿದರು.

ಪ್ರತಿಭಟನೆಯ ನೇತೃತ್ವವನ್ನು ರೇಣುಕಾ ರಂಕ, ಬಾಬುಬಾಯ್ ಮೆಹ್ತಾ, ಕವಿತಾ ಜೈನ್, ಇಂದ್ರಮಲ್ ನಹರ್, ಮಹೇಶ್ ಜೈನ್ ವಹಿಸಿದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಜೈನ ಸಮಾಜ ಹಿತರಕ್ಷಣಾ ಒಕ್ಕೂಟದಿಂದ ಗುರುವಾರ ಪ್ರತಿಭಟನೆ ನಡೆಯಿತು. ಪ್ರಜಾವಾಣಿ ಚಿತ್ರ

ವಸತಿ ಶಾಲಾ ನೌಕರರ ಪ್ರತಿಭಟನೆ ತೀವ್ರ

ಹೊಸಪೇಟೆ (ವಿಜಯನಗರ): ವಸತಿ ಶಿಕ್ಷಣ ನಿರ್ದೇಶನಾಲಯ ರಚನೆ ಸೇರಿ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಮಾಜ ಕಲ್ಯಾಣ ಇಲಾಖೆ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಸಿಬ್ಬಂದಿ ವಸತಿ ಶಾಲೆಗಳಲ್ಲಿ ಗುರುವಾರ ಶಾಲಾ ಆರಂಭೋತ್ಸವಕ್ಕೆ ಕೈಗೆ ಕಪ್ಪು ಪಟ್ಟಿ ಧರಿಸಿ, ಕರ್ತವ್ಯಕ್ಕೆ ಹಾಜರಾದರು.

'ಶುಕ್ರವಾರ ತರಗತಿ ತೆಗೆದುಕೊಳ್ಳದೆ ಅಸಹಕಾರ ಚಳವಳಿ ನಡೆಯಲಿದೆ. ಶನಿವಾರ ಪಾದಯಾತ್ರೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸುತ್ತೇವೆ. ಜೂನ್ 2ರಂದು ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಲಾಗುವುದು' ಎಂದು ವಸತಿ ಶಾಲಾ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಉಮೇಶ್ ಇ. ತಿಳಿಸಿದ್ದಾರೆ.

'ಜ್ಯೋತಿ ಸಂಜೀವಿನಿ ಅನುಷ್ಠಾನಗೊಳಿಸಬೇಕು, ಮರಣ ಮತ್ತು ನಿವೃತ್ತಿ ಉಪದಾನ ಸೌಲಭ್ಯ ಕಲ್ಪಿಸಬೇಕು, ಮನೆ ಬಾಡಿಗೆ ಕಡಿತದಿಂದ ವಿನಾಯಿತಿ ನೀಡಬೇಕು, ಶೇ 10 ವಿಶೇಷ ಭತ್ಯೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ರಸ್ತೆ ಕಾಮಗಾರಿ: ಮುಪ್ಪಾನೆ ಲಾಂಚ್ ಸ್ಥಗಿತ

ತುಮರಿ (ಶಿವಮೊಗ್ಗ): 'ಸಾಗರ ತಾಲ್ಲೂಕಿನ ಕರೂರು ಹೋಬಳಿ ವ್ಯಾಪ್ತಿಯ ಹಲ್ಕೆ- ಮುಪ್ಪಾನೆ ಲಾಂಚ್ ಸೇವೆಯನ್ನು ಜೂನ್ 4ರವರೆಗೆ ಸ್ಥಗಿತಗೊಳಿಸಲಾಗಿದೆ' ಎಂದು ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಮಾಹಿತಿ ನೀಡಿದೆ.

'ರಸ್ತೆ ಕಾಮಗಾರಿಯ ಕಾರಣ ಲಾಂಚ್ ಸೇವೆ ಸ್ಥಗಿತಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಸಂಪೂರ್ಣ ನಿರ್ಬಂಧ ವಿಧಿಸಲಾಗಿದೆ. ದ್ವೀಪ ಭಾಗದ ಕುದರೂರು, ಚನ್ನಗೊಂಡ, ಎಸ್.ಎಸ್.ಭೋಗ್, ತುಮರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು, ಕಾರ್ಗಲ್ ಮತ್ತು ಜೋಗದಿಂದ ಬರುವ ಪ್ರವಾಸಿಗರು ಜೂನ್ 4ರವರೆಗೆ ಸಮೀಪದ ಹೊಳೆಬಾಗಿಲು ಕಡವು ಮಾರ್ಗದ 'ಸಿಗಂದೂರು ಲಾಂಚ್' ಸೇವೆ ಬಳಸಿಕೊಳ್ಳಬೇಕು' ಎಂದು ಕಡವು ನಿರೀಕ್ಷಕ ಧನೇಂದ್ರ ಕುಮಾರ 'ಪ್ರಜಾವಾಣಿ'ಗೆ ತಿಳಿಸಿದರು.

ಜೂನ್ 9 ರಿಂದ ಗ್ರಾಮ ಸಹಾಯಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಸಹಾಯಕರಿಗೆ ಜೀವನ ಭದ್ರತೆ ಒದಗಿಸುವಂತೆ ಆಗ್ರಹಿಸಿ ಜೂನ್ 9 ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘ ನಿರ್ಧರಿಸಿದೆ.

ಕರ್ನಾಟಕ ಗ್ರಾಮ ಕಚೇರಿಗಳ ರದ್ದತಿ ಕಾಯ್ದೆ 1961ರಂತೆ ವಂಶ ಪಾರಂಪರ್ಯದ ಎಲ್ಲ ಗ್ರಾಮೀಣ ಹಂತದ ಹುದ್ದೆಗಳು ರದ್ದಾಗಿದ್ದವು. ಕೆಳ ಹಂತದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರನ್ನು ಉಳಿಸಿಕೊಳ್ಳಲು ಗ್ರಾಮ ಲೆಕ್ಕಿಗರಿಗೆ ಸಹಾಯ ಮಾಡುವುದಕ್ಕಾಗಿ 10,450 ಗ್ರಾಮ ಸಹಾಯಕ ಹುದ್ದೆಗಳನ್ನು ಸೃಜಿಸಲಾಗಿತ್ತು. ಈ ಗ್ರಾಮ ಸಹಾಯಕರಿಗೆ ಪ್ರಸ್ತುತ ತಿಂಗಳಿಗೆ ₹ 15 ಸಾವಿರ ವೇತನ ಮಾತ್ರ ಪಾವತಿಯಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎಚ್.ಎನ್. ದೇವರಾಜು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಎರಡು ವರ್ಷದ ಹಿಂದೆ ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಆಗ ಸ್ಥಳಕ್ಕೆ ಬಂದಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ, ಬೇಡಿಕೆ ಈಡೇರಿಸಿಲ್ಲ' ಎಂದು ಅವರು ಆರೋಪಿಸಿದರು.

'ಡಿ' ಗುಂಪಿನ ನೌಕರರಿಗೆ ನೀಡುವ ವೇತನದಷ್ಟೇ ಗ್ರಾಮ ಸಹಾಯಕರಿಗೂ ವೇತನ ನೀಡಬೇಕು. ಆಗ ಕನಿಷ್ಠ ₹ 27 ಸಾವಿರ ವೇತನ ಸಿಗಲಿದೆ. ಪೌರಕಾರ್ಮಿಕರು, ಚಾಲಕರ ಸೇವೆಯನ್ನು ಕಾಯಂಗೊಳಿಸಲಾಗುತ್ತಿದೆ. ಅದೇ ಮಾದರಿಯಲ್ಲಿ ಗ್ರಾಮ ಸಹಾಯಕರ ಸೇವೆಯನ್ನು ಕಾಯಂ ಮಾಡಬೇಕು. ಮರಣ ಹೊಂದಿದಾಗ ಇಲ್ಲವೇ ನಿವೃತ್ತಿ ಹೊಂದಿದಾಗ ₹ 10 ಲಕ್ಷ ಇಡುಗಂಟು ನೀಡಬೇಕು ಎಂದು ಆಗ್ರಹಿಸಿದರು.

₹ 25 ಕೋಟಿ ವರ್ಕ್ ಆರ್ಡರ್ ಪ್ರಕರಣ; ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೆಕೆಆರ್‌ಡಿಬಿ ಹಾಗೂ ರಾಜ್ಯ ಸರ್ಕಾರದಿಂದ ₹ 25 ಕೋಟಿ ಟೆಂಡರ್‌ಗಳ ವರ್ಕ್ ಆರ್ಡರ್ (ಕಾರ್ಯಾದೇಶ) ಕೊಡಿಸುವ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು 'ಸೆನ್' ಠಾಣೆಯ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಉಪ ಗುತ್ತಿಗೆದಾರನಿಂದ ₹1.21 ಕೋಟಿ ಪಡೆದು ವಂಚಿಸಿದ ಆರೋಪದಡಿ ಐವರ ವಿರುದ್ಧ 'ಸೆನ್' ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಪ್ರಮುಖ ಆರೋಪಿಯಾದ ಕಲಬುರಗಿಯ ಲಕ್ಷ್ಮಿಕಾಂತ ಕಟ್ಟಿಮನಿ, ಆತನ ಸ್ನೇಹಿತರಾದ ರಾಯಚೂರಿನ ಕಿರಣ್ ಹಾಗೂ ಬೆಂಗಳೂರಿನ ಶ್ರೀಧರನನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ವರ್ಕ್ ಆರ್ಡರ್ ಕೊಡಿಸುವುದಾಗಿ ಉಪಗುತ್ತಿಗೆದಾರನಿಂದ ಹಣ ಪಡೆದಿದ್ದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಬ್ಯಾಂಕ್ ವಹಿವಾಟಿನ ದಾಖಲೆಗಳಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಕೆಆರ್‌ಡಿಬಿ ಮತ್ತು ರಾಜ್ಯ ಸರ್ಕಾರದಿಂದ ಟೆಂಡರ್ ವರ್ಕ್ ಆರ್ಡರ್ ಕೊಡಿಸುವುದಾಗಿ ಹೇಳಿ ಹಣ ಪಡೆದಿದ್ದೇವೆ. ಆದರೆ, ಟೆಂಡರ್‌ನ ವರ್ಕ್ ಆರ್ಡರ್ ಸಿಗಲಿಲ್ಲ. ಉಪ ಗುತ್ತಿಗೆದಾರನಿಂದ ಪಡೆದ ಹಣವನ್ನು ಹಿಂದಿರುಗಿಸಲು ಸಾಧ್ಯವಾಗಲಿಲ್ಲ. ಹಣಕಾಸಿನ ಅಡಚಣೆಯಾಗಿತ್ತು ಎಂದು ಆರೋಪಿಗಳು ವಿಚಾರಣೆಯಲ್ಲಿ ಹೇಳಿಕೆ ನೀಡಿದ್ದಾರೆ. ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

‘ವಿದ್ಯುತ್ ಸಂಪರ್ಕಕ್ಕೆ ಒ.ಸಿ: ಶೀಘ್ರ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಪರ್ಕ ಪಡೆಯಲು ಕಟ್ಟಡಗಳ ಸ್ವಾಧೀನಾನುಭವ ಪತ್ರ (ಒ.ಸಿ) ಕಡ್ಡಾಯಗೊಳಿಸಿರುವುದರಿಂದ ಆಗುತ್ತಿರುವ ಸಮಸ್ಯೆ ಕುರಿತು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡು ಶೀಘ್ರದಲ್ಲೇ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಕೆಪಿಸಿಸಿ ಕಚೇರಿಗೆ ಗುರುವಾರ ಭೇಟಿ ನೀಡಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಅಹವಾಲುಗಳನ್ನು ಸ್ವೀಕರಿಸಿದ ಬಳಿಕ ಅವರು ಮಾತನಾಡಿದರು.

ವಿದ್ಯುತ್ ಸಂಪರ್ಕಕ್ಕೆ ಒ.ಸಿ ಕಡ್ಡಾಯ ಮಾಡಿರುವ ಕಾರಣ ಮನೆ ನಿರ್ಮಾಣ,ಕೈಗಾರಿಕೋದ್ಯಮಕ್ಕೆ ಆಗುತ್ತಿರುವ ಸಮಸ್ಯೆ ಗಮನಕ್ಕೆ ಬಂದಿದೆ. ಸಂಪುಟ ಸಭೆಯಲ್ಲಿ ಸಮಾಲೋಚನೆ ನಡೆಸಿ ಪರಿಹಾರ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಮುಖ್ಯಮಂತ್ರಿ ಅವರು ಸೂಚಿಸಿದ್ದಾರೆ ಎಂದರು.

ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರ ವಿದ್ಯುತ್ ಸಂಪರ್ಕಗಳಿಗೆ ಒ.ಸಿ ಕಡ್ಡಾಯಗೊಳಿಸಿದೆ. ಇದರಿಂದ ಉದ್ಭವ ಆಗಿರುವ ಸಮಸ್ಯೆ ನಿವಾರಿಸಲು ಬೈಲಾ ತಿದ್ದುಪಡಿ ಮಾಡಬೇಕಿದೆ. ಅದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಹೇಳಿದರು.

ಐಪಿಎಲ್ ಟಿಕೆಟ್ ಕಾಳಸಂತೆಯಲ್ಲಿ ₹5 ಸಾವಿರ, ₹8 ಸಾವಿರಕ್ಕೆ ಮಾರಾಟ: ಇಬ್ಬರ ಸೆರೆ

ಪೊಲೀಸ್ ಸಿಬ್ಬಂದಿಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ಐಪಿಎಲ್ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶಂಕರ್, ಸುರೇಶ್ ಬಂಧಿತರು. ಆರೋಪಿಗಳಿಂದ 61 ಐಪಿಎಲ್ ಟಿಕೆಟ್ ಮತ್ತು ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಿಗೆ ಕಾಳ ಸಂತೆಯಲ್ಲಿ ಮಾರಾಟ ಮಾಡಲು ಟಿಕೆಟ್ ನೀಡಿದ್ದ ಆರೋಪದ ಮೇಲೆ ಸಂಚಾರ ನಿರ್ವಹಣೆ ಕೇಂದ್ರದ (ಟಿಎಂಸಿ) ಸಹಾಯವಾಣಿ ಕೊಠಡಿಯ ಸಿಬ್ಬಂದಿ ವೆಂಕಟಗಿರಿಗೌಡ ಮತ್ತು ಹಲಸೂರು ಸಂಚಾರ ಠಾಣೆಯ ಕಾನ್‌ಸ್ಟೆಬಲ್ ರವಿಚಂದ್ರ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಎಂದು ಮೂಲಗಳು ತಿಳಿಸಿವೆ.

ಮೇ 17ರಂದು ವಿಜಯನಗರದ ಬಳಿ ಆರೋಪಿ ಶಂಕರ್ ಐಪಿಎಲ್ ಟಿಕೆಟ್ ಅನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ. ₹1,200 ಮೌಲ್ಯದ ಟಿಕೆಟ್ ಅನ್ನು ₹5,000ಕ್ಕೆ ಮಾರಾಟ ಮಾಡುತ್ತಿದ್ದ. ಆಗ ಆರೋಪಿಯನ್ನು ಬಂಧಿಸಿದಾಗ ಪೊಲೀಸ್ ಸಿಬ್ಬಂದಿಯ ಕೈವಾಡ ಇರುವುದು ಪತ್ತೆಯಾಗಿತ್ತು.

ಕೆಎಸ್‌ಸಿಎ ಮೂಲಕ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಟಿಕೆಟ್ ಪಡೆದು ಅವುಗಳನ್ನು ಕಾನ್‌ಸ್ಟೆಬಲ್ ಮೂಲಕ ಮಾರಾಟ ಮಾಡಿಸುತ್ತಿದ್ದರು. ಪ್ರತಿ ಪಂದ್ಯಕ್ಕೆ 150 ಟಿಕೆಟ್ ಪಡೆದು ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿತ್ತು. ₹1,200 ಮುಖಬೆಲೆಯ ಟಿಕೆಟ್ ಅನ್ನು ₹5 ಸಾವಿರಕ್ಕೆ ಹಾಗೂ ₹2,200 ಮುಖ ಬೆಲೆಯ ಟಿಕೆಟ್ ಅನ್ನು ₹8 ಸಾವಿರಕ್ಕೆ ಮಾರಾಟ ಮಾಡಲಾಗಿತ್ತು. ಒಂದು ಪಂದ್ಯದಲ್ಲಿ ₹80 ಲಕ್ಷದಿಂದ ₹1 ಕೋಟಿವರೆಗೆ ಪೊಲೀಸ್ ಸಿಬ್ಬಂದಿ ಗಳಿಸಿದ್ದಾರೆ ಎನ್ನಲಾಗಿದೆ.

ಪತಿ ಕೊಲೆ: ಪತ್ನಿ ಬಂಧನ


ಸುರೇಶ್ ಬಾಬು

ಬೆಂಗಳೂರು: ಮನೆಯಲ್ಲಿ ನಿತ್ಯ ನಡೆಯುತ್ತಿದ್ದ ಗಲಾಟೆಯಿಂದ ಬೇಸತ್ತು ಪತಿಯನ್ನು ಕೊಲೆ ಮಾಡಿದ್ದ ಪತ್ನಿಯನ್ನು ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸುರೇಶ್ ಬಾಬು (48) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಆರೋಪದ ಅಡಿ ಅವರ ಪತ್ನಿ ನಾಗಮ್ಮ (43) ಅವರನ್ನು ಪೊಲೀಸರು ಬಂಧಿಸಿದ್ದಾರೆ. ಕೊಲೆಯಾದ ವ್ಯಕ್ತಿಯ ಸಹೋದರ ಸುದರ್ಶನ್ ನೀಡಿದ ದೂರು ಆಧರಿಸಿ ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ನಡೆಸಿದಾಗ ಪತ್ನಿಯೇ ಕೊಲೆ ನಡೆಸಿದ್ದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಬಾಲಕಿಗೆ ಲೈಂಗಿಕ ಕಿರುಕುಳ: ನೃತ್ಯ ಶಿಕ್ಷಕ ಸೆರೆ


ಭಾರತಿ ಕಣ್ಣನ್

ಬೆಂಗಳೂರು: ನೃತ್ಯ ತರಬೇತಿಯ ಬಗ್ಗೆ ಮಾಹಿತಿ ನೀಡುವುದಾಗಿ ಬಾಲಕಿಯನ್ನು ಕಾರಿಗೆ ಹತ್ತಿಸಿಕೊಂಡು ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಅಡಿ ನೃತ್ಯ ಶಿಕ್ಷಕ ಭಾರತಿ ಕಣ್ಣನ್ (28) ಎಂಬಾತನನ್ನು ಕಾಡುಗೋಡಿ ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಬಾಲಕಿ ಕುಟುಂಬದವರು ನೀಡಿದ ದೂರು ಆಧರಿಸಿ, ತನಿಖೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು. ಆರೋಪಿಯ ವಿರುದ್ಧ ಪೋಕ್ಸೊ(ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೇ 24ರಂದು ಕಾಡುಗೋಡಿ ಬಳಿ ರಸ್ತೆಯಲ್ಲಿ ಬಾಲಕಿ ನಡೆದುಕೊಂಡು ಹೋಗುತ್ತಿದ್ದಳು. ಅದೇ ಮಾರ್ಗದಲ್ಲಿ ಕಾರಿನಲ್ಲಿ ಬಂದಿದ್ದ ಆರೋಪಿ ತಾನು ನೃತ್ಯ ಶಿಕ್ಷಕ ಎಂಬುದಾಗಿ ಪರಿಚಯಿಸಿಕೊಂಡಿದ್ದ. ನೃತ್ಯ ತರಬೇತಿ ತರಗತಿ ಬಗ್ಗೆ ಮಾಹಿತಿ ನೀಡುವುದಾಗಿ ಬಾಲಕಿಗೆ ಹೇಳಿದ್ದ. ಆರೋಪಿಯ ಮಾತು ನಂಬಿದ್ದ ಬಾಲಕಿ, ಕಾರು ಹತ್ತಿದ್ದಳು. ಬಾಲಕಿ ಕಾರಿನೊಳಗೆ ಕುಳಿತ ಬಳಿಕ ಲಾಕ್ ಮಾಡಿಕೊಂಡಿದ್ದ. ಸ್ವಲ್ಪ ದೂರಕ್ಕೆ ಕರೆದೊಯ್ದು ಕಾರನ್ನು ನಿಲುಗಡೆ ಮಾಡಿದ್ದ. ಅಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ’ ಎಂದು ಪೊಲೀಸರು ತಿಳಿಸಿದರು.

ಅದೇ ಸ್ಥಳಕ್ಕೆ ಬಿಟ್ಟು ಪರಾರಿ: ಲೈಂಗಿಕ ಕಿರುಕುಳ ನೀಡಿದ ಬಳಿಕ ಬಾಲಕಿಯನ್ನು ಕಾರು ಹತ್ತಿಸಿಕೊಂಡಿದ್ದ ಸ್ಥಳಕ್ಕೆ ವಾಪಸ್ ಕರೆತಂದು ಬಿಟ್ಟು ಆರೋಪಿ ಪರಾರಿ ಆಗಿದ್ದ. ಘಟನೆಯ ಕುರಿತು ಪೋಷಕರಿಗೆ ಬಾಲಕಿ ಮಾಹಿತಿ ನೀಡಿದ್ದಳು. ನಂತರ, ಪೋಷಕರು ಪೊಲೀಸರಿಗೆ ದೂರು ನೀಡಿದ್ದರು.

ಈ ದೂರಿನ ಬೆನ್ನಲ್ಲೇ ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಿದಾಗ ಆರೋಪಿಯ ಕಾರಿನ ನೋಂದಣಿ ಸಂಖ್ಯೆ ಪತ್ತೆಯಾಗಿತ್ತು. ಆ ಸುಳಿವು ಆಧರಿಸಿ ಭಾರತಿ ಕಣ್ಣನ್‌ನನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ನಾಡ ಬಂದೂಕು ಮಾರಾಟ: ಇಬ್ಬರ ಬಂಧನ


ಸಮೀರ್


ಹರ್ಪಾಲ್

ಬೆಂಗಳೂರು: ಹೊರ ರಾಜ್ಯದಿಂದ ನಾಡ ಬಂದೂಕು, ಪಿಸ್ತೂಲ್ ಹಾಗೂ ಮದ್ದುಗುಂಡುಗಳನ್ನು ಕಡಿಮೆ ಬೆಲೆಗೆ ಖರೀದಿಸಿ ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಸಿಸಿಬಿಯ ಸಂಘಟಿತ ಅಪರಾಧ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ರೌಡಿ ಶೀಟರ್ ಸಮೀರ್ ಅಲಿಯಾಸ್ ಶೂಟರ್ ಸಮೀರ್ ಹಾಗೂ ಪಂಜಾಬ್‌ನ ಹರ್ಪಾಲ್ ಸಿಂಗ್ ಬಂಧಿತರು.

ಆರೋಪಿಗಳಿಂದ ಒಂದು ನಾಡ ಬಂದೂಕು, ಒಂದು ಪಿಸ್ತೂಲ್ ಹಾಗೂ ಎರಡು ಜೀವಂತ ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಸಮೀರ್‌ಗೆ ಹರ್ಪಾಲ್ ಸಿಂಗ್ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದ. ಕಡಿಮೆ ಬೆಲೆಗೆ ಶಸ್ತ್ರಾಸ್ತ್ರಗಳನ್ನು ಖರೀದಿಸಿ ನಗರದಲ್ಲಿ ಹೆಚ್ಚಿನ ಬೆಲೆಗೆ ಸಮೀರ್ ಮಾರಾಟ ಮಾಡುತ್ತಿದ್ದ.

ಸುದ್ದಿ 2 ನಿಮಿಷ

ಪ್ರಿ-ವೆಡ್ಡಿಂಗ್ ಶೂಟ್ ಬಳಿಕ ಆರೋಪಿ ವಿದೇಶಕ್ಕೆ ಪರಾರಿ

ಬೆಂಗಳೂರು: ಮದುವೆ ಆಗುವುದಾಗಿ ಯುವತಿಯನ್ನು ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿ ವಿದೇಶಕ್ಕೆ ಪರಾರಿಯಾಗಿರುವ ಆರೋಪಿ ವಿರುದ್ಧ ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

22 ವರ್ಷದ ಸಂತ್ರಸ್ತೆ ನೀಡಿರುವ ದೂರಿನ ಅನ್ವಯ ಭರತ್ ಮತ್ತು ಆತನ ತಂದೆ ಸೂರ್ಯ ಪ್ರಸಾದ್, ತಾಯಿ ಅನುರಾಧಾ, ಅಕ್ಕ ರಂಜಿತಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಂತ್ರಸ್ತೆಗೆ ಆರೋಪಿ ಭರತ್ ಇನ್‌ಸ್ಟಾಗ್ರಾಂ ಮೂಲಕ ಪರಿಚಿತ-ನಾಗಿದ್ದ. ಇಬ್ಬರೂ ಪ್ರೀತಿಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

‘ಕೆಲವು ದಿನಗಳ ನಂತರ ಮನೆಯಲ್ಲಿ ಮದುವೆಗೆ ಒಪ್ಪುತ್ತಿಲ್ಲ. ಪೋಷಕರ ವಿರೋಧದ ನಡುವೆಯೂ ಮದುವೆ ಆಗಲು ಸಿದ್ಧ ಇರುವುದಾಗಿ ಹೇಳಿ ಮದುವೆಯ ಸಿದ್ಧತೆಗೆ ಸೂಚಿಸಿದ್ದ. ಮದುವೆ ಮಂಟಪ ಕೂಡ ಕಾಯ್ದಿರಿಸಲಾಗಿತ್ತು. ಪ್ರೀ -ವೆಡ್ಡಿಂಗ್ ಶೂಟ್ ಸಹ ನಡೆದಿತ್ತು. ನಂತರ ಆರೋಪಿ ವಿದೇಶಕ್ಕೆ ಪರಾರಿ ಆಗಿದ್ದಾನೆ. ಈ ಬಗ್ಗೆ ನಮ್ಮ ಪೋಷಕರು, ಭರತ್ ಅವರ ಮನೆಗೆ ಹೋಗಿ ವಿಚಾರಿಸಿದ್ದಾಗ ಅವರ ತಂದೆ- ತಾಯಿ ಅವಮಾನಿಸಿ, ಜಾತಿ ನಿಂದನೆ ಮಾಡಿದ್ದಾರೆ’ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮತ್ತೆ ಟೋಯಿಂಗ್ ಶುರು



ಬೆಂಗಳೂರು: ‘ಟೋಯಿಂಗ್’ ಕಾರ್ಯಾಚರಣೆ ಗುರುವಾರದಿಂದಲೇ ಆರಂಭವಾಗಿದೆ. ಅಧಿಕೃತ ಆದೇಶ ಹೊರಬೀಳುವ ಮುನ್ನವೇ ಕಾರ್ಯಾಚರಣೆ ಶುರುವಾಗಿದೆ.

ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳನ್ನು ಟೋಯಿಂಗ್ ಮಾಡುವ ಸಂಬಂಧ ನಿಯಮಾವಳಿ ರೂಪಿಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಹೇಳಿಕೆ ನೀಡಿ 24 ತಾಸು ಕಳೆಯುವಷ್ಟರಲ್ಲಿ ಆಡುಗೋಡಿ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಟೋಯಿಂಗ್ ಕಾರ್ಯಾಚರಣೆ ನಡೆದಿದೆ.

ಮೊದಲ ದಿನ 30ಕ್ಕೂ ಹೆಚ್ಚು ಪ್ರಕರಣ ದಾಖಲು ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ. ‘ಟೋಯಿಂಗ್‌ಗೆ ಇಲಾಖೆಯ ವಾಹನಗಳನ್ನೇ ಬಳಸಬೇಕಾ ಅಥವಾ ಗುತ್ತಿಗೆದಾರರನ್ನು ನೇಮಿಸಬೇಕೆ ಎಂಬುದು ತೀರ್ಮಾನವಾಗಿಲ್ಲ. ಶೀಘ್ರದಲ್ಲೇ ಅದರ ರೂಪುರೇಷೆಗಳು ಸಿದ್ಧವಾಗಲಿವೆ. ಟೋಯಿಂಗ್ ಜಾರಿ ದಿನಾಂಕ ಇನ್ನೂ ನಿಗದಿ ಆಗಿಲ್ಲ’ ಎಂದು ದಯಾನಂದ ಹೇಳಿದ್ದರು.



ಕೇಂದ್ರೀಯ ಜಿಎಸ್‌ಟಿ ಮತ್ತು ಸೀಮಾ ಸುಂಕ ಇಲಾಖೆಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, 'ಸಂಪ್ರಭಾ'ವು ಗುರುವಾರ ಕೋರಮಂಗಲದ ಕೇಂದ್ರೀಯ ಸದನದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರ ಮತ್ತು ಅಂಗಾಂಗ ದಾನ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ 120 ಮಂದಿ ರಕ್ತದಾನ ಮಾಡಿದರು. ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮಹಾ ನಿರ್ದೇಶಕ ಎನ್‌.ಎನ್‌.ಎಸ್‌. ಎಸ್‌.ರಾವ್, ಕೇಂದ್ರೀಯ ಜಿಎಸ್‌ಟಿಯ ಜಂಟಿ ಆಯುಕ್ತ ಶ್ರೇಯಸ್, ‘ಸಂಪ್ರಭಾ’ ಅಧ್ಯಕ್ಷ, ಕೇಂದ್ರೀಯ ತೆರಿಗೆ ಇಲಾಖೆ ನಿವೃತ್ತ ಆಯುಕ್ತ ಜಿ.ನಾರಾಯಣಸ್ವಾಮಿ ಸೇರಿದಂತೆ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ನೆಲಮಂಗಲದ ಸಿದ್ಧಾರ್ಥ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಎಸ್‌ಐಎಂಎಸ್) ವಿಧಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಪಿ.ಕೆ.ದೇವದಾಸ್ ಅವರು ಅಂಗಾಂಗ ದಾನದ ಬಗ್ಗೆ ಉಪನ್ಯಾಸ ನೀಡಿದರು

ಸಾಲ ತೀರಿಸಲು ಸಂಬಂಧಿ ಕೊಂದರು

ಬೆಟ್ಟಿಂಗ್, ರೈಸ್ ಪುಲ್ಲಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ


ಲತಾ

ಬೆಂಗಳೂರು: ಪುತ್ರಿಯ ಮದುವೆಗೆಂದು ಚಿನ್ನಾಭರಣ ಖರೀದಿಸಿ, ಕಾಟನ್‌ಪೇಟೆಯ ಮನೆಯಲ್ಲಿ ಇಟ್ಟಿದ್ದ ಮಹಿಳೆಯನ್ನು ಕೊಂದು ಚಿನ್ನಾಭರಣ ದೋಚಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು, ಕೊಲೆಯಾದ ಮಹಿಳೆಯ ಸಂಬಂಧಿ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

ಬೀದರ್‌ನ ಪುರಂದರ (42) ಹಾಗೂ ಆತನ ಸ್ನೇಹಿತ ಶಿವಪ್ಪ (35) ಬಂಧಿತರು.

ಕಾಟನ್‌ಪೇಟೆಯ ಲತಾ (50) ಅವರನ್ನು ಆರೋಪಿಗಳು ಕೊಲೆ ಮಾಡಿದ್ದರು. ಲತಾ ಅವರು ಬೀದರ್‌ನವರು. ಲತಾ ಅವರ ಸಂಬಂಧಿ ಪುರಂದರ ಸಂಚು ರೂಪಿಸಿ ಕೃತ್ಯ ಎಸಗಿ ಪರಾರಿ ಆಗಿದ್ದ ಎಂದು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ತಿಳಿಸಿದರು.

ಮೇ 26ರಂದು ಮಧ್ಯಾಹ್ನ ಕಾಟನ್‌ಪೇಟೆಯ ದರ್ಗಾ ರಸ್ತೆಯಲ್ಲಿ ಇರುವ ಮನೆಯೊಂದಕ್ಕೆ ಆರೋಪಿಗಳು ನುಗ್ಗಿ ಲತಾ ಅವರನ್ನು ಕೊಲೆ ಮಾಡಿ 150 ಗ್ರಾಂ. ಚಿನ್ನಾಭರಣ, ₹2 ಲಕ್ಷ ನಗದು ಹಾಗೂ ಒಂದು ಮೊಬೈಲ್ ಫೋನ್ ದರೋಡೆ ಮಾಡಿದ್ದರು.

ಲತಾ ಅವರ ಪತಿ ಪ್ರಕಾಶ್ ಅವರು ಬಟ್ಟೆಯ ಸಗಟು ವ್ಯಾಪಾರ ಮಾಡುತ್ತಿದ್ದು, ಅಂಗಡಿಗೆ ತೆರಳಿದ್ದರು. ಪುತ್ರಿ ಕೆಲಸಕ್ಕೆ ತೆರಳಿದ್ದರು. ಮಗ ಶಾಲೆಗೆ ಹೋಗಿದ್ದ. ಪ್ರಕಾಶ್ ಅವರು ಮನೆಗೆ ಬಂದು ನೋಡಿದಾಗ ಪತ್ನಿಯ ಕೊಲೆ ಆಗಿರುವುದು ಗೊತ್ತಾಗಿತ್ತು. ಪ್ರಕಾಶ್ ನೀಡಿದ ದೂರಿನ ಮೇರೆಗೆ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಪೊಲೀಸರು ಪತ್ತೆ ಮಾಡಿದ್ದಾರೆ.


ಪುರಂದರ


ಶಿವಪ್ಪ

ಆರೋಪಿಗಳು ಬೀದರ್‌ನ ರಾಸಾಯನಿಕ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಈ ಪೈಕಿ ಪುರಂದರ ಎಂಬಾತ ಲತಾ ಅವರ ಹತ್ತಿರದ ಸಂಬಂಧಿ. ಶಿವಪ್ಪ ಎಂಬಾತ ಪುರಂದರನ ಸ್ನೇಹಿತ. ಇಬ್ಬರೂ ಮದ್ಯಪಾನ, ಬೆಟ್ಟಿಂಗ್ ಚಟಕ್ಕೆ ದಾಸರಾಗಿದ್ದರು. ಅಪಾರ ಸಾಲ ಮಾಡಿಕೊಂಡಿದ್ದರು. ಜೊತೆಗೆ ರೈಸ್ ಪುಲ್ಲಿಂಗ್ ದಂಧೆಯಲ್ಲೂ ತೊಡಗಿಸಿಕೊಂಡಿದ್ದರು. ಲತಾ ಬಳಿ ಹಣ ಹಾಗೂ ಚಿನ್ನಾಭರಣ ಇರುವುದು ಪುರಂದರನಿಗೆ ತಿಳಿದಿತ್ತು. ತನ್ನ ಸ್ನೇಹಿತನ ಜತೆಗೆ ಸೇರಿಕೊಂಡು ಕೊಲೆ ಮಾಡಲು ಸಂಚು ರೂಪಿಸಿದ್ದ ಎಂದು ಪೊಲೀಸರು ಹೇಳಿದರು.

ಸತ್ಕರಿಸಿದ್ದ ಲತಾ: ಆರೋಪಿಗಳು ಬೆಳಿಗ್ಗೆ ಮನೆಗೆ ಬಂದಾಗ ಸಂಬಂಧಿಗಳು ಬಂದಿದ್ದಾರೆ ಎಂದು ಲತಾ ಅವರು ತಿಂಡಿ ನೀಡಿ ಸತ್ಕರಿಸಿದ್ದರು. ಆಗ ಕೊಲೆ ಮಾಡಲು ಧೈರ್ಯವಿಲ್ಲದೆ ವಾಪಸ್ ತೆರಳಿದ್ದರು. ಸ್ವಲ್ಪ ಹೊತ್ತಿನ ನಂತರ ಮಾವಿನ ಹಣ್ಣು ಕೊಡುವ ನೆಪದಲ್ಲಿ ಮತ್ತೆ ಮನೆಗೆ ಬಂದು ಲತಾ ಅವರನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ಚಿನ್ನ ಹಾಗೂ ನಗದು ದೋಚಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

150 ಸಿಸಿಟಿವಿ ಕ್ಯಾಮೆರಾ ದೃಶ್ಯ ಆಧರಿಸಿ ಸೆರೆ

ಕಾಟನ್‌ಪೇಟೆಯಿಂದ ಮೆಜೆಸ್ಟಿಕ್‌ವರೆಗೆ 150ಕ್ಕೂ ಹೆಚ್ಚು ಸಿ.ಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಸಂಗ್ರಹಿಸಿ ಆರೋಪಿಗಳ ಗುರುತು ಪತ್ತೆ ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ಕೊಲೆಯ ನಂತರ ಆರೋಪಿಗಳು ಕಾಟನ್‌ಪೇಟೆಯಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ನಡೆದು ತೆರಳಿ ಕೆಎಸ್‌ಆರ್‌ಟಿಸಿ ಬಸ್ ಹತ್ತಿ ಬೀದರ್‌ಗೆ ಹೋಗಿದ್ದರು. ಮಗಳ ಮದುವೆಯ ಸಿದ್ಧತೆಯಲ್ಲಿದ್ದ ಲತಾ ದಂಪತಿಯು ಹಣ ಹಾಗೂ ಆಭರಣಗಳನ್ನು ಮನೆಯಲ್ಲಿಟ್ಟಿದ್ದ ವಿಚಾರ ತಿಳಿದಿದ್ದ ಆರೋಪಿ ಪುರಂದರ, ಅವುಗಳನ್ನು ದೋಚುವ ಉದ್ದೇಶಕ್ಕಾಗಿಯೇ ಕೃತ್ಯ ಎಸಗಿದ್ದ. ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

‘ಮಧುಬಲೆ’: ಸಾಕ್ಷ್ಯಾಧಾರಗಳ ಕೊರತೆ

ಪ್ರಜಾವಾಣಿ ವಾರ್ತೆ


ಕೆ.ಎನ್‌.ರಾಜಣ್ಣ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಮಧುಬಲೆಗೆ (ಹನಿಟ್ರ್ಯಾಪ್) ಸಿಲುಕಿಸಲು ಯತ್ನಿಸಿದ ಪ್ರಕರಣದ ವಿಚಾರಣೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ (ಡಿಜಿ-ಐಜಿಪಿ) ಅಂತಿಮ ವರದಿ ಸಲ್ಲಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಕೋರಿ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಸಚಿವ ಕೆ.ಎನ್. ರಾಜಣ್ಣ ಅವರು ದೂರು ನೀಡಿದ್ದರು. ಆ ದೂರನ್ನು ಹಿಂದಿನ ಪೊಲೀಸ್ ಮಹಾನಿರ್ದೇಶಕರಿಗೆ ವರ್ಗಾವಣೆ ಮಾಡಿದ್ದರು. ವಿಚಾರಣೆ ನಡೆಸಿ ಸಿಐಡಿ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ರಾಜಣ್ಣ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ಸಿಕ್ಕಿಲ್ಲವಾದ್ದರಿಂದ ಡಿಜಿ-ಐಜಿಪಿಗೆ ವಿಚಾರಣೆ ಮುಕ್ತಾಯದ ವರದಿಯನ್ನು ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ. ಡಿಜಿ-ಐಜಿಪಿ ಆ ವರದಿಯನ್ನು ಪರಿಶೀಲನೆ ಬಳಿಕ ಸರ್ಕಾರಕ್ಕೆ ಸಲ್ಲಿಕೆ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಮಧುಬಲೆಗೆ ಕೆಡವಲು ಬಂದಿದ್ದರು ಎನ್ನಲಾದ ಅಪರಿಚಿತ ಯುವತಿ ಹಾಗೂ ಯುವಕನ ಬಗ್ಗೆ ರಾಜಣ್ಣ ಅವರು ಯಾವುದೇ ಮಾಹಿತಿ ನೀಡಿಲ್ಲ. ದೂರಿನಲ್ಲಿದ್ದ ಅಸ್ಪಷ್ಟ ಮಾಹಿತಿ ಹೊರತುಪಡಿಸಿದರೆ ಯಾವುದೇ ಸಾಕ್ಷ್ಯ ನೀಡಿಲ್ಲ. ಅವರು ಆರೋಪಿಸಿದಂತೆ ವಿಚಾರಣೆ ವೇಳೆ ಗಡ್ಡಧಾರಿ ವ್ಯಕ್ತಿಯೂ ಸಿಕ್ಕಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಣ್ಣ ಅವರ ಭದ್ರತಾ ಸಿಬ್ಬಂದಿ ಹಾಗೂ ಆಪ್ತ ಸಹಾಯಕರನ್ನು ವಿಚಾರಣೆ ನಡೆಸಲಾಗಿತ್ತು. ಅವರು ಘಟನೆಯ ಬಗ್ಗೆ ಮಾಹಿತಿ ಗೊತ್ತಿಲ್ಲ ಎಂಬುದಾಗಿ ತಿಳಿಸಿದ್ದಾರೆ ಎಂಬುದನ್ನು ವರದಿಯಲ್ಲಿ ಸಿಐಡಿ ಅಧಿಕಾರಿಗಳು ಉಲ್ಲೇಖಿಸಿದ್ದಾರೆ.

ಸಾಕ್ಷ್ಯಾಧಾರಗಳ ಕೊರತೆಯಿಂದ ತನಿಖೆ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅಂತಿಮ ವರದಿ ಸಲ್ಲಿಸಲಾಗಿದೆ ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೈ ಬೆರಳು ಕಚ್ಚಿ ತುಂಡರಿಸಿದ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯ ನೀರು ಕಾರು ಹಾಗೂ ಕಾರಿನಲ್ಲಿದ್ದ ಮಹಿಳೆಗೆ ಹಾರಿದ್ದಕ್ಕೆ ಸಿಟ್ಟಿಗೆದ್ದ ಚಾಲಕನೊಬ್ಬ, ಮತ್ತೊಂದು ಕಾರಿನಲ್ಲಿದ್ದ ವ್ಯಕ್ತಿಯ ಕೈ ಬೆರಳು ಕಚ್ಚಿ ತುಂಡರಿಸಿದ ಘಟನೆ ನಗರದಲ್ಲಿ ನಡೆದಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮಾಗಡಿ ರಸ್ತೆ ಠಾಣೆಯ ಪೊಲೀಸರು ಆರೋಪಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಜಯಂತ್ ಶೇಖರ್ ಎಂಬುವರು ಹಲ್ಲೆಗೊಳಗಾಗಿದ್ದು, ಇವರ ಪತ್ನಿ ಪಾರ್ವತಿ ನೀಡಿದ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜಯಂತ್ ಅವರ ಕೈಬೆರಳು ತುಂಡಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮನೆಗೆ ಮರಳಿದ್ದಾರೆ.

ನಗರದಲ್ಲಿ ಸುರಿದ ಮಳೆಯಿಂದಾಗಿ ಮೆಜೆಸ್ಟಿಕ್ ಬಳಿಯ ಓಕಳಿಪುರ ಕೆಳಸೇತುವೆಯಲ್ಲಿ ನೀರು ಸಂಗ್ರಹಗೊಂಡಿತ್ತು. ಮೇ 25ರಂದು ರಾತ್ರಿ ಹೋಟೆಲ್‌ವೊಂದರಲ್ಲಿ ಊಟ ಮುಗಿಸಿ ಮನೆಗೆ ಹಿಂತಿರುಗಲು ಓಕಳಿಪುರ ಕೆಳಸೇತುವೆ ಬಳಿ ಕಾರಿನಲ್ಲಿ ಜಯಂತ್ ಶೇಖರ್ ದಂಪತಿ ಬರುತ್ತಿದ್ದರು. ಆಗ ಪಕ್ಕದ ಕಾರಿನ ಮೇಲೆ ಮಳೆಯ ನೀರು ಹಾರಿತ್ತು. ಮಳೆಯ ನೀರು ಹಾರಿದ್ದಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಮತ್ತೊಂದು ಕಾರಿನಲ್ಲಿದ್ದವರು ಜಯಂತ್ ಅವರನ್ನು ಅಚಾಚ್ಯ ಪದಗಳಿಂದ ನಿಂದಿಸಿದ್ದರು. ಆಗ ಜಯಂತ್ ಅವರು ಕ್ಷಮೆ ಕೋರಿ ಕಾರು ಚಲಾಯಿಸಿ ಮುಂದಕ್ಕೆ ಹೋಗಿದ್ದರು ಎಂದು ಮೂಲಗಳು ತಿಳಿಸಿವೆ.

ಅಡ್ಡಗಟ್ಟಿ ಕೃತ್ಯ

ಬಳಿಕ ಕಾರು ಹಿಂಬಾಲಿಸಿಕೊಂಡು ಹೋಗಿ ಲುಲು ಮಾಲ್ ಬಳಿ ಕಾರು ಅಡ್ಡಗಟ್ಟಿ ಜಯಂತ್ ಮೇಲೆ ಮತ್ತೆ ಹಲ್ಲೆ ನಡೆಸಲಾಗಿದೆ. ಆರೋಪಿ ತನ್ನ ಕೈಗಳಿಂದ ಎಡಗಣ್ಣಿಗೆ ಗುದ್ದಿ ಹಲ್ಲೆ ಮಾಡಿದ್ದ. ಬಳಿಕ ಬಲಗೈ ಬೆರಳಿಗೆ ಕಚ್ಚಿದ್ದರಿಂದ ಬೆರಳು ತುಂಡಾಗಿತ್ತು ಎಂದು ಮೂಲಗಳು ತಿಳಿಸಿವೆ.

‘ತುಂಡಾದ ಕೈ ಬೆರಳಿಗೆ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದು, ವಿಶ್ರಾಂತಿ ಪಡೆಯುವಂತೆ ಸೂಚಿಸಿದ್ದಾರೆ’ ಎಂದು ಜಯಂತ್ ತಿಳಿಸಿದ್ದಾರೆ.

‘ಹೋಟೆಲ್‌ನಿಂದ ಬರುತ್ತಿದ್ದ ವೇಳೆ ಘಟನೆ ನಡೆದಿತ್ತು. ಆರೋಪಿಯ ಕಾರಿನಲ್ಲಿದ್ದ ಮಹಿಳೆಯ ಮುಖಕ್ಕೆ ನೀರು ಹಾರಿತ್ತು. ಚಾಲಕ ನಿಂದನೆ ಮಾಡಿದ್ದ. ಕ್ಷಮೆ ಕೇಳಿ ಕಾರಿನ ಕಿಟಕಿಯ ಗಾಜು ಮುಚ್ಚಿಕೊಳ್ಳಿ ಎಂದು ಹೇಳಿದ್ದೆ. ಆದರೆ, ಹಿಂಬಾಲಿಸಿಕೊಂಡು ಬಂದು ಹಲ್ಲೆ ನಡೆಸಿದ್ದಾನೆ’ ಎಂದು ಜಯಂತ್ ಹೇಳಿದರು.

‘ಕಾರಿನ ನೋಂದಣಿ ಸಂಖ್ಯೆ ಪತ್ತೆಯಾಗಿದೆ. ಆರೋಪಿಗೆ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ ಮಾಡಿಸಿದ ಆರೋಪ: ತಲೆಮರೆಸಿಕೊಂಡ ಮುನಿರತ್ನ

ಸಂತ್ರಸ್ತೆ ಪರ ನ್ಯಾಯಾಲಯದಲ್ಲಿ ವಕಾಲತ್ತು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯವಯಸ್ಸಿನ ಮಹಿಳೆಯೊಬ್ಬರ ಮೇಲೆ ತನ್ನ ಸಹಚರರಿಂದ ಕಣ್ಣೆದುರೇ ಅತ್ಯಾಚಾರ ಮಾಡಿಸಿದ, ನಂತರ ಆಕೆಯ ಬಾಯಿಗೆ ಮೂತ್ರ ವಿಸರ್ಜಿಸಿದ ಮತ್ತು ಅಪಾಯಕಾರಿ ಚುಚ್ಚುಮದ್ದು ಕೊಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ಸಂತ್ರಸ್ತೆಯ ಪರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಸಲಾಗಿದೆ.

ಸಂತ್ರಸ್ತೆಯ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು ಗುರುವಾರ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಸಿದರು.


ವಕಾಲತ್ತು ಸ್ವೀಕರಿಸಿದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ಆರೋಪಿ ಮುನಿರತ್ನ ಸಲ್ಲಿಸಿರುವ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಹನುಮಂತರಾಯ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದರು. ಈಗಾಗಲೇ ಈ ಪ್ರಕರಣದಲ್ಲಿ ಜಾಮೀನು ಅರ್ಜಿಗೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಪರ ವಿಶೇಷ ಪ್ರಾಸಿಕ್ಯೂಟರ್ ಪ್ರದೀಪ್ ತಮ್ಮ ತಕರಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಪ್ರಕರಣವೇನು?: ‘ಬಿಜೆಪಿ ಕಾರ್ಯಕರ್ತೆಯಾಗಿದ್ದೆ ಎಂದು ಹೇಳಿಕೊಂಡಿರುವ 40 ವರ್ಷದ ಮಹಿಳೆಯ ಮೇಲೆ ಮುನಿರತ್ನ ಅವರು ತಮ್ಮ ಸಹಚರರಿಂದ 2023ರ ಜೂನ್ 11ರಂದು ಕಣ್ಣೆದುರು ಅತ್ಯಾಚಾರ ಮಾಡಿಸಿದ್ದಾರೆ. ಅತ್ಯಾಚಾರದ ನಂತರ ಸಂತ್ರಸ್ತೆಯ ಬಾಯಿಗೆ ತಮ್ಮ ಮೂತ್ರ ವಿಸರ್ಜಿಸಿದ್ದಾರೆ ಮತ್ತು ಆಕೆ ಜೀವನ ಪರ್ಯಂತ ನರಳುವಂತಹ ಚುಚ್ಚುಮದ್ದೊಂದನ್ನು ಕೊಡಿಸಿದ್ದಾರೆ’ ಎಂಬ ಗಂಭೀರ ಆರೋಪಕ್ಕೆ ಸಂಬಂಧಿಸಿದಂತೆ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಇದೇ 20ರಂದು ದೂರು ದಾಖಲಾಗಿದೆ.

ಸಂತ್ರಸ್ತೆಯು ಒಟ್ಟು ಐವರ ವಿರುದ್ಧ ಆರ್‌ಎಂಸಿ ಠಾಣೆಗೆ ದೂರು ನೀಡಿದ್ದರು. ಈ ಕ್ರಿಮಿನಲ್ ಪ್ರಕರಣದಲ್ಲಿ ಮೊದಲ ಆರೋಪಿಯನ್ನಾಗಿಸಿ ಮುನಿರತ್ನ ಮತ್ತು ನಂದಿನಿ ಲೇ ಔಟ್‌ನ ವಸಂತ, ಚನ್ನಕೇಶವ, ಆಶ್ರಯ ನಗರದ ಕಮಲ್ ಹಾಗೂ ಅನಾಮಧೇಯ ವ್ಯಕ್ತಿಯೊಬ್ಬನನ್ನು ಹೆಸರಿಸಲಾಗಿದೆ. ದೂರಿನ ಅನ್ವಯ ಭಾರತೀಯ ದಂಡ ಸಂಹಿತೆ–1860ರ ಕಲಂ 376 ಡಿ, 270, 323, 354, 504, 506,509 ಹಾಗೂ 34ರ ಅಪರಾಧಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಮುನಿರತ್ನ ಸದ್ಯ ತಲೆಮರೆಸಿಕೊಂಡಿದ್ದಾರೆ.

ದೂರಿನಲ್ಲಿ ಏನಿದೆ?

‘ಹೊಟ್ಟೆನೋವಿನ ಕಾರಣಕ್ಕೆ ನಾನು 2025ರ ಜನವರಿ 14ರಂದು ಸರ್ಕಾರಿ ಆಸ್ಪತ್ರೆಗೆ ತೆರಳಿದ್ದೆ. ಈ ವೇಳೆ ವೈದ್ಯರು ನನ್ನ ರಕ್ತ ಪರೀಕ್ಷೆ ನಡೆಸಿದಾಗ ಇಡಿಆರ್ ವೈರಸ್ ಕಾಯಿಲೆ ಇದೆ ಎಂದು ತಿಳಿಸಿದರು. ಇದಕ್ಕೆ ಚಿಕಿತ್ಸೆ ಪಡೆಯಲು ನಾನು ಮತ್ತೊಂದು ಆಸ್ಪತ್ರೆಗೆ ತೆರಳಿದಾಗ ವೈದ್ಯರು ರಕ್ತ ಪರೀಕ್ಷೆಯ ವರದಿ ನೋಡಿ ಇದು ವಾಸಿಯಾಗದ ಕಾಯಿಲೆ ಎಂದರು. ಇದರಿಂದ ಮನನೊಂದು ನಾನು 2025ರ ಮೇ 19ರಂದು ರಾತ್ರಿ 8 ಗಂಟೆ ವೇಳೆ ನನ್ನ ಮನೆಯಲ್ಲಿ ನನ್ನ ಬಳಿ ಇದ್ದ ಮಾತ್ರೆಗಳನ್ನು ನುಂಗಿ ಅಸ್ವಸ್ಥಳಾಗಿದ್ದೆ. ಈ ವೇಳೆ ನನ್ನ ಪರಿಚಯದ ವ್ಯಕ್ತಿಯೊಬ್ಬರು ನನ್ನನ್ನು ಆರ್‌ಎಂಸಿ ಯಾರ್ಡ್ ಠಾಣೆ ವ್ಯಾಪ್ತಿಯ ಆಸ್ಪತ್ರೆಯೊಂದಕ್ಕೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದರು’ ಎಂದು ಸಂತ್ರಸ್ತೆ ದೂರಿನಲ್ಲಿ ವಿವರಿಸಿದ್ದಾರೆ.



‘ಚಿತ್ತಾಪುರ ಘಟನೆ ಕ್ರಮ ಏಕಿಲ್ಲ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ತಾಪುರದ ಘಟನೆ ಕುರಿತು ಪೊಲೀಸ್ ಮಹಾನಿರ್ದೇಶಕ, ಮುಖ್ಯ ಕಾರ್ಯದರ್ಶಿ, ಗೃಹ ಸಚಿವ ಮತ್ತು ಮುಖ್ಯಮಂತ್ರಿಗೆ ದೂರು ಕೊಟ್ಟರೂ ಕ್ರಮ ಜರುಗಿಸಿಲ್ಲ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿ, ‘5 ಗಂಟೆ ನನ್ನನ್ನು ಕೂಡಿ ಹಾಕಿದ್ದರು. ಹೆಚ್ಚುವರಿ ಎಸ್‌.ಪಿ ಸ್ಥಳದಲ್ಲೇ ಇದ್ದರೂ ಕ್ರಮ ಕೈಗೊಳ್ಳಲಿಲ್ಲ. 5 ಗಂಟೆಗಳ ನಂತರ ಹೊರಗೆ ಕಳುಹಿಸಿದರು. ಎಲ್ಲ ಕಾರ್ಯಕ್ರಮ ರದ್ದು ಮಾಡಿ ರಾತ್ರಿ ಬೆಂಗಳೂರಿಗೆ ವಾಪಸ್ ಆದೆ. ಚಿತ್ತಾಪುರಕ್ಕೆ ನನ್ನನ್ನು ನೋಡಲು ಬಂದಿದ್ದ ಅಂಬಾರಾಯ ಅಷ್ಟಗಿ ಅವರ ಮೇಲೆ ಹಲ್ಲೆ ಮಾಡಿದ್ದಾರೆ ಇದಕ್ಕಾಗಿಯೇ ನಾನು ರಿಪಬ್ಲಿಕ್ ಆಫ್ ಕಲಬುರಗಿ’ ಎಂದಿದ್ದೆ’ ಎಂದರು.

ಕೊಳೆಗೇರಿಯಲ್ಲಿ ಉಪಶಾಮಕ ಚಿಕಿತ್ಸೆ

ಒನ್ ಬಿಲಿಯನ್ ಲಿಟರೇಟ್ಸ್ ಫೌಂಡೇಷನ್ ಸಹಯೋಗದಲ್ಲಿ ಸರ್ ಸಿ.ವಿ. ರಾಮನ್ ಆಸ್ಪತ್ರೆ ವ್ಯವಸ್ಥೆ

• ವರುಣ ಹೆಗಡೆ

ಬೆಂಗಳೂರು: ಕೊಳೆಗೇರಿ ನಿವಾಸಿಗಳಿಗೆ ಆಸ್ಪತ್ರೆಯ ಜತೆಗೆ ಅವರ ವಾಸಸ್ಥಳದಲ್ಲಿಯೇ ಉಪಶಾಮಕ ಚಿಕಿತ್ಸೆ ಒದಗಿಸಲು ಇಲ್ಲಿನ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಮುಂದಾಗಿದೆ.

ಈ ಸಂಬಂಧ ಆಸ್ಪತ್ರೆಯು ಒನ್ ಬಿಲಿಯನ್ ಲಿಟರೇಟ್ಸ್ ಫೌಂಡೇಷನ್ ಜತೆಗೆ ಒಡಂಬಡಿಕೆ ಮಾಡಿಕೊಂಡಿದೆ. ಆಸ್ಪತ್ರೆಯ ಸುತ್ತಮುತ್ತ ಕೊಳೆಗೇರಿ ಪ್ರದೇಶಗಳಿವೆ. ಇಲ್ಲಿನ ನಿವಾಸಿಗಳ ಆರೋಗ್ಯ ವೃದ್ಧಿಗೆ ಹಾಗೂ ಈಗಾಗಲೇ ಗಂಭೀರ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಆಸ್ಪತ್ರೆ ಸಿದ್ಧತೆ ಮಾಡಿಕೊಂಡಿದೆ. ಈಗಾಗಲೇ ಆಸ್ಪತ್ರೆಯಲ್ಲಿ ಉಪಶಾಮಕ ಚಿಕಿತ್ಸೆಗೆ ಪ್ರತ್ಯೇಕ ಹೊರರೋಗಿ ವಿಭಾಗ (ಒಪಿಡಿ) ಪ್ರಾರಂಭಿಸಲಾಗಿದ್ದು, ಒನ್ ಬಿಲಿಯನ್ ಲಿಟರೇಟ್ಸ್ ಫೌಂಡೇಷನ್‌ನ ವೈದ್ಯಕೀಯ ತಂಡವು ರೋಗಿಗಳನ್ನು ತಪಾಸಣೆ ಮಾಡುತ್ತಿದೆ.

ಈ ತಂಡವು ಸದ್ಯ ಪ್ರತಿ ಬುಧವಾರ ಆಸ್ಪತ್ರೆಗೆ ಭೇಟಿ ನೀಡುತ್ತಿದೆ. ಹೊರ ರೋಗಿಗಳ ಸಂಖ್ಯೆ ಆಧರಿಸಿ, ಮುಂದಿನ ದಿನಗಳಲ್ಲಿ ಆಸ್ಪತ್ರೆ ಭೇಟಿ ಅವಧಿಯನ್ನು ಎರಡು ದಿನಗಳಿಗೆ ವಿಸ್ತರಿಸಲೂ ಯೋಜನೆ ರೂಪಿಸಿದೆ. ಆಸ್ಪತ್ರೆಯಲ್ಲಿ ಉಪಶಾಮಕ ಚಿಕಿತ್ಸೆಗಾಗಿ 12 ಹಾಸಿಗೆಗಳ ವಾರ್ಡ್ ಅನ್ನು ಸಜ್ಜುಗೊಳಿಸಲಾಗಿದ್ದು, ತಲಾ ಆರು ಹಾಸಿಗೆಗಳನ್ನು ಪುರುಷರು ಹಾಗೂ ಮಹಿಳೆಯರಿಗೆ ಮೀಸಲಿಡಲಾಗಿದೆ. ಚಿಕಿತ್ಸೆಗೆ ಅಗತ್ಯವಿರುವ ಔಷಧಗಳನ್ನು ಆಸ್ಪತ್ರೆಯೇ ಒದಗಿಸುತ್ತಿದೆ.

ಅಂಕಿ ಅಂಶಗಳು

700-800 ಆಸ್ಪತ್ರೆಗೆ ಭೇಟಿ ನೀಡುವ ಹೊರರೋಗಿಗಳು

250 ಆಸ್ಪತ್ರೆ ಹೊಂದಿರುವ ಬೆಡ್‌ಗಳು

ಕೊಳೆಗೇರಿಯಲ್ಲಿ ಒಪಿಡಿ: ಕ್ಯಾನ್ಸರ್, ಹೃದ್ರೋಗ, ಪಾರ್ಶ್ವವಾಯು, ಶ್ವಾಸಕೋಶ ಮತ್ತು ಮೂತ್ರಪಿಂಡ ಸಮಸ್ಯೆಗಳು ಗಂಭೀರ ಸ್ವರೂಪ ಪಡೆದಿದ್ದಲ್ಲಿ, ಅಂತಹ ರೋಗಿಗಳಿಗೆ ನೋವು ಶಮನ ಮಾಡಲು ಈ ಚಿಕಿತ್ಸೆ ಸಹಕಾರಿ. ಕೊಳೆಗೇರಿ ನಿವಾಸಿಗಳು ದುಡಿಮೆ ಸಂಬಂಧ ದಿನವಿಡೀ ಹೊರಗಡೆ ಹೋಗುವುದರಿಂದ, ಮನೆಯಲ್ಲಿನ ರೋಗಿಗಳನ್ನು ಚಿಕಿತ್ಸೆಗೆ ಕರೆದೊಯ್ಯಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ಕೊಳೆಗೇರಿಯಲ್ಲಿಯೇ ಹೊರ ರೋಗಿ ಚಿಕಿತ್ಸಾ ಘಟಕ (ಒಪಿಡಿ) ಪ್ರಾರಂಭಕ್ಕೆ ಆಸ್ಪತ್ರೆ ಮುಂದಾಗಿದೆ. ಈ ಸಂಬಂಧ ಕಟ್ಟಡಗಳಲ್ಲಿನ ನೆಲಮಹಡಿಯ ಸ್ಥಳಾವಕಾಶ ಅಗತ್ಯವಿದ್ದು, ಸರ್ವಜ್ಞ ನಗರದ ಶಾಸಕ ಕೆ.ಜೆ. ಜಾರ್ಜ್ ಅವರ ಜತೆಗೂ ಆಸ್ಪತ್ರೆಯ ವೈದ್ಯಾಧಿಕಾರಿಗಳು ಮಾತುಕತೆ ನಡೆಸಿದ್ದಾರೆ.

‘ಕೊಳೆಗೇರಿ ಪ್ರದೇಶದಲ್ಲಿ ಸ್ಥಳಾವಕಾಶ ಗುರುತಿಸಿದ ಬಳಿಕ ಅಲ್ಲಿಯೇ ನಾಲ್ಕೈದು ಹಾಸಿಗೆ ಅಳವಡಿಸಿ, ಒಪಿಡಿ ಸೇವೆ ಒದಗಿಸಲಾಗುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವವರನ್ನು ಅಲ್ಲಿಂದ ಆಸ್ಪತ್ರೆಗೆ ಕರೆತರಲಾಗುತ್ತದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ್ ಕೆ.ಎಸ್. ತಿಳಿಸಿದರು.



ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಹೊರನೋಟ

ಉಪಶಾಮಕ ಚಿಕಿತ್ಸೆಯು ನೋವು ನಿವಾರಣೆಗೆ ಸಹಕಾರಿ. ಕೊಳೆಗೇರಿಯ ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಶಕ್ತಿ ಕುಟುಂಬಸ್ಥರಿಗೆ ಇರುವುದಿಲ್ಲ. ಚಿಕಿತ್ಸೆಗೆ ಕ್ರಮವಹಿಸಲಾಗಿದೆ

ಡಾ.ರಾಜೇಶ್ ಕೆ.ಎಸ್., ವೈದ್ಯಕೀಯ ಅಧೀಕ್ಷಕ, ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ

ಮೊಬೈಲ್ ವ್ಯಾನ್ ಬಳಕೆ

ಕೊಳೆಗೇರಿ ನಿವಾಸಿಗಳಿಗೆ ಉಪಶಾಮಕ ಚಿಕಿತ್ಸೆ ಒದಗಿಸುವ ಸಂಬಂಧ ಮೊಬೈಲ್ ವ್ಯಾನ್ ಬಳಕೆ ಮಾಡಲು ಸಹ ಆಸ್ಪತ್ರೆ ನಿರ್ಧರಿಸಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ವಾಹನ ಖರೀದಿಸಿ, ಅದನ್ನು ಒನ್ ಬಿಲಿಯನ್ ಲಿಟರೇಟ್ಸ್ ಫೌಂಡೇಷನ್ ತಂಡಕ್ಕೆ ಒದಗಿಸಲು ಯೋಜನೆ ರೂಪಿಸಲಾಗಿದೆ. ಆಸ್ಪತ್ರೆ ಅಥವಾ ಕೊಳೆಗೇರಿ ಪ್ರದೇಶದಲ್ಲಿ ನಿರ್ಮಿಸಿದ ಒಪಿಡಿ ಘಟಕಕ್ಕೆ ಬರಲು ಸಾಧ್ಯವಾಗದವರಿಗೆ ಮನೆ ಬಾಗಿಲಲ್ಲಿಯೇ ಉಪಶಾಮಕ ಚಿಕಿತ್ಸೆ ಒದಗಿಸಲು ಈ ವಾಹನವನ್ನು ಬಳಸಿಕೊಳ್ಳಲಾಗುತ್ತದೆ. ಅದೇ ರೀತಿ, ರೋಗಿಗಳನ್ನು ಕರೆತರುವುದಕ್ಕೂ ಇದನ್ನು ಉಪಯೋಗಿಸಿಕೊಳ್ಳಲಾಗುತ್ತದೆ.

ಅನಧಿಕೃತ ಬಡಾವಣೆ ನಿಯಂತ್ರಣಕ್ಕೆ ಕಾಯ್ದೆ: ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿನ ಅನಧಿಕೃತ ಬಡಾವಣೆಗಳ ನಿಯಂತ್ರಣಕ್ಕೆ ಜುಲೈ ವೇಳೆಗೆ ಕಾಯ್ದೆಯನ್ನು ತರಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ 1.99 ಕೋಟಿ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇಂತಹ ಸಾಧನೆ ಮಾಡಿದ ಪ್ರಥಮ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇ-ಸ್ವತ್ತಿನಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ವಾಟ್ಸ್‌ಆ್ಯಪ್ ಚಾಟ್‌ಬಾಟ್ ಮೂಲಕವೇ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ಒದಗಿಸಲಾಗಿದೆ. ತೆರಿಗೆ ಪಾವತಿಯಲ್ಲೂ ಪ್ರಗತಿಯಾಗಿದ್ದು, ₹1,273.34 ಕೋಟಿ ತೆರಿಗೆ ಸಂಗ್ರಹವಾಗಿದೆ ಎಂದು ಹೇಳಿದರು.

ಪಂಚಾಯಿತಿ ವಿಕೇಂದ್ರೀಕರಣ ಕುರಿತು ದೇಶದ ಎಲ್ಲಾ ರಾಜ್ಯಗಳಲ್ಲಿ ನಡೆಸಿರುವ ಅಧ್ಯಯನ ವರದಿಯನ್ನು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ಬಿಡುಗಡೆಗೊಳಿಸಿದ್ದು, ಸೂಚ್ಯಂಕ ಪಟ್ಟಿಯಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ. ಪಂಚಾಯತ್ ಸಬಲೀಕರಣ, ಆರ್ಥಿಕ ಸ್ವಾಯತ್ತತೆ ಮತ್ತು ಆಡಳಿತ ಸುಧಾರಣೆಗಳ ಕುರಿತು ರಾಜ್ಯಗಳನ್ನು ಮೌಲ್ಯಮಾಪನ ಮಾಡುವ ಪಿಡಿಐ ಚೌಕಟ್ಟು, ಕಾರ್ಯಗಳು, ಹಣಕಾಸು, ಕಾರ್ಯನಿರ್ವಾಹಕರು, ಸಾಮರ್ಥ್ಯ ವೃದ್ಧಿ ಮತ್ತು ಹೊಣೆಗಾರಿಕೆ ಸೇರಿದಂತೆ ಆರು ಪ್ರಮುಖ ಅಂಶಗಳನ್ನು ಆಧರಿಸಿ ಮೌಲ್ಯಮಾಪನ ಮಾಡಲಾಗಿದೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶದ ತ್ಯಾಜ್ಯ ನಿರ್ವಹಣೆಯನ್ನು ಮಹಿಳೆಯರೇ ನಿರ್ವಹಿಸುತ್ತಿದ್ದಾರೆ. 5,910 ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ತರಬೇತಿ ನೀಡಲಾಗಿದೆ. ಈ ಒಕ್ಕೂಟಗಳಲ್ಲಿ 12,211 ಮಹಿಳೆಯರು ಸದಸ್ಯರಾಗಿದ್ದು, ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಕೊಂಡಿದ್ದಾರೆ. 3,469 ಮಹಿಳಾ ಚಾಲಕಿಯರು ತ್ಯಾಜ್ಯ ವಾಹನಗಳನ್ನು ಚಾಲನೆ ಮಾಡುತ್ತಿದ್ದಾರೆ. ಉದ್ಯೋಗ ಖಾತ್ರಿ ಮೂಲಕ 55 ಲಕ್ಷ ಜನರಿಗೆ ಉದ್ಯೋಗ ಸಿಕ್ಕಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ 5,895 ಅರಿವು ಕೇಂದ್ರಗಳಿದ್ದು, 5,770 ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಪಂಚಾಯತಿ ಗ್ರಂಥಾಲಯಗಳಲ್ಲಿ 50.62 ಲಕ್ಷ ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ. ಗ್ರಾಮೀಣ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಹೆಚ್ಚಳಕ್ಕೆ ಅರಿವು ಕೇಂದ್ರಗಳು ನೆರವಾಗುತ್ತಿವೆ. ಹಲವು ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ತೇರ್ಗಡೆಯಾಗಿದ್ದಾರೆ ಎಂದರು.

ನಗರದಲ್ಲಿ ಇಂದು

ತಿಲಕನಗರ ಕರಗ: ಬೆಳಿಗ್ಗೆ 7ಕ್ಕೆ ದೇವಿಗೆ ಅಭಿಷೇಕ ಮಂಗಳಾರತಿ, ಮಧ್ಯಾಹ್ನ 12ಕ್ಕೆ ಅಗ್ನಿಕುಂಡ ಪೂಜೆ, ಸಂಜೆ 5ಕ್ಕೆ ದೇವಿಗೆ ಕರಗ ಅಲಂಕಾರ, ಮಠಾಧೀಶರಿಂದ ಪ್ರವಚನ, 6ಕ್ಕೆ ಬಿ.ಟಿ.ಬಿ. ಪ್ರದೇಶದ ತೀರ್ಥಕಾಳಿ ಅಮ್ಮನ ದೇವಸ್ಥಾನದ ಬಳಿ ಹೂವಿನ ಕರಗ ಹಾಗೂ ಮಹಾಕಾಳಿ ಪೂಜೆ, ರಾತ್ರಿ 8ಕ್ಕೆ ಹೂವಿನ ಕರಗ, ಮಾಲೆ ಧರಿಸಿದ ಭಕ್ತಾದಿಗಳಿಂದ ಸಾಮೂಹಿಕ ಕೊಂಡ ನಡೆತ ಮಹೋತ್ಸವ, 8.30ಕ್ಕೆ ತಿಲಕನಗರದ ಎಲ್ಲ ರಸ್ತೆಗಳಲ್ಲಿ ಹೂವಿನ ಕರಗದ ಸಾಮೂಹಿಕ ಮೆರವಣಿಗೆ, ಸ್ಥಳ: ಮಹಾಶಕ್ತಿ ಮಾರಿಅಮ್ಮ ದೇವಸ್ಥಾನ, ತಿಲಕನಗರ

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, ತಾಂತ್ರಿಕ ಸಮ್ಮೇಳನ: ಉದ್ಘಾಟನೆ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ಕೆ. ವೆಂಕಟೇಶ್, ಬೈರತಿ ಸುರೇಶ್, ಅಧ್ಯಕ್ಷತೆ: ಕೆ.ಸಿ. ವೀರಣ್ಣ, ಉಪಸ್ಥಿತಿ: ವೆಂಕಟಾಚಲ ವಿ.ಎಸ್., ಲತಾ ಡಿ.ಎಚ್., ಎಚ್.ಎಂ. ಜಯಪ್ರಕಾಶ್, ಸಂಗಪ್ಪ ದೊಡ್ಡಬಸಪ್ಪ ವಾಲಿಕಾರ, ಬಸವರಾಜ ಪಿ. ಭತಮುರ್ಗೆ, ಪಿ.ಟಿ. ರಮೇಶ್, ಆಯೋಜನೆ: ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್, ಸ್ಥಳ: ಕನ್ನಡ ಸಭಾಂಗಣ, ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣ, ಹೆಬ್ಬಾಳ, ಬೆಳಿಗ್ಗೆ 10.30ರಿಂದ

ಇಂಡಿಯಾ ಎಂಎಸ್‌ಎಂಇ ಸಮಾವೇಶ–2025: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಶೋಭಾ ಕರಂದ್ಲಾಜೆ, ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ, ಟಿ. ರಘುಮೂರ್ತಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಎಫ್‌ಕೆಸಿಸಿಐ, ಕಾಸಿಯಾ, ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 10.30

ಮಾವು, ಹಲಸಿನ ಮೇಳಕ್ಕೆ ಚಾಲನೆ: ರಾಮಲಿಂಗಾರೆಡ್ಡಿ, ಆಯೋಜನೆ: ತೋಟಗಾರಿಕೆ ಇಲಾಖೆ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ನಿಗಮ, ಸ್ಥಳ: ಲಾಲ್‌ಬಾಗ್, ಬೆಳಿಗ್ಗೆ 11

ಕಾಲೇಜಿನ ಅಂಗಳದಲ್ಲಿ ಜನಪದ ಸಮಾರೋಪ, ಪ್ರಶಸ್ತಿಪತ್ರ ವಿತರಣೆ: ಆರ್. ಚಂದ್ರಶೇಖರ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ್, ಉಪಸ್ಥಿತಿ: ಹಿದಾಯತ್ ಅಹಮದ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11.30

ನಾಟಕೋತ್ಸವ: ಸಂಜೆ 6ಕ್ಕೆ ‘ಬೆಟ್ಟಕ್ಕೆ ಚಳಿಯಾದರೆ’ ನಾಟಕ ಪ್ರದರ್ಶನ: ರಚನೆ: ಕೆ.ವಿ. ಸುಬ್ಬಣ್ಣ, ನಿರ್ದೇಶನ: ಶಿಶಿರ ವಿ. ಶಾಸ್ತ್ರಿ, ಸಂಜೆ 7.30ಕ್ಕೆ ‘ಪೊಲೀಸರಿದ್ದಾರೆ ಎಚ್ಚರಿಕೆ’ ನಾಟಕ ಪ್ರದರ್ಶನ: ರಚನೆ: ಪಿ. ಲಂಕೇಶ್, ನಿರ್ದೇಶನ: ವಿಶಾಲ್ ಕಶ್ಯಪ್, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ


ಬರಗೂರು ರಾಮಚಂದ್ರಪ್ಪ

‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ ಪ್ರದಾನ: ಬರಗೂರು ರಾಮಚಂದ್ರಪ್ಪ, ಅತಿಥಿ: ಮಾನಸ, ಅಧ್ಯಕ್ಷತೆ: ದ್ವಾರನಕುಂಟೆ ಪಾತಣ್ಣ, ತೀರ್ಪುಗಾರರು: ಚನ್ನಪ್ಪ ಕಟ್ಟಿ, ಶಶಿಧರ ಹಾಲಾಡಿ, ಉಪಸ್ಥಿತಿ: ವಿ. ರೇಣುಕಾ ಪ್ರಸನ್ನ, ಪ್ರಶಸ್ತಿ ಸ್ವೀಕರಿಸುವವರು: ರವಿಕುಮಾರ್ ನೀಹ, ಮಹಾಂತೇಶ ನವಲಕಲ್, ಗೀತಾ ಮಂಜು ಬೆಣ್ಣೆಹಳ್ಳಿ, ಶಶಿ ತರೀಕೆರೆ, ಶಿವರಾಜ ಬ್ಯಾಡರಹಳ್ಳಿ, ಕರವೀರ ಪ್ರಭು ಕ್ಯಾಲಕೊಂಡ, ಧರಣೇಂದ್ರ ಕುರಕರಿ, ಮಹಾಂತೇಶ ಪಾಟೀಲ, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5

ಚೈತನ್ಯ ಸಂಜೆ ‘ಅಂಬಿಗರ ಚೌಡಯ್ಯ ಜಯಂತಿ’ ಉಪನ್ಯಾಸ: ಸಂಗಮೇಶ ಗೌಡಪ್ಪನವರ, ಅಧ್ಯಕ್ಷತೆ: ಗೀತಾ ಜಯಂತ್, ಉಪಸ್ಥಿತಿ: ಅರುಣಾ ಚಂದ್ರಶೇಖರ್, ಪ್ರಮೀಳಾ ಫಾಲನೇತ್ರ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಎಂಟನೇ ವಿಭಾಗ, ಜಯನಗರ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿಕೆ

ಸಿಎಂ–ಡಿಸಿಎಂ ಮುಸುಕಿನ ಗುದ್ದಾಟ

ಪ್ರಜಾವಾಣಿ ವಾರ್ತೆ


ಆರ್. ಅಶೋಕ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ನಡೆಯುತ್ತಿರುವ ಮುಸುಕಿನ ಗುದ್ದಾಟ ಅಧಿಕಾರ ಹಸ್ತಾಂತರದ ಗಳಿಗೆ ಹತ್ತಿರ ಬರುತ್ತಿದ್ದಂತೆ ಸ್ಫೋಟವಾಗುವ ಎಲ್ಲ ಲಕ್ಷಣಗಳೂ ಸ್ಪಷ್ಟವಾಗಿ ಕಾಣುತ್ತಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ತಮ್ಮ ಅನುಮತಿ ಪಡೆಯದೆ ಮುಖ್ಯ ಎಂಜಿನಿಯರ್‌ಗಳನ್ನು ವರ್ಗಾವಣೆ ಮಾಡಿದ ಡಿಪಿಎಆರ್ ನಡೆಗೆ ಆಕ್ಷೇಪ ವ್ಯಕ್ತಪಡಿಸಿ ಡಿ.ಕೆ. ಶಿವಕುಮಾರ್ ಅವರು ಮುಖ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದ ಜೊತೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅಶೋಕ, ‘ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಮುಖ್ಯಮಂತ್ರಿಯ ಆದೇಶದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಡಿ.ಕೆ. ಶಿವಕುಮಾರ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರ ರಾಜ್ಯ ಕಾಂಗ್ರೆಸ್ ಸರ್ಕಾರದ ಆಂತರಿಕ ಸಂಘರ್ಷಕ್ಕೆ ಪುಷ್ಟಿ ನೀಡಿದೆ’ ಎಂದಿದ್ದಾರೆ. ‘ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ, ಕಾಂಗ್ರೆಸ್ ಪಕ್ಷದ ಆಂತರಿಕ ಕಚ್ಚಾಟದಿಂದ ಕರ್ನಾಟಕದ ಅಭಿವೃದ್ಧಿ ಸೊರಗುತ್ತಿದೆ’ ಎಂದೂ ಅವರು ಹೇಳಿದ್ದಾರೆ.

‘ಜಲಸಂಪನ್ಮೂಲ ಇಲಾಖೆಯಲ್ಲಿ ಹೆಚ್ಚು ಎಂಜಿನಿಯರ್‌ಗಳಿಲ್ಲ’

‘ಜಲಸಂಪನ್ಮೂಲ ಇಲಾಖೆಯಲ್ಲಿ ಹೆಚ್ಚು ಎಂಜಿನಿಯರ್‌ಗಳಿಲ್ಲ. ನಮಗೆ ತುರ್ತಾಗಿ ಎಂಜಿನಿಯರ್‌ಗಳು ಬೇಕು. ಹೀಗಾಗಿ, ನನ್ನ ಇಲಾಖೆಯಿಂದ ಯಾರನ್ನೂ ಬೇರೆಡೆಗೆ ಕಳಿಸಬೇಡಿ ಎಂದು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ತಮ್ಮ ಅನುಮತಿ ಪಡೆಯದೆ ಮುಖ್ಯ ಎಂಜಿನಿಯರ್‌ಗಳ ವರ್ಗಾವಣೆಗೆ ಆಕ್ಷೇಪ ವ್ಯಕ್ತಪಡಿಸಿ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಜಲಸಂಪನ್ಮೂಲ ಇಲಾಖೆಗೆ ಬಂದು ಬಡ್ತಿ ಪಡೆದು ನಂತರ ಲೋಕೋಪಯೋಗಿ, ಜಿಲ್ಲಾ ಪಂಚಾಯಿತಿ ಸೇರಿದಂತೆ ಇತರ ಇಲಾಖೆಗಳಿಗೆ ವರ್ಗಾವಣೆ ಪಡೆಯುತ್ತಾರೆ’ ಎಂದು ಸ್ಪಷ್ಟನೆ ನೀಡಿದರು.

‘ನಿಮ್ಮ ಅನುಮತಿ ಇಲ್ಲದೆ ಯಾರು ವರ್ಗಾವಣೆ ಮಾಡಿದ್ದಾರೆ’ ಎಂದು ಕೇಳಿದಾಗ, ‘ಉನ್ನತ ಮಟ್ಟದಲ್ಲಿ ಈ ರೀತಿ ವರ್ಗಾವಣೆ ಮಾಡಲು ಅವಕಾಶ ಇದೆ. ಅನೇಕ ಶಾಸಕರು ತಮಗೆ ಬೇಕಾದವರನ್ನು ಬೇರೆ ಇಲಾಖೆಗೆ ಕಳುಹಿಸಿಕೊಡಿ ಎಂದು ಒತ್ತಡ ಹಾಕುತ್ತಾರೆ. ಜಲಸಂಪನ್ಮೂಲ ಇಲಾಖೆಯಲ್ಲಿ ಕೆಲಸ ಮಾಡಲು ಎಂಜಿನಿಯರ್‌ಗಳು ಮುಂದೆ ಬರುತ್ತಿಲ್ಲ. ಈ ದೃಷ್ಟಿಯಿಂದ ನನ್ನ ಗಮನಕ್ಕೆ ತರದೆ ಯಾರನ್ನೂ ವರ್ಗಾವಣೆ ಮಾಡಬೇಡಿ ಎಂದು ಸೂಚನೆ ನೀಡಿದ್ದೇನೆ’ ಎಂದರು.

ಜೂನ್ 7, 8ಕ್ಕೆ ಸಾಹಿತ್ಯ ಪರಿಷದ್‌ನ ಅಧಿವೇಶನ

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ರಾಜ್ಯಮಟ್ಟದ ನಾಲ್ಕನೇ ಅಧಿವೇಶನವನ್ನು ಜೂನ್ 7 ಮತ್ತು 8ರಂದು ದಾವಣಗೆರೆಯ ಗುಂಡಿ ಮಹಾದೇವಪ್ಪ ಕಲ್ಯಾಣಮಂಟಪದಲ್ಲಿ ಆಯೋಜಿಸಲಾಗಿದೆ.

ಪರಿಷದ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಬಾಗಲಕೋಟೆಯ ಸಾಹಿತಿ ಎಸ್.ಜಿ. ಕೋಟೆ ಅವರನ್ನು ಅಧಿವೇಶನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ‘ಸಾಹಿತ್ಯದಲ್ಲಿ ಸತ್ವ’ಎಂಬ ವಿಷಯದಡಿಯಲ್ಲಿ ಅಧಿವೇಶನ ನಡೆಯಲಿದೆ’ ಎಂದು ತಿಳಿಸಿದರು.

ಚಿಂತಕ ಪ್ರೇಮಶಂಕರ್ ಉದ್ಘಾಟಿಸುವರು. ಪರಿಷದ್‌ನಿಂದ ಪ್ರಕಟಗೊಳ್ಳುವ ಪುಸ್ತಕವನ್ನು ಸಾಹಿತಿ ಸಂಗಮೇಶ್ವರ ಸವದತ್ತಿಮಠ ಬಿಡುಗಡೆಗೊಳಿಸಲಿದ್ದಾರೆ. ‘ಸಾಹಿತ್ಯದಲ್ಲಿ ಸತ್ವ’ ಕುರಿತು ಎರಡು ದಿನ ಚರ್ಚೆ, ಸಂವಾದ, ಕವಿಗೋಷ್ಠಿಗಳು ನಡೆಯಲಿವೆ. ಅಧಿವೇಶನದಲ್ಲಿ ಪುಸ್ತಕ ಮೇಳ ಆಯೋಜಿಸಲಾಗಿದೆ ಎಂದು ತಿಳಿಸಿದರು.

‘ಕೆಐಎಡಿಬಿ ಕಾಮಗಾರಿಯಲ್ಲಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ವಿದ್ಯುತ್ ವಿಭಾಗದಲ್ಲಿ ನಡೆಸಿರುವ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ವೈಭವ ಕರ್ನಾಟಕ ಭೂ ರಕ್ಷಣಾ ವೇದಿಕೆ ಆರೋಪಿಸಿದೆ.

2022–2023ನೇ ಸಾಲಿನಲ್ಲಿ ನಕಲಿ ಪರವಾನಗಿ ಮತ್ತು ಬ್ಯಾಂಕ್ ನಿಶ್ಚಿತ ಠೇವಣಿ (ಎಫ್‌ಡಿ) ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವ ಅನರ್ಹ ಗುತ್ತಿಗೆದಾರರಾದ ಗೀತಾ ಎಲೆಕ್ಟ್ರಾನಿಕ್ಸ್‌ಗೆ ಹಾಗೂ ಗುತ್ತಿಗೆದಾರರಾದ ಕುಮಾರ್ ಎಲೆಕ್ಟ್ರಾನಿಕ್ಸ್ ಮತ್ತು ಅರವಿಂದ ಎಲೆಕ್ಟ್ರಾನಿಕ್ಸ್‌ಗೆ ಅಕ್ರಮವಾಗಿ ಟೆಂಡರ್ ಹಂಚಿಕೆ ಮಾಡಲಾಗಿದೆ. ಈ ಮೂರು ಗುತ್ತಿಗೆದಾರ ಕಂಪನಿಗಳು ಒಂದೇ ಮನೆಯವರದ್ದಾಗಿವೆ ಎಂದು ವೇದಿಕೆಯ ಅಧ್ಯಕ್ಷ ಮೋಹನ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಜಗದೀಶ ರೆಡ್ಡಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಗುತ್ತಿಗೆ ಪಡೆದವರು ಯಾವುದೇ ಕಾಮಗಾರಿ ನಡೆಸಿಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಕೇಳಿದರೆ ಅಧಿಕಾರಿಗಳು ಮಾಹಿತಿಯನ್ನೂ ನೀಡುತ್ತಿಲ್ಲ. ಅಕ್ರಮವಾಗಿ ಗುತ್ತಿಗೆ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವೇದಿಕೆಯ ಹರೀಶ್, ಭಗವಾನ್, ಬಸವರಾಜ್ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಕೆಎಸ್‌ಆರ್‌ಟಿಸಿ ಪ್ಯಾಕೇಜ್ ಟೂರ್

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ(ಕೆಎಸ್‌ಆರ್‌ಟಿಸಿ) ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ‘ಬೆಂಗಳೂರು-ಶ್ರೀರಂಗಪಟ್ಟಣ-ಕಲ್ಲಹಳ್ಳಿ-ಮೇಲುಕೋಟೆ’ ಮಾರ್ಗದಲ್ಲಿ ವಾರಾಂತ್ಯದ ದಿನಗಳಾದ ಶನಿವಾರ ಮತ್ತು ಭಾನುವಾರ ಪ್ಯಾಕೇಜ್ ಪ್ರವಾಸ ಮೇ 31ರಂದು ಆರಂಭಗೊಳ್ಳಲಿದೆ.

ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹೊರಟು ರಾತ್ರಿ 8.15ಕ್ಕೆ ಬೆಂಗಳೂರಿಗೆ ವಾಪಸ್ ಆಗಲಿದೆ. ಈ 350 ಕಿಲೋಮೀಟರ್ ಪ್ರವಾಸಕ್ಕೆ ಮುಂಗಡ ಬುಕ್ಕಿಂಗ್ ಸೇರಿ ವಯಸ್ಕರಿಗೆ ₹ 670 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ ₹ 500 ಟಿಕೆಟ್ ದರ ಇರಲಿದೆ. ಟಿಕೆಟ್‌ಗೆ www.ksrtc.in ಅಥವಾ www.ksrtc.karnataka.gov.in ವೆಬ್‌ಸೈಟ್ ಸಂಪರ್ಕಿಸಬಹುದು. ಮಾಹಿತಿಗೆ ದೂರವಾಣಿ: 080-26252625, ಮೊಬೈಲ್: 7760990100/560/287 ಸಂಪರ್ಕಿಸಿ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಉಚಿತ ಔಷಧ ಖಚಿತಪಡಿಸಿ’

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ಆವರಣದೊಳಗೆ ಇದ್ದ ಜನೌಷಧ ಕೇಂದ್ರಗಳನ್ನು ರದ್ದು ಪಡಿಸಿರುವುದು ಸರಿಯಾದ ಕ್ರಮ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧ ಯಾವಾಗಲೂ ಲಭ್ಯ ಇರುವಂತೆ ಮಾಡಬೇಕು ಎಂದು ಸಾರ್ವತ್ರಿಕ ಆರೋಗ್ಯ ಆಂದೋಲನ–ಕರ್ನಾಟಕ (ಎಸ್‌ಎಎ–ಕೆ) ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಆಂದೋಲನದ ರಾಜೇಶ್ ಮತ್ತು ಪ್ರಸನ್ನ ಅವರು ಮಾತನಾಡಿ, ‘ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಖಾಸಗಿ ಮಳಿಗೆಗಳಿಗೆ ಅವಕಾಶ ಇರಬಾರದು. ಅದಕ್ಕಾಗಿ ಎರಡು ವರ್ಷದಿಂದ ಹೋರಾಟ ಮಾಡಿಕೊಂಡು ಬಂದಿದ್ದೆವು. ಇದೀಗ ಆರೋಗ್ಯ ಸಚಿವರು ಕ್ರಮ ಕೈಗೊಂಡಿದ್ದಾರೆ. ಇಷ್ಟಕ್ಕೆ ನಿಂತರೆ ಪ್ರಯೋಜನವಿಲ್ಲ. ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧ ಸಿಗದೇ ಜನರು ಪರದಾಡುವಂತಾಗಬಾರದು’ ಎಂದು ಹೇಳಿದರು.

ಖರೀದಿಸಿದ ಪ್ರತಿ ಔಷಧದ ಗುಣಮಟ್ಟವನ್ನು ಪರೀಕ್ಷಿಸಬೇಕು. ಔಷಧ ಖರೀದಿಯ ಪ್ರಮಾಣ, ದಾಸ್ತಾನು ನಿರ್ಧರಿಸಲು ತಂತ್ರಜ್ಞಾನ ಬಳಸಬೇಕು ಎಂದು ಆಗ್ರಹಿಸಿದರು. ಆಂದೋಲನದ ರಿತಾಶ್, ಬೇಬಿ, ಸೌಮ್ಯಾ ಕೆ.ಆರ್. ನಿಶಾ, ಭೂದೇವಿ, ಆಶಾ ಕೀಲಾರ ಸುದ್ದಿಗೋಷ್ಠಿಯಲ್ಲಿ ಇದ್ದರು.

ಗಾಯನ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಗಾಯನ ಸಮಾಜವು ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ವಾರ್ಷಿಕ ಸಂಗೀತ ಸ್ಪರ್ಧೆ ಹಮ್ಮಿಕೊಂಡಿದ್ದು, ಆಸಕ್ತ ಸಂಗೀತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಜೂನ್ 1ರಿಂದ ಜೂನ್ 25ರ ಒಳಗೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ವಿವರ ಹಾಗೂ ಅರ್ಜಿ ಪ್ರತಿ www.gayanasamaja.org ಯಲ್ಲಿ ಲಭ್ಯ ಎಂದು ಬೆಂಗಳೂರು ಗಾಯನ ಸಮಾಜದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿ ಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ

‘ಹೋಟೆಲ್ ಉದ್ಯಮದ ಕೊಡುಗೆ ಅಪಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಆರ್ಥಿಕತೆಗೆ ಹಾಗೂ ಪ್ರವಾಸೋದ್ಯಮದ ಬೆಳವಣಿಗೆಗೆ ಹೋಟೆಲ್ ಉದ್ಯಮದ ಕೊಡುಗೆ ಅಪಾರವಾಗಿದೆ’ ಎಂದು ಆದಿ ಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಗುರುವಾರ ನಡೆದ ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ 70ನೇ ವಾರ್ಷಿಕೋತ್ಸವ ಹಾಗೂ ಆತಿಥ್ಯ ರತ್ನ, ಉದ್ಯಮ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಯಲ್ಲಿ ಹೋಟೆಲ್ ಉದ್ಯಮ ಮಹತ್ವದ ಪಾತ್ರವಹಿಸುತ್ತಿದೆ. ಇದರಿಂದ ನಮ್ಮ ಸಂಸ್ಕೃತಿ, ಆಚಾರ–ವಿಚಾರಗಳು, ಸ್ಥಳೀಯ ಆಹಾರ ಪದ್ಧತಿಯನ್ನು ವಿಶ್ವಕ್ಕೆ ಪರಿಚಯಿಸಲಾಗುತ್ತಿದೆ. ಹೋಟೆಲ್ ಉದ್ಯಮದ ಎಲ್ಲ ರೀತಿಯ ಸಮಸ್ಯೆಗಳಿಗೆ ಜನಪ್ರತಿನಿಧಿಗಳು ಸ್ಪಂದಿಸಬೇಕು. ಈ ಉದ್ಯಮದಲ್ಲಿರುವವರಿಗೆ ಕೌಶಲ ತರಬೇತಿ ನೀಡಬೇಕು. ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿ ಹಲವಾರು ಕೋರ್ಸ್‌ಗಳಿದ್ದು, ಆಸಕ್ತರು ಪ್ರವೇಶ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ಹೋಟೆಲ್ ಉದ್ಯಮವು ರಾಜ್ಯದ ಧಾರ್ಮಿಕ, ಪ್ರವಾಸೋದ್ಯಮ ಕ್ಷೇತ್ರಗಳಿಗೆ ಬರುವ ಪ್ರವಾಸಿಗರಿಗೆ ಆತಿಥ್ಯ ನೀಡುವುದರ ಜೊತೆಗೆ ಇಲ್ಲಿನ ಆಹಾರ, ಸ್ಥಳೀಯ ಸಂಸ್ಕೃತಿಯನ್ನು ಪರಿಚಯಿಸುತ್ತಿದೆ. ಇದು ರಾಜ್ಯದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಗತಿಗೆ ಕೊಡುಗೆ ನೀಡುತ್ತಿದೆ. ನಮ್ಮ ರಾಜ್ಯದಲ್ಲಿ 30 ಲಕ್ಷಕ್ಕೂ ಹೆಚ್ಚು ಮಂದಿ ಈ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಟಿಂಬರ್‌ಟೇಲ್ ರೆಸಾರ್ಟ್ ಮತ್ತು ಸ್ಪಾ ಅಧ್ಯಕ್ಷ ಜಗನ್ನಾಥ್ ಪೈ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಚಾನ್ಸೆರಿ ಹೋಟೆಲ್‌ನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ)ಕೆ.ವಿ. ಕುಪ್ಪುರಾಜ್, ಈಶಾನ್ಯ ಕೇಕ್‌ವಾಲಾ–ತಾಜಾ ತಿಂಡಿ ಅಧ್ಯಕ್ಷ ಜಿ. ಶ್ರೀನಿವಾಸ್ ರಾವ್, ಪಾಕಶಾಲಾ ಅಧ್ಯಕ್ಷ ಕೆ.ಎನ್. ವಾಸುದೇವ ಅಡಿಗ, ಕನ್ನಿಕಾ ಇಂಟರ್‌ನ್ಯಾಷನಲ್‌ನ ಎಂ.ಡಿ ಬಿ.ಆರ್. ನಾಗೇಂದ್ರ ಪ್ರಸಾದ್, ವಿಷ್ಣು ಭವನ ಎಂ.ಡಿ ಸಿ. ನಾರಾಯಣ ಗೌಡ, ಮಥುರಾ ಹೋಟೆಲ್‌ನ ಎಂ.ಡಿ ಗೋಪಿನಾಥ್, ಹರಿಪ್ರಿಯ ಹೋಟೆಲ್‌ನ ಎಂ.ಡಿ ಸುಧಾಕರ್ ಶೆಟ್ಟಿ, ವಿಶ್ವನಾಥ ಪ್ಯಾಲೆಸ್‌ನ ಎಂ.ಡಿ ರಾಜೇಂದ್ರ ವಿ. ಶೆಟ್ಟಿ, ಸಾಗರ್ ಗ್ರೂಪ್ ಮತ್ತು ಗಾಯತ್ರಿ ವಿಹಾರ್ ಸಮೂಹದ ಅಧ್ಯಕ್ಷ ಪಂಕಜ್ ಕೊಠಾರಿ ಅವರಿಗೆ ‘ಆತಿಥ್ಯ ರತ್ನ’ ಪ್ರಶಸ್ತಿ ನೀಡಲಾಯಿತು. 1522 ಗ್ರೂಪ್‌ನ ಎಂ.ಡಿ ಚೇತನ್ ಹೆಗಡೆ, ಮೇಘನಾ ಫುಡ್ಸ್‌ನ ಎಂ.ಡಿ ಬಿ. ರಮೇಶ್, ಶುಭಶ್ರೀ ಗ್ರೂಪ್‌ನ ಎಂ.ಡಿ ಶಾಂತೇಶ್ ಕೆ., ಅವರಿಗೆ ಉದ್ಯಮ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.


ನಗರದ ಎಫ್‌ಕೆಸಿಸಿಐನ ಸರ್ ಎಂ.ವಿ. ಸಭಾಂಗಣದಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಟಿಂಬರ್‌ಟೇಲ್ ರೆಸಾರ್ಟ್ ಮತ್ತು ಸ್ಪಾ ಅಧ್ಯಕ್ಷ ಜಗನ್ನಾಥ್ ಪೈ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಥಾವರಚಂದ್ ಗೆಹಲೋತ್, ಜಿ.ಕೆ. ಶೆಟ್ಟಿ, ನಿರ್ಮಲಾನಂದನಾಥ ಸ್ವಾಮೀಜಿ, ಡಾ.ಸಿ.ಎನ್. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಜ್ಞಾನವನ್ನು ಎಷ್ಟು ಸಂಪಾದಿಸಿದರೂ ಮನುಷ್ಯನು ನಿಗರ್ವಿಯಾಗಿ ಇರಬೇಕು.

–ಪಂಡಿತ ತಾರಾನಾಥ

ಶಾಲೆಗಳಲ್ಲಿ ಶಿಕ್ಷಕರ ಕೊರತೆ ಬೇಕಿದೆ ಶಾಶ್ವತ ಪರಿಹಾರ

ಶಿಕ್ಷಕರ ತೀವ್ರ ಕೊರತೆಯನ್ನು ನೀಗಿಸಲು 2025–26ನೇ ಶೈಕ್ಷಣಿಕ ವರ್ಷಕ್ಕೆ 51 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಲಾಗುವುದು ಎಂದು ಕರ್ನಾಟಕದ ಶಿಕ್ಷಣ ಇಲಾಖೆಯು ತಿಳಿಸಿದೆ. ಈ ನೇಮಕಾತಿ ಪೂರ್ಣಗೊಂಡಲ್ಲಿ ಇದು ಈವರೆಗಿನ ಗರಿಷ್ಠ ಸಂಖ್ಯೆಯ ನೇಮಕವಾಗಲಿದೆ. ಮೇಲ್ನೋಟಕ್ಕೆ ಇದು ಸ್ವಾಗತಾರ್ಹ ಮತ್ತು ದೀರ್ಘಾವಧಿ ಬಿಕ್ಕಟ್ಟೊಂದಕ್ಕೆ ತಕ್ಷಣದ ಪ್ರತಿಸ್ಪಂದನ ಎಂಬಂತೆ ಕಾಣಿಸುತ್ತಿದೆ. ಆದರೆ, ಈ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಿಸಿ ಸರ್ಕಾರದ ಯೋಜನೆ, ಆದ್ಯತೆಗಳು ಮತ್ತು ಬದ್ಧತೆಯ ಕುರಿತು ಹಲವು ಕಠಿಣ ಪ್ರಶ್ನೆಗಳು ಎದುರಾಗುತ್ತವೆ. ಮೊದಲನೆಯದಾಗಿ, 50 ಸಾವಿರಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳನ್ನು ಖಾಲಿ ಬಿಟ್ಟಿರುವಂತಹ ಸನ್ನಿವೇಶವನ್ನು ನಾವು ಸೃಷ್ಟಿ ಮಾಡಿಕೊಂಡಿದ್ದಾದರೂ ಏಕೆ? ಅಲ್ಪಾವಧಿಯಲ್ಲಿ ಅತ್ಯಗತ್ಯವಾದ ಈ ನೇಮಕವು ವ್ಯವಸ್ಥೆಯ ವೈಫಲ್ಯಕ್ಕೆ ಕಣ್ಣಿಗೆ ಕುಕ್ಕುವ ಉದಾಹರಣೆಯಾಗಿದೆ. ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವುದು ಸಮಸ್ಯೆಗೆ ಇರುವ ತುರ್ತು ಸ್ಪಂದನವೇ ವಿನಾ ಶಾಶ್ವತ ಪರಿಹಾರವಲ್ಲ. ಇಷ್ಟೊಂದು ಹುದ್ದೆಗಳನ್ನು ಖಾಲಿ ಬಿಟ್ಟಿರುವುದು ಆಡಳಿತ ವ್ಯವಸ್ಥೆಯು ಎಷ್ಟೊಂದು ನಿರ್ಲಕ್ಷ್ಯದಿಂದ ಇದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ.



ಶಿಕ್ಷಕರ ನೇಮಕಾತಿಗೆ ರಾಜ್ಯ ಸರ್ಕಾರವು ವೇಗ ತುಂಬಬೇಕು. ಶಿಕ್ಷಕರಿಗೆ ತರಬೇತಿ ನೀಡಿ ಶಾಲೆಗಳಲ್ಲಿ ಸ್ಥಿರತೆ ಇರುವಂತೆ ನೋಡಿಕೊಳ್ಳಬೇಕು

ಕಾಯಂ ಶಿಕ್ಷಕರ ನೇಮಕ ಆಗುವವರೆಗೆ ಅಥವಾ ಈ ಶೈಕ್ಷಣಿಕ ವರ್ಷದ ಕೊನೆಯವರೆಗೆ ಮಾತ್ರ ಈ ಅತಿಥಿ ಶಿಕ್ಷಕರು ಕೆಲಸದಲ್ಲಿ ಇರುತ್ತಾರೆ. ಅದಾದ ಬಳಿಕ ಅವರು ಏನು ಮಾಡಬೇಕು? ತಾತ್ಕಾಲಿಕ ಕೆಲಸವು ಮುಂದೊಂದು ದಿನ ಕಾಯಂ ಆಗಬಹುದು ಎಂಬ ನಿರೀಕ್ಷೆಯಲ್ಲಿ ಈ ಅತಿಥಿ ಶಿಕ್ಷಕರು ಉತ್ತಮ ವೇತನ ನೀಡುವ ಖಾಸಗಿ ಶಾಲೆಗಳ ಬದಲಿಗೆ ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ದುರದೃಷ್ಟವೆಂದರೆ, ಅತಿಥಿ ಶಿಕ್ಷಕರ ಈ ನಿರೀಕ್ಷೆ ಸಾಕಾರವಾದ ನಿದರ್ಶನಗಳು ಈಚಿನ ವರ್ಷಗಳಲ್ಲಂತೂ ಇಲ್ಲ. ಹಲವು ವರ್ಷ ಅತಿಥಿ ಶಿಕ್ಷಕರಾಗಿ ಕೆಲಸ ಮಾಡಿದವರು ಕಾಯಂ ಶಿಕ್ಷಕರ ನೇಮಕವಾದ ಕೂಡಲೇ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಇವರಲ್ಲಿ ಹಲವರಿಗೆ ನಿಗದಿತ ವಿದ್ಯಾರ್ಹತೆ ಇರುವುದಿಲ್ಲ. ಹಲವು ವರ್ಷ ಬೋಧನೆಯ ಕೆಲಸ ಮಾಡಿದವರಿಗೆ ಹೊಸ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಯೋಮಿತಿ ಅಡ್ಡ ಬರುತ್ತದೆ. ಪರ್ಯಾಯ ಕೆಲಸವನ್ನು ಹುಡುಕಿಕೊಳ್ಳುವುದಕ್ಕೂ ವಯಸ್ಸು ತೊಡಕಾಗುತ್ತದೆ. ಆದರೆ, ಇಂತಹ ತಾತ್ಕಾಲಿಕ ನೀತಿಯು ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಅತಿಥಿ ಶಿಕ್ಷಕರು ಮಾತ್ರವಲ್ಲದೆ ಅವರ ಮೇಲೆ ಅವಲಂಬಿತರಾಗಿರುವ ವಿದ್ಯಾರ್ಥಿಗಳ ಮೇಲೆಯೂ ಈ ವ್ಯವಸ್ಥೆಯು ಕೆಟ್ಟ ಪರಿಣಾಮ ಬೀರುತ್ತದೆ. ಪರಿಶಿಷ್ಟ ಜಾತಿಯ ಒಳಮೀಸಲು ವರ್ಗೀಕರಣವು ಪೂರ್ಣಗೊಂಡ ಬಳಿಕ ಕಾಯಂ ನೇಮಕಾತಿ ನಡೆಯಲಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಅದಕ್ಕಾಗಿ ಎಷ್ಟು ಸಮಯ ಕಾಯಬೇಕು? ನೇಮಕಾತಿ ಎಂಬುದು ನಿರಂತರವಾಗಿ ತಡೆಯಿಲ್ಲದೆ ನಡೆಯಬೇಕಾದ ಪ್ರಕ್ರಿಯೆಯೇ ಹೊರತು ಹುದ್ದೆಗಳು ಖಾಲಿ ಉಳಿದು ಬಿಕ್ಕಟ್ಟು ಎದುರಾದಾಗ ನಡೆಸುವ ಹೋರಾಟ ಅಲ್ಲ. ಆಡಳಿತಾತ್ಮಕ ಅದಕ್ಷತೆ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆಯು ಶಿಕ್ಷಣದಂತಹ ಮಹತ್ವದ ಕ್ಷೇತ್ರದ ಮೇಲೆ ಬೀರುವ ಪರಿಣಾಮಕ್ಕೆ ದೊಡ್ಡ ಬೆಲೆ ತೆರಬೇಕಾಗುತ್ತದೆ.

ದತ್ತಾಂಶಗಳು ದಿಗಿಲುಗೊಳಿಸುವ ರೀತಿಯಲ್ಲಿವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 20,875 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕಲಬುರಗಿ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣ ಪ್ರಮಾಣವು ಕೇವಲ ಶೇ 42.43ರಷ್ಟಿದೆ ಎಂಬುದು ಆಶ್ಚರ್ಯ ಹುಟ್ಟಿಸಲು ಕಾರಣವೇ ಇಲ್ಲ. ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳಲ್ಲಿನ ಉತ್ತೀರ್ಣ ಪ್ರಮಾಣವು ಶೇ 62.07ರಷ್ಟು ಇದೆ. ಆದರೆ, ಸಮಾಜ ಕಲ್ಯಾಣ ಇಲಾಖೆ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕೆಆರ್‌ಇಐಎಸ್) ನಡೆಸುವ ಶಾಲೆಗಳು ಶೇ 91ರಷ್ಟು ಫಲಿತಾಂಶ ಪಡೆದು ಅಚ್ಚರಿ ಮೂಡಿಸಿವೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಮಕ್ಕಳ ಭವಿಷ್ಯಕ್ಕೆ ಅಡಿಪಾಯ ಹಾಕುತ್ತವೆ. ಹಾಗಾಗಿ, ಕರ್ನಾಟಕ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸುವ ವಿಚಾರದಲ್ಲಿ ಗಂಭೀರವಾಗಿದ್ದರೆ, ತಾತ್ಕಾಲಿಕ ಪರಿಹಾರಗಳ ಆಚೆಗಿನ ದಾರಿ ಹುಡುಕಿಕೊಳ್ಳಬೇಕು. ಅಗತ್ಯ ವಿದ್ಯಾರ್ಹತೆ ಇರುವ ಕಾಯಂ ಶಿಕ್ಷಕರನ್ನು ನೇಮಿಸುವುದು ಮಾತ್ರ ಇಲ್ಲಿ ಇರುವ ಪರಿಹಾರ. ರಾಜ್ಯ ಸರ್ಕಾರವು ಗಟ್ಟಿ ನಿರ್ಧಾರ ಕೈಗೊಂಡು ನೇಮಕಾತಿಗೆ ವೇಗ ತುಂಬಬೇಕು. ಶಿಕ್ಷಕರಿಗೆ ತರಬೇತಿ ನೀಡಿ ಶಾಲೆಗಳಲ್ಲಿ ಸ್ಥಿರತೆ ಇರುವಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಅರೆ ಬರೆ ಶಿಕ್ಷಣ ವ್ಯವಸ್ಥೆ ಬೇಕಾಗಿಲ್ಲ. ವಿದ್ಯಾರ್ಥಿಗಳ ಭವಿಷ್ಯವನ್ನು ಬೆಳಗಬಲ್ಲ ರೀತಿಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು ರಾಜ್ಯ ಸರ್ಕಾರದ ಹೊಣೆಗಾರಿಕೆಯಾಗಿದೆ.

1971ರ ನಂತರದ ಜನಸಂಖ್ಯಾ ದತ್ತಾಂಶವನ್ನಷ್ಟೇ ಗಮನಿಸಿದಾಗ ಗ್ರಹಿಕೆ ವಿರೂಪಗೊಳ್ಳುತ್ತದೆ

ಜನಸಂಖ್ಯೆ, ಪ್ರಜಾತಂತ್ರ: ಶುರುವಾಗಿದೆ ಚರ್ಚೆ



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಇತಿಹಾಸಕಾರ ಹಾಗೂ ವಿದ್ವಾಂಸ ರವಿ ಕೆ. ಮಿಶ್ರಾ ಅವರು 150 ವರ್ಷಗಳಲ್ಲಿ ಭಾರತದ ಜನಸಂಖ್ಯೆ ಬೆಳೆದ ಬಗೆಯ ಕುರಿತು ಪ್ರಮುಖವಾದ ಒಂದು ಸಂಶೋಧನೆ ನಡೆಸಿದ್ದಾರೆ. ಸಂಸತ್ತಿನ ಎರಡೂ ಸದನಗಳ ಹಾಗೂ ರಾಜ್ಯ ವಿಧಾನಸಭೆಗಳ ಸಂಖ್ಯಾಬಲವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅನ್ವಯಿಸಬೇಕಾದ ಸೂತ್ರದ ಕುರಿತು ಈಗ ನಡೆಯುತ್ತಿರುವ ವಾಗ್ವಾದಕ್ಕೆ ಈ ಸಂಶೋಧನೆಯು ಹೊಸ ಆಯಾಮವನ್ನು ಒದಗಿಸಿದೆ.

ರಾಜ್ಯಗಳ ವಿಧಾನಸಭೆಗಳ ಹಾಗೂ ಸಂಸತ್ತಿನ ಉಭಯ ಸದನಗಳ ಸಂಖ್ಯಾಬಲವನ್ನು ಪ್ರತಿ ಹತ್ತು ವರ್ಷಕ್ಕೆ ಒಮ್ಮೆ ನಡೆಯುವ ಜನಗಣತಿಯ ನಂತರದಲ್ಲಿ ಪರಿಷ್ಕರಿಸಲು ಅವಕಾಶವಿದೆ. ಆದರೆ ಪರಿಷ್ಕರಣೆಯು ಎಲ್ಲ ಬಾರಿಯೂ ನಡೆದಿಲ್ಲ. ಕಡೆಯ ಬಾರಿ ಪರಿಷ್ಕರಣೆ ಆಗಿರುವುದು 1971ರ ಜನಗಣತಿಯ ನಂತರ. 1976ರಲ್ಲಿ ಇಂದಿರಾ ಗಾಂಧಿ ನೇತೃತ್ವದ ಸರ್ಕಾರವು ಸಂಖ್ಯಾಬಲವನ್ನು 1971ರ ಮಟ್ಟದಲ್ಲಿಯೇ ಇರಿಸಲು ತೀರ್ಮಾನಿಸಿತು. ನಂತರದಲ್ಲಿ, 2001ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಈ ವಿಷಯವನ್ನು ಬಿಜೆಪಿಯ ಮುಖಂಡ ಮದನ್‌ಲಾಲ್ ಖುರಾನಾ ಅವರು ಮತ್ತೆ ಮುನ್ನೆಲೆಗೆ ತಂದಿದ್ದರು. 2001ರ ಜನಗಣತಿಯ ಅಂಕಿ–ಅಂಶಗಳನ್ನು ಇರಿಸಿಕೊಂಡು ಲೋಕಸಭೆಯ ಸಂಖ್ಯಾಬಲವನ್ನು ಹೆಚ್ಚಿಸಬೇಕು ಎಂದು ಖುರಾನಾ ಒತ್ತಾಯಿಸಿದ್ದರು. ಇದನ್ನು ದಕ್ಷಿಣದ ಡಿಎಂಕೆ, ಟಿಡಿಪಿ ಸೇರಿದಂತೆ ಹಲವು ಪಕ್ಷಗಳು ವಿರೋಧಿಸಿದ್ದವು.

ಹಿಂದಿನ ದಶಕಗಳಲ್ಲಿ ಜನಸಂಖ್ಯಾ ನಿಯಂತ್ರಣ ಯೋಜನೆಗಳನ್ನು ಬಹಳ ಯಶಸ್ವಿಯಾಗಿ ಜಾರಿಗೆ ತರುವಲ್ಲಿ ದಕ್ಷಿಣದ ರಾಜ್ಯಗಳು ತೋರಿದ ಸಾಧನೆಯನ್ನು ಪರಿಗಣಿಸುವ ಹೊಸ ಸೂತ್ರವನ್ನು ರೂಪಿಸುವವರೆಗೆ ಸೀಟುಗಳ ಸಂಖ್ಯೆಯನ್ನು ಹೆಚ್ಚು ಮಾಡಬಾರದು ಎಂದು ಒತ್ತಾಯಿಸಿ ಟಿಡಿಪಿಯು ಪ್ರಧಾನಿಯವರ ಬಳಿಗೆ ಸಂಸದರ ನಿಯೋಗ ಕಳುಹಿಸಿತ್ತು. ಜನಸಂಖ್ಯೆಯನ್ನು ಮಾತ್ರವೇ ಆಧರಿಸಿ ರಾಜ್ಯಗಳ ಲೋಕಸಭಾ ಸ್ಥಾನಗಳನ್ನು ನಿರ್ಣಯಿಸಿದರೆ, ಉತ್ತರ ಭಾರತದ ಹಾಗೂ ಮಧ್ಯ ಭಾರತದ ರಾಜ್ಯಗಳು ಹೊಂದುವ ಸ್ಥಾನಗಳಿಗಿಂತ ಕಡಿಮೆ ಸ್ಥಾನಗಳನ್ನು ದಕ್ಷಿಣದ ರಾಜ್ಯಗಳು ಪಡೆಯುತ್ತವೆ. ಏಕೆಂದರೆ ದಕ್ಷಿಣದ ರಾಜ್ಯಗಳು ಜನಸಂಖ್ಯಾ ನಿಯಂತ್ರಣ ಯೋಜನೆಯನ್ನು ಬಹಳ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿವೆ ಎಂದು ನಿಯೋಗವು ವಾದಿಸಿತ್ತು. ಅಂದರೆ, ಜನಸಂಖ್ಯೆಯನ್ನು ಮಾತ್ರವೇ ಆಧರಿಸಿದರೆ ದಕ್ಷಿಣದ ರಾಜ್ಯಗಳಿಗೆ ಶಿಕ್ಷೆ ಕೊಟ್ಟಂತಾಗುತ್ತದೆ.

ಆ ಸಂದರ್ಭದಲ್ಲಿ ಲಭ್ಯವಿದ್ದ ದತ್ತಾಂಶಗಳನ್ನು ಆಧರಿಸಿ, ಅಂದರೆ ಸರಿಸುಮಾರು 25 ವರ್ಷಗಳ ಹಿಂದೆ, 1981–91ರ ದಶಕದಲ್ಲಿ ಜನಸಂಖ್ಯಾ ಏರಿಕೆಯ ಶೇಕಡಾವಾರು ಪ್ರಮಾಣವು ಬಿಹಾರದಲ್ಲಿ 23.54ರಷ್ಟು, ಮಧ್ಯಪ್ರದೇಶದಲ್ಲಿ 26.84ರಷ್ಟು, ರಾಜಸ್ಥಾನದಲ್ಲಿ 28.84ರಷ್ಟು, ಉತ್ತರಪ್ರದೇಶದಲ್ಲಿ 25.48ರಷ್ಟು ಇತ್ತು ಎಂದು ದಕ್ಷಿಣದ ಸಂಸದರು ಹೇಳಿದ್ದರು. ಏರಿಕೆಯ ಶೇಕಡಾವಾರು ಪ್ರಮಾಣವು ಕೇರಳದಲ್ಲಿ 14.32ರಷ್ಟು, ತಮಿಳುನಾಡಿನಲ್ಲಿ 15.39ರಷ್ಟು, ಕರ್ನಾಟಕದಲ್ಲಿ 21.26ರಷ್ಟು, ಆಂಧ್ರಪ್ರದೇಶದಲ್ಲಿ 24.20ರಷ್ಟು ಮತ್ತು ಗೋವಾದಲ್ಲಿ 16.08ರಷ್ಟು ಇತ್ತು. 2001ರ ನಂತರದಲ್ಲಿಯೂ ಬೆಳವಣಿಗೆಯ ಪ್ರಮಾಣವು ಸರಿಸುಮಾರು ಇದೇ ಆಗಿದೆ. ಹೀಗಿರುವಾಗ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಜನಸಂಖ್ಯೆಯನ್ನು ಮಾತ್ರವೇ ಆಧರಿಸಿ ಹೇಗೆ ಪರಿಷ್ಕರಣೆ ಮಾಡುವುದು? ದಕ್ಷಿಣದ ರಾಜ್ಯಗಳು ಜನಸಂಖ್ಯೆಯ ನಿಯಂತ್ರಣದಲ್ಲಿ ತೋರಿರುವ ಸಾಧನೆಯನ್ನು ಪರಿಗಣಿಸಿ ಹೊಸ ಸೂತ್ರವೊಂದನ್ನು ಕಂಡುಕೊಳ್ಳಬೇಕಾಗುತ್ತದೆ.


ವಿಷಯವನ್ನು ಇನ್ನಷ್ಟು ಮುಂದುವರಿಸುವುದು ಬೇಡ ಎಂದು ತೀರ್ಮಾನಿಸಿದ ವಾಜಪೇಯಿ ನೇತೃತ್ವದ ಮೈತ್ರಿಕೂಟ ಸರ್ಕಾರವು ಸಂವಿಧಾನದ 82ನೇ ವಿಧಿಗೆ ತಿದ್ದುಪಡಿಯೊಂದನ್ನು ತಂದಿತು. ಆ ತಿದ್ದುಪಡಿಯು '2026ರ ನಂತರದ ಮೊದಲ ಜನಗಣತಿಯ ಅಂಕಿ–ಅಂಶಗಳು ಪ್ರಕಟವಾಗುವವರೆಗೆ ಲೋಕಸಭೆಯಲ್ಲಿನ ರಾಜ್ಯಗಳ ಸೀಟುಗಳನ್ನು ಮರುಹೊಂದಾಣಿಕೆ ಮಾಡುವ ಅಗತ್ಯ ಇಲ್ಲ' ಎಂದು ಹೇಳಿತು. ಈಗ 2026ನೇ ಇಸವಿ ಹತ್ತಿರವಾಗುತ್ತಿದೆ. ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ದಕ್ಷಿಣದ ಇತರ ನಾಯಕರು ಲೋಕಸಭಾ ಸ್ಥಾನಗಳ ಮರುವಿಂಗಡಣೆಯ ಚರ್ಚೆಯನ್ನು ಮತ್ತೆ ಮುಂದಕ್ಕೆ ತಂದಿದ್ದಾರೆ.

ವಿದ್ವಾಂಸರಾದ ರವಿ ಕೆ. ಮಿಶ್ರಾ ಅವರು ಆಧುನಿಕ ಭಾರತದ ರಾಜಕೀಯ ಮತ್ತು ಬೌದ್ಧಿಕ ಇತಿಹಾಸದ ಬಗ್ಗೆ ಸಂಶೋಧನೆ ನಡೆಸಿದ್ದಾರೆ, ಬರಹಗಳನ್ನು ಪ್ರಕಟಿಸಿದ್ದಾರೆ. ಅವರು ಈಗ ನವದೆಹಲಿಯಲ್ಲಿರುವ 'ಪ್ರಧಾನಮಂತ್ರಿ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ'ದ (ಪಿಎಂಎಂಎಲ್) ಜಂಟಿ ನಿರ್ದೇಶಕರಾಗಿದ್ದಾರೆ. 'ಡೆಮಾಗ್ರಫಿ, ಡಿಲಿಮಿಟೇಷನ್, ರೆಪ್ರೆಸೆಂಟೇಷನ್ – ದಿ ನಾರ್ತ್‌–ಸೌತ್ ಡಿವೈಡ್ ಇನ್ ಇಂಡಿಯಾ' ಹೆಸರಿನ ಪುಸ್ತಕದಲ್ಲಿ ಅವರು ಹೊಸ ದತ್ತಾಂಶಗಳನ್ನು ಒದಗಿಸಿದ್ದಾರೆ. 1872ರ ನಂತರದ 150 ವರ್ಷಗಳ ಅವಧಿಯಲ್ಲಿ ನಡೆದ ಎಲ್ಲ ದಶವಾರ್ಷಿಕ ಜನಗಣತಿಗಳ ಸಮಗ್ರ ಅಧ್ಯಯನವು ಇದಕ್ಕೆ ಆಧಾರ. ಜಿಲ್ಲಾ ಗೆಜೆಟಿಯರ್, ಗಡಿ ಆಯೋಗದ ವರದಿಗಳು, ಬೇರೆ ಬೇರೆ ರಾಜ್ಯಗಳ ಮರುವಿಂಗಡಣೆ ಕಾಯ್ದೆಗಳು ಮತ್ತು ಕೆಲವು ಸಂಬಂಧಪಟ್ಟ ಸಮೀಕ್ಷೆಗಳಿಂದಲೂ ಮಾಹಿತಿಯನ್ನು ಕಲೆಹಾಕಲಾಗಿದೆ.

ಒಂದೂವರೆ ಶತಮಾನದ ಅವಧಿಯಲ್ಲಿ ಆಗಿರುವ ಜನಸಂಖ್ಯೆಯ ಸ್ವರೂಪದಲ್ಲಿನ ಬದಲಾವಣೆಗಳನ್ನು ಗಮನಿಸಿದಾಗ ಉತ್ತರ ಭಾರತದ, ಅಂದರೆ ಇಡೀ ಹಿಂದಿ ಭಾಷಿಕ ಪ್ರದೇಶದ ಜನಸಂಖ್ಯೆಯು ದೇಶದ ಇತರ ಪ್ರದೇಶಗಳ ಜನಸಂಖ್ಯೆಗಿಂತ ತೀರಾ ಅಸಮಪ್ರಮಾಣದಲ್ಲಿ ಹೆಚ್ಚಳ ಆಗಿಲ್ಲ ಎಂದು ಮಿಶ್ರಾ ಅವರು ಪ್ರತಿಪಾದಿಸಿದ್ದಾರೆ. ಉತ್ತರ ಭಾರತದ ಜನಸಂಖ್ಯೆಯ ಪಾಲು 1881ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 50ರಷ್ಟು ಇದ್ದಿದ್ದು 1951ರಲ್ಲಿ ಶೇ 45ಕ್ಕೆ ಬಂದಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣದ ರಾಜ್ಯಗಳ ಜನಸಂಖ್ಯೆಯ ಪಾಲು 1881ರಲ್ಲಿ ಶೇ 22ರಷ್ಟು ಇದ್ದಿದ್ದು 1951ರಲ್ಲಿ ಶೇ 26ಕ್ಕೆ ಏರಿಕೆ ಆಗಿದೆ ಎಂದು ಅವರು ಹೇಳುತ್ತಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣದ ರಾಜ್ಯಗಳ ಪಾಲು 1951ರ ನಂತರದಲ್ಲಿ ಕಡಿಮೆ ಆಗುತ್ತಾ ಬಂದಿದ್ದು, 2011ರಲ್ಲಿ ಶೇ 20.75ಕ್ಕೆ ತಲುಪಿದೆ ಎಂದು ಅವರು ಹೇಳಿದ್ದಾರೆ. 1971ರ ನಂತರದ ಅವಧಿಯ ಜನಸಂಖ್ಯಾ ದತ್ತಾಂಶವನ್ನು ಮಾತ್ರ ಗಮನಿಸಿದಾಗ, ಗ್ರಹಿಕೆಯು ವಿರೂಪಗೊಳ್ಳುತ್ತದೆ ಎಂಬುದು ಅವರ ಅಂಬೋಣ.

ಉತ್ತರದ ರಾಜ್ಯಗಳು ಈಗ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೂಡ ಮುಂದಕ್ಕೆ ಬರುತ್ತಿವೆ, ಈ ರಾಜ್ಯಗಳನ್ನು 'ಬಿಮಾರು' ಎಂದು ತುಚ್ಛವಾಗಿ ಕರೆಯುವುದು ಈಗ ಸರಿಯಾಗುವುದಿಲ್ಲ ಎಂದು ಮಿಶ್ರಾ ಹೇಳುತ್ತಾರೆ. ಇವೆಲ್ಲವೂ ನಮ್ಮನ್ನು ಒಂದು ಪ್ರಶ್ನೆಯ ಬುಡಕ್ಕೆ ತಂದು ನಿಲ್ಲಿಸುತ್ತವೆ. ಪ್ರತಿ ರಾಜ್ಯದಲ್ಲಿ 1951ರಿಂದ ಆಗಿರುವ ಜನಸಂಖ್ಯೆಯ ಬದಲಾವಣೆಯನ್ನು ಮಾತ್ರವೇ ಪರಿಗಣಿಸಬೇಕೇ ಅಥವಾ ಭಾರತದಲ್ಲಿ ದಶವಾರ್ಷಿಕ ಜನಗಣತಿಯನ್ನು ಶುರುಮಾಡಿದಾಗಿನಿಂದ ಅಂದರೆ ಒಂದು ಶತಮಾನ ಅಥವಾ ಅದಕ್ಕೂ ಹೆಚ್ಚಿನ ಅವಧಿಯಿಂದ ಆಗಿರುವ ಬದಲಾವಣೆಗಳನ್ನು ಪರಿಗಣಿಸಬೇಕೇ ಎಂಬುದು ಆ ಪ್ರಶ್ನೆ.

ಮಿಶ್ರಾ ಅವರ ಸಂಶೋಧನೆಯು ಒದಗಿಸುವ ದತ್ತಾಂಶವು 1951ಕ್ಕೆ ಮೊದಲು ದಕ್ಷಿಣದ ರಾಜ್ಯಗಳ ಜನಸಂಖ್ಯೆಯ ಏರಿಕೆಯು ಉತ್ತರದ ರಾಜ್ಯಗಳ ಜನಸಂಖ್ಯೆಯ ಹೆಚ್ಚಳಕ್ಕಿಂತ ಜಾಸ್ತಿ ಇತ್ತು ಎಂದು ಹೇಳುತ್ತದೆ. ಇದನ್ನು ಪರಿಗಣಿಸಿದರೆ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸಂಬಂಧಿಸಿದ ಚರ್ಚೆಯು ಇನ್ನಷ್ಟು ತೀವ್ರತೆ ಪಡೆಯುತ್ತದೆ. ಭಾರತದ ಸಾಮಾಜಿಕ ಮತ್ತು ರಾಜಕೀಯ ವೈವಿಧ್ಯವನ್ನು ಗಮನಿಸಿ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ನ್ಯಾಯಸಮ್ಮತವಾದ ಸೂತ್ರವೊಂದನ್ನು ರೂಪಿಸಬೇಕಾಗುತ್ತದೆ. ದೇಶದ ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ ಜಿಎಸ್‌ಟಿ ವ್ಯವಸ್ಥೆಯನ್ನು ರೂಪಿಸಬಹುದು ಎಂದಾದರೆ, ಈ ಕೆಲಸ ಕೂಡ ಸಾಧ್ಯ ಎಂದಾಗುತ್ತದೆ. ಆದರೆ, ಹೀಗೆ ಸೂತ್ರ ರೂಪಿಸುವಾಗ 'ರಾಜಕೀಯ' ಇರಬಾರದು, 'ನ್ಯಾಯ'ಕ್ಕೆ ಹೆಚ್ಚಿನ ಬೆಲೆ ಇರಬೇಕು.



ಚುರುಮುರಿ



ರಾಜಕೀಯ ಅಂದ್ರೆ...

• ಬಿ.ಎನ್.ಮಲ್ಲೇಶ್

'ಮಂಜಮ್ಮ, ಈ 'ರಾಜಕೀಯ ಮಾಡ್ತಾನೆ' ಅಂತಾರಲ್ಲ, ಹಂಗಂದ್ರೆ ಏನು? ಏನರ್ಥ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಅದಕ್ಕೆ ನಮೂನಿ ನಮೂನಿ ಅರ್ಥ ಅದಾವು. ಹೋಲ್‌ಸೇಲಾಗಿ ಹೇಳ್ಬೇಕಂದ್ರ, ಮಾಡಬಾರದ್ದನ್ನ ಮಾಡ್ತಾನೆ ಅಂತ ಅರ್ಥ' ಮಂಜಮ್ಮ ನಕ್ಕಳು.

'ಮತ್ತೆ ರಾಜಕಾರಣಿ ಅಂದ್ರ ಮಾಡಬಾರದ್ದನ್ನ ಮಾಡೋನು ಅಂತಾನಾ?'

'ಎಲ್ಲರೂ ಹಂಗಿಲ್ಲ, ಕೆಲವರು ಒಳ್ಳೇರದಾರೆ'.

'ಅದಿರ್ಲಿ, ಇದು ಗೊತ್ತಾ? ನಮ್ ಇಬ್ರು ನಾಯಕರು ರಾಜ್ಯದಲ್ಲಿ ರಾಜಕಾರಣದ ಕಾಲೇಜು ಶುರು ಮಾಡ್ತಾರಂತೆ. ಒಳ್ಳೇ ರಾಜಕಾರಣಿಗಳನ್ನ ತಯಾರು ಮಾಡ್ತಾರಂತೆ, ಪೇಪರಲ್ಲಿ ಬಂದಿತ್ತು' ತೆಪರೇಸಿ ಹೇಳಿದ.

'ಹೌದಾ? ಏನೇನ್ ಕಲಿಸ್ತಾರಂತೆ ಅಲ್ಲಿ?'

'ಸಿಲಬಸ್ ಬಾಳ ಐತಂತೆ, ಮೊದಲನೇ ಪಾಠ 'ರಾಜಕಾರಣ ಅಂದ್ರೇನು?'

'ರಾಜಕಾರಣ ಅಂದ್ರೆ ದುಡ್ಡು ಮಾಡೋದು. 5 + 5 = 100! ಅಂದ್ರೆ ಐದು ರೂಪಾಯಿ ಬಂಡವಾಳ, ಐದು ವರ್ಷ ಅಧಿಕಾರ, ನೂರು ರೂಪಾಯಿ ಲಾಭ!' ಗುಡ್ಡೆ ನಕ್ಕ.

'ಕರೆಕ್ಟ್ ಹೇಳಿದಿ ಕಣಲೆ, ಬೇರೇನು ಪಾಠ ಅದಾವಂತೆ?' ದುಬ್ಬೀರ ಕೇಳಿದ.

'ಕೆಟ್ಟ ಮಾತು ಆಡಬಾರದು, ಆಡಿದ ಮೇಲೆ 'ನಾ ಹಂಗೆ ಹೇಳೇ ಇಲ್ಲ' ಅನ್ನಬಾರದು, ಕೆಟ್ಟದ್ದನ್ನ (ಮೊಬೈಲ್‌ನಲ್ಲಿ) ನೋಡಬಾರದು, ಕಮಿಷನ್, ಲಂಚ, ತಗಾಬಾರದು, ಮಂತ್ರಿಗಿರಿಗೆ ಲಾಬಿ ಮಾಡಬಾರದು, ಮುಖ್ಯಮಂತ್ರಿ ಸೀಟಿಗೆ ಟವೆಲ್ ಹಾಕಬಾರದು. ಚುನಾವಣೇಲಿ ಹಣ, ಕುಕ್ಕರು-ಲಿಕ್ಕರು ಹಂಚಬಾರದು, ಗೆದ್ದ ಮೇಲೆ ಬೆಂಗಳೂರು ಸೇರಬಾರದು, ಸೋತರೆ ಎಂಎಲ್ಸಿ ಕೇಳಬಾರದು, ವಂಶಪಾರಂಪರ್ಯ ರಾಜಕಾರಣ ಮಾಡಬಾರದು'.

'ಸ್ವಾಪ್... ಇದೆಲ್ಲ ಸಾಧ್ಯನಾ? ಕಾಲೇಜಿನಾಗೆ ಪಾಠ ಹೇಳಿಬಿಟ್ರೆ ಉತ್ತಮ ರಾಜಕಾರಣಿ ಆಗಿಬಿಡ್ತಾರಾ?' ಕೊಟ್ರೇಶಿ ಆಕ್ಷೇಪಿಸಿದ.

'ಯಾಕೆ ಆಗಲ್ವಾ?'

'ನಿನ್ತೆಲಿ, ಕಾಲೇಜಿನಾಗೆ ಕಲಿತ ರಾಜಕಾರಣ, ಪುಸ್ತಕದ ಬದನೆಕಾಯಿ ಎರಡೂ ಒಂದೇ... ಕೆಲ್ಸಕ್ಕೆ ಬರಲ್ಲ...'

ಕೊಟ್ರೇಶಿ ಮಾತಿಗೆ ಯಾರೂ ಪಿಟಿಕ್ಕನ್ನಲಿಲ್ಲ.

ದಿನದ ಟ್ವೀಟ್

ಉತ್ಕೃಷ್ಟ ವಿ.ವಿ: ಇಂದಿನ ಅಗತ್ಯ

ರಾಜ್ಯ ಸರ್ಕಾರಗಳು ಉತ್ಕೃಷ್ಟ ವಿಶ್ವವಿದ್ಯಾಲಯಗಳನ್ನು ಕಟ್ಟುವುದರತ್ತ ಗಮನ ಕೇಂದ್ರೀಕರಿಸಲು ಇದು ಸಕಾಲ.



ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಇನ್‌ಸ್ಟಿಟ್ಯೂಷನ್

ಕಿಡಿನುಡಿ

ಕನ್ನಡಿಗರು ಮತ್ತು ತಮಿಳರ ನಡುವಿನ ತಿಕ್ಕಾಟದಿಂದ ಹಿಂದಿ ಮೂಲಭೂತವಾದಿಗಳಿಗೆ ಲಾಭವಾಗುತ್ತದಷ್ಟೆ... ನಮ್ಮ ಹೋರಾಟ ಏನಿದ್ದರೂ ಭಾಷೆಗೆ ಸಂಬಂಧಿಸಿದ ಅನ್ಯಾಯದ ವಿರುದ್ಧವೇ ವಿನಾ ಪರಸ್ಪರರ ವಿರುದ್ಧ ಅಲ್ಲ. ಭಾರತದ ಪ್ರತಿ ಭಾಷೆಯೂ ಗೌರವ, ಮನ್ನಣೆ ಮತ್ತು ಸಮಾನ ಹಕ್ಕುಗಳನ್ನು ಪಡೆಯಲು ಅರ್ಹವಾಗಿದೆ.



ಅರುಣ್ ಜಾವಗಲ್, ಕನ್ನಡಪರ ಹೋರಾಟಗಾರ

25 ವರ್ಷಗಳ ಹಿಂದೆ

ಮಂಗಳವಾರ, 30-5-2000

• ಭಾರತದಲ್ಲಿ ದಲೈಲಾಮಾ ಚೀನಾದ ಕಳವಳ

ಬೀಜಿಂಗ್, ಮೇ 29 (ಯುಎನ್‌ಐ)– 'ದಲೈಲಾಮಾ ಮತ್ತು ಕರ್ಮಪಾ ಉಪಸ್ಥಿತಿಯಿಂದ ಭಾರತದಲ್ಲಿ ಚೀನಾ ವಿರೋಧಿ ಕೃತ್ಯಗಳು ತಲೆ ಎತ್ತುವ ಸಾಧ್ಯತೆಗಳಿವೆ' ಎಂದು ಚೀನಾ ಇಂದು ಆತಂಕ ವ್ಯಕ್ತಪಡಿಸಿತು.

ಒಂದು ವಾರದ ಭೇಟಿಗಾಗಿ ಚೀನಾಕ್ಕೆ ಆಗಮಿಸಿರುವ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರೊಂದಿಗೆ ನಡೆಸಿದ ಮಾತುಕತೆ ಸಂದರ್ಭದಲ್ಲಿ ಈ ಕಳವಳ ವ್ಯಕ್ತಪಡಿಸಿದ ಚೀನಾ ಅಧ್ಯಕ್ಷ ಜಿಯಾಂಗ್ ಜೆಮಿನ್ ಅವರು, ಕರ್ಮಪಾ ಪ್ರಕರಣವನ್ನು ಸಮರ್ಥವಾಗಿ ನಿಭಾಯಿಸಿದ್ದಕ್ಕಾಗಿ ನವದೆಹಲಿಯನ್ನು ಶ್ಲಾಘಿಸಿದರು.

ತಮ್ಮ ದೇಶವು ದಲೈಲಾಮಾ ಅವರನ್ನು ಒಳಸಂಚಿನ ತಂಡವೊಂದರ ನಾಯಕ ಎಂದು ಪರಿಗಣಿಸಿದೆಯೇ ಹೊರತು ಶುದ್ಧ ಭಿಕ್ಷುವೆಂದು ಅಲ್ಲ ಎಂದು ಅವರು ಸ್ಪಷ್ಟಪಡಿಸಿದರು.

• ಕ್ರಿಕೆಟ್: ಮೋಸದಾಟದ ತನಿಖೆ ಚುರುಕು

ನವದೆಹಲಿ, ಮೇ 29– ಕ್ರಿಕೆಟ್ ಮೋಸದಾಟಕ್ಕೆ ಸಂಬಂಧಿಸಿದಂತೆ ಸಿಬಿಐ ತನ್ನ ತನಿಖೆಯನ್ನು ಚುರುಕುಗೊಳಿಸಿದೆ. ಕೆಲವು ಆಟಗಾರರ ವೆಬ್‌ಸೈಟ್‌ಗಳಲ್ಲಿನ ದಾಖಲೆಗಳನ್ನೆಲ್ಲ ಸಿಬಿಐ ಪರೀಕ್ಷೆಗೆ ಒಳಪಡಿಸಿದೆ.

ಕ್ರಿಕೆಟ್ ವೀಕ್ಷಕ ವಿವರಣೆಗಾರ ನರೋತ್ತಮ್ ಪುರಿ, ಭಾರತ ತಂಡದ ಮಾಜಿ ಮ್ಯಾನೇಜರ್ ಅಜಿತ್ ವಾಡೇಕರ್, ಸುನಿಲ್ ಗಾವಸ್ಕರ್, ನವಜೋತ್ ಸಿಂಗ್ ಸಿಧು, ಕಿರಣ್ ಮೋರೆ, ಮಹಾರಾಷ್ಟ್ರದ ಉನ್ನತ ಪೊಲೀಸ್ ಅಧಿಕಾರಿ ರಾಕೇಶ್ ಮರಿಯ ಮುಂತಾದವರ ದಾಖಲೆಗಳನ್ನೆಲ್ಲ ಸಿಬಿಐ ತನಿಖೆ ನಡೆಸುತ್ತಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 30-5-1975

• 'ಕಾಳಿ: ರಾಷ್ಟ್ರೀಯ ಯೋಜನೆ ಎಂದು ಗಣನೆ'

ಬೆಂಗಳೂರು, ಮೇ 29– ಕಾಳಿ ನದಿ ವಿದ್ಯುಚ್ಛಕ್ತಿ ಯೋಜನೆಗೆ ಹಣ ಪೂರೈಸುವ ವಿಷಯ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಪಿ.ಎನ್. ಹಕ್ಸರ್ ಅವರು ಇಲ್ಲಿ ತಿಳಿಸಿದರು.

ಕಾಳಿ ನದಿ ಯೋಜನೆಯನ್ನು ಕೇಂದ್ರ ಸರ್ಕಾರವು 'ರಾಷ್ಟ್ರೀಯ ಯೋಜನೆ' ಎಂದು ಪರಿಗಣಿಸುವುದೆಂದು ವರದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ಮುಖ್ಯಮಂತ್ರಿ ದೇವರಾಜ ಅರಸು, ಅರ್ಥ ಸಚಿವ ಘೋರ್ಪಡೆಯವರೊಂದಿಗೆ ಇಂದು ಬೆಳಿಗ್ಗೆ ರಾಜ್ಯದ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾತುಕತೆ ನಡೆಸಿದ ನಂತರ ವರದಿಗಾರರೊಂದಿಗೆ ಮಾತನಾಡಿದ ಹಕ್ಸರ್ ಅವರು, ರಾಜ್ಯದ ಆರ್ಥಿಕ ಸ್ಥಿತಿಯ ಇತಿಮಿತಿಗಳಲ್ಲಿ ರಾಜ್ಯವು ಅದನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡುವುದು ಕಷ್ಟವೆಂಬುದನ್ನು ಒಪ್ಪಿಕೊಂಡರು.

• ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಕಮಿಷನರ್ ಮೇಲೆ ಆರೋಪ: ಜಾಗೃತ ಆಯೋಗದ ತನಿಖೆಗೆ ಕರೆ

ಹುಬ್ಬಳ್ಳಿ, ಮೇ 29– ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಕಮಿಷನರ್ ಅವರು ಸೂಪರ್‌ಮಾರ್ಕೆಟ್, ಈಜುಕೊಳ, ರಾಯಪುರ ಜಲಾಶಯ ಮತ್ತು 'ಹುಡ್ಕೊ' ಯೋಜನೆ ಅಂಗವಾಗಿ ನಿರ್ಮಿಸಬೇಕೆಂದಿರುವ ಕಾಮಗಾರಿಗಳ ಸಂಬಂಧ ಕರೆದಿದ್ದ ಟೆಂಡರ್‌ಗಳಲ್ಲಿ ನಡೆದಿರುವುದೆಂದು ಹೇಳಲಾದ ಅಕ್ರಮ ವ್ಯವಹಾರಗಳ ಬಗ್ಗೆ, ರಾಜ್ಯ ಜಾಗೃತ ಆಯೋಗ ತನಿಖೆ ನಡೆಸಬೇಕೆಂಬ ನಿರ್ಣಯವನ್ನು ಇಂದು ಇಲ್ಲಿ ಸೇರಿದ್ದ ಕಾರ್ಪೊರೇಷನ್‌ನ ವಿಶೇಷ ತುರ್ತುಸಭೆ ಬಹುಮತದಿಂದ ಕೋಲಾಹಲ ಮತ್ತು ತೀವ್ರ ಗೊಂದಲದ ಸನ್ನಿವೇಶದಲ್ಲಿ ಅಂಗೀಕರಿಸಿತು.

ಸಂಗತ

ಪ್ರವಾಸ ಆಗದಿರಲಿ ಪ್ರಯಾಸ

ಅಗತ್ಯ ಪೂರ್ವಸಿದ್ಧತೆ, ಕೊಂಚ ಮುಂದಾಲೋಚನೆ, ಸರಿಯಾದ ಯೋಜನೆ ರೂಪಿಸಿಕೊಂಡರೆ, ವಿದೇಶ ಪ್ರಯಾಣವು ದೇಶಿ ಪ್ರಯಾಣದಷ್ಟೇ ಸಲೀಸು

• ಎ.ಎಸ್. ನಾರಾಯಣರಾವ್

ಇತ್ತೀಚಿನ ವರ್ಷಗಳಲ್ಲಿ ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ದೇಶೀಯ ವಿಮಾನ ಪ್ರಯಾಣಿಕರ ಸಂಖ್ಯೆ ವೃದ್ಧಿಸಿದೆ ಎಂದು ಈಚೆಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು. ವಿದೇಶಕ್ಕೆ ಹಾರುವವರ ಪ್ರಮಾಣವೂ ಏರುತ್ತಿದೆ. ಒಂದೆರಡು ದಶಕಗಳ ಹಿಂದೆ ಹೊರದೇಶಗಳಲ್ಲಿ ಭಾರತೀಯ ಪ್ರವಾಸಿಗರು ಅಷ್ಟಾಗಿ ಕಾಣಸಿಗುತ್ತಿರಲಿಲ್ಲ. ಏಷ್ಯಾದ ಕಡೆಯಿಂದ ಬರುವ ಪ್ರವಾಸಿಗರಲ್ಲಿ ಚೀನಾದವರೇ ಹೆಚ್ಚು ಎನ್ನುವ ಸ್ಥಿತಿ ಇತ್ತು. ಆದರೆ ಈಗ ಹಾಗಿಲ್ಲ. ಎಲ್ಲ ಕಡೆಯಲ್ಲೂ ಭಾರತೀಯರನ್ನು ನೋಡಬಹುದು.

ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ, ಕೈಗೆಟುಕುವ ವಿಮಾನ ಪ್ರಯಾಣ ದರ, ಅಂಗೈಯಲ್ಲೇ ಮಾಹಿತಿ ಭಂಡಾರ, ಹೊಸದನ್ನು ನೋಡಬೇಕು– ಸುತ್ತಬೇಕು ಎಂಬ ಬಯಕೆ... ಹೀಗೆ ನಾನಾ ಕಾರಣಗಳಿಂದಾಗಿ ವಿಶ್ವದಾದ್ಯಂತ ಪ್ರವಾಸೋದ್ಯಮ ಬೆಳೆಯುತ್ತಿದೆ. ಎಷ್ಟೋ ದೇಶಗಳಿಗೆ ಪ್ರವಾಸೋದ್ಯಮವೇ ಪ್ರಮುಖ ಆದಾಯ ಮೂಲ. ಅಲ್ಲದೆ ಅದು ಬಹಳಷ್ಟು ಉದ್ಯೋಗ ಅವಕಾಶಗಳನ್ನೂ ಸೃಷ್ಟಿಸುತ್ತಿದೆ.

ದೇಶದ ಒಳಗೆ ಸುತ್ತಾಡುವುದಕ್ಕೂ ವಿದೇಶ ಪ್ರಯಾಣ ಕೈಗೊಳ್ಳುವುದಕ್ಕೂ ಒಂದಷ್ಟು ವ್ಯತ್ಯಾಸಗಳಿವೆ. ಸ್ವಲ್ಪ ಸಿದ್ಧತೆಯೂ ಬೇಕಾಗುತ್ತದೆ. ಆದರೆ, ಕೊಂಚ ಮುಂದಾಲೋಚನೆ, ಸರಿಯಾದ ಯೋಜನೆ, ಪೂರ್ವ ತಯಾರಿ ಇದ್ದರೆ ವಿದೇಶ ಪ್ರಯಾಣ ಕೂಡ ದೇಶಿ ಪ್ರಯಾಣದಷ್ಟೇ ಸಲೀಸು, ಸುಲಭ. ಎಷ್ಟೋ ಸಲ ವಿದೇಶ ಪ್ರವಾಸಕ್ಕೆ ಆಗುವ ಖರ್ಚು ದೇಶದೊಳಗಿನ ಪ್ರವಾಸದ ಖರ್ಚಿಗಿಂತ ಕಡಿಮೆ ಎಂದರೆ ಅದೇನು ಉತ್ಪ್ರೇಕ್ಷೆ ಎಂದು ಭಾವಿಸಬೇಕಾಗಿಲ್ಲ. ಆದರೆ ಅದು ನೀವು ಅನುಸರಿಸುವ ಮಾರ್ಗ ಯಾವುದು ಎನ್ನುವುದನ್ನು ಅವಲಂಬಿಸಿರುತ್ತದೆ. 'ನಮಗೆ ಯಾವುದೇ ರಗಳೆ ಬೇಡ, ದುಡ್ಡು ಕೊಡ್ತೇವೆ, ಸುತ್ತಾಡಿಸಿದರೆ ಸಾಕು' ಎನ್ನುವವರಿಗಾಗಿಯೇ ಬೇಕಾದಷ್ಟು ಪ್ರವಾಸಿ ಸಂಸ್ಥೆಗಳು ಅಂದರೆ ಟೂರ್ ಆ್ಯಂಡ್ ಟ್ರಾವೆಲ್ ಏಜೆನ್ಸಿಗಳಿವೆ. 'ಖರ್ಚು ಕಡಿಮೆ ಆಗಬೇಕು, ಹೆಚ್ಚು ಜಾಗ ಸುತ್ತಬೇಕು' ಎನ್ನುವವರು ಮೊದಲೇ ಒಂದಿಷ್ಟು ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ, ಅನಿವಾರ್ಯ.

ಸುತ್ತಾಟಕ್ಕಾಗಿ ವಿದೇಶಕ್ಕೆ ಹೋಗಬೇಕು ಎನ್ನುವ ಆಸೆ ಇದ್ದರೆ ಮೊದಲು ಬೇಕಾಗಿರುವುದು ಪಾಸ್‌ಪೋರ್ಟ್. ಭಾರತೀಯರಿಗೆ ನೇಪಾಳ ಮತ್ತು ಭೂತಾನ ಬಿಟ್ಟು ಬೇರೆಲ್ಲ ದೇಶಗಳಿಗೆ ಹೋಗಲು ಪಾಸ್‌ಪೋರ್ಟ್ ಇರಲೇಬೇಕು. ಈಗಂತೂ ಪಾಸ್‌ಪೋರ್ಟ್ ಪಡೆಯಲು ಹೆಚ್ಚು ಕಷ್ಟಪಡುವ ಅಗತ್ಯವೇ ಇಲ್ಲ. ಅರ್ಜಿ ಸಲ್ಲಿಸಿದರೆ ಕೆಲವೇ ದಿನಗಳ ಒಳಗೆ ಮನೆ ಬಾಗಿಲಿಗೇ ಪಾಸ್‌ಪೋರ್ಟ್ ಬರುತ್ತದೆ.

ನಂತರದ್ದು, ಎಲ್ಲಿ ಹೋಗಬೇಕು ಎನ್ನುವುದು. ಆ ದೇಶಕ್ಕೆ ವೀಸಾ (ಆ ದೇಶಕ್ಕೆ ಹೋಗುವ ಪರವಾನಗಿ) ಬೇಕೇ ಬೇಡವೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಸದ್ಯಕ್ಕಿರುವ ಮಾಹಿತಿ ಪ್ರಕಾರ, ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ 16 ದೇಶಗಳಲ್ಲಿ ವೀಸಾ ಬೇಕಿಲ್ಲ. 25 ದೇಶಗಳು ಇ– ವೀಸಾ (ಆನ್‌ಲೈನ್‌ನಲ್ಲಿಯೇ ಅರ್ಜಿ, ಶುಲ್ಕ ಸಲ್ಲಿಸಿ ಪಡೆಯುವ ಎಲೆಕ್ಟ್ರಾನಿಕ್ ವೀಸಾ) ನೀಡುತ್ತಿವೆ. 26 ದೇಶಗಳು ತಮ್ಮ ವಿಮಾನ ನಿಲ್ದಾಣ ಅಥವಾ ಗಡಿಯಲ್ಲಿ ವೀಸಾ (ವೀಸಾ ಆನ್ ಅರೈವಲ್) ನೀಡುವ ವ್ಯವಸ್ಥೆ ಮಾಡಿವೆ.

ಮೊದಲೇ ಹೇಳಿದಂತೆ, ಕಡಿಮೆ ಖರ್ಚಿನಲ್ಲಿ ಸುತ್ತಾಡಬೇಕು ಎನ್ನುವವರು ತಾವೇ ವೀಸಾ ವ್ಯವಸ್ಥೆ ಮಾಡಿಕೊಳ್ಳಬಹುದು. ಅಂತರ್ಜಾಲದಲ್ಲಿ ಇದರ ಎಲ್ಲ ಮಾಹಿತಿಗಳೂ ಲಭ್ಯ. ಆದರೆ ಒಂದು ವಿಷಯ ನೆನಪಿಡಿ. ವಂಚಕರ ಹಾವಳಿ ಜಾಸ್ತಿ. ಅದಕ್ಕಾಗಿ ಆಯಾ ಸರ್ಕಾರಗಳ ಅಧಿಕೃತ ಜಾಲತಾಣ ಅಥವಾ ಅಧಿಕೃತ ಏಜೆಂಟರ ಮೂಲಕವೇ ವೀಸಾ ಅರ್ಜಿ ಸಲ್ಲಿಸಿ.



ನಂತರದ್ದು ತಂಗಲು ಹೋಟೆಲ್ ವ್ಯವಸ್ಥೆ. ಅದಕ್ಕಾಗಿ ಅನೇಕ ವಿಶ್ವಾಸಾರ್ಹ ಏಜೆನ್ಸಿಗಳಿವೆ. ದರ, ಸೌಕರ್ಯ, ಹಣ ಪಾವತಿಯಂತಹ ಎಲ್ಲ ಮಾಹಿತಿಗಳನ್ನೂ ಅವು ಒದಗಿಸುತ್ತವೆ. ಅವುಗಳ ಮೂಲಕ ಕೊಠಡಿ ಕಾಯ್ದಿರಿಸಬಹುದು. ನೀವು ಹೋಗುವ ನಗರದ ಪ್ರಮುಖ ಪ್ರದೇಶಗಳು, ಬಸ್ ಮತ್ತಿತರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಹತ್ತಿರವಾದ ಸ್ಥಳಗಳಲ್ಲೇ ಹೋಟೆಲ್ ಹುಡುಕುವುದು ಒಳ್ಳೆಯದು, ಸುರಕ್ಷಿತ ಕೂಡ. ಈಗಂತೂ ಉಚಿತ ವೈಫೈ ಇಲ್ಲದ ವಿಮಾನ ನಿಲ್ದಾಣಗಳು, ಹೋಟೆಲ್‌ಗಳೇ ಇಲ್ಲ ಎನ್ನಬಹುದು. ಹಾಗಾಗಿ, ಭಾರತದಲ್ಲಿನ ಕುಟುಂಬದವರ ಜತೆಗೆ ನಿರಂತರ ಸಂಪರ್ಕಕ್ಕೆ ಸಮಸ್ಯೆ ಆಗದು. ಇನ್ನೂ ಬೇಕು ಎನ್ನುವುದಾದರೆ, ನಿಮ್ಮ ಸಿಮ್‌ಕಾರ್ಡಿಗೆ ಇಲ್ಲೇ ಅಂತರರಾಷ್ಟ್ರೀಯ ಸಂಪರ್ಕ ಕಲ್ಪಿಸಿಕೊಳ್ಳಬಹುದು ಅಥವಾ ನೀವು ಹೋಗುವ ಸ್ಥಳದಲ್ಲಿ ಸಿಗುವ ಪ್ರವಾಸಿ ಸಿಮ್ ಬಳಸಬಹುದು.

ಹೋಗುವ ಸ್ಥಳ ನಿರ್ಧಾರ ಆದ ಮೇಲೆ ಅಲ್ಲಿ ಏನೇನನ್ನು ನೋಡಬಹುದು, ಹೇಗೆ ಹೋಗಬಹುದು ಎಂಬೆಲ್ಲ ವಿವರ ಸಂಗ್ರಹಿಸಿಕೊಳ್ಳಬೇಕು. ಸ್ಥಳೀಯ ಸಾರಿಗೆ ಬಳಸಿದರೆ ಖರ್ಚು ಕಡಿಮೆ. ಅಲ್ಲದೆ ಅಲ್ಲಿನ ಜನಜೀವನದ ದರ್ಶನವೂ ಆಗುತ್ತದೆ. ಬಹಳಷ್ಟು ಕಡೆ ಭಾರತೀಯ ಊಟೋಪಚಾರದ ರೆಸ್ಟೊರೆಂಟ್‌ಗಳು ಈಗ ಲಭ್ಯ. ಇವೆಲ್ಲ ಮಾಹಿತಿಗಳು ಅಂತರ್ಜಾಲದಲ್ಲಿ ಹುಡುಕಿದರೆ ಸಿಗುತ್ತವೆ. ಆದರೆ ಅವನ್ನು ಹೇಗೆ ಜಾಲಾಡಬೇಕು, ಹೇಗೆ ದೃಢಪಡಿಸಿಕೊಳ್ಳಬೇಕು ಎನ್ನುವ ವಿವೇಚನೆ ಬೇಕು. ಇಷ್ಟೆಲ್ಲ ಸಿದ್ಧತೆ ಮಾಡಿಕೊಂಡರೆ ಪ್ರಯಾಸ ಇಲ್ಲದೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಮಾಡಬಹುದು.

ವಾಚಕರ ವಾಣಿ

ಭಾಷಾ ಸೌಹಾರ್ದ ನೆಲೆಗೊಳ್ಳಬೇಕಿದೆ

ಇಲ್ಲಿಯತನಕ ಧರ್ಮ, ಜಾತಿಗಳನ್ನು ಕೋಮುವಾದಕ್ಕೆ ಬಳಸಿಕೊಂಡಿರುವುದರ ಪರಿಣಾಮವಾಗಿ ಬಹಳಷ್ಟು ಸಾವು–ನೋವುಗಳನ್ನು ಕಂಡುಂಡಿದ್ದೇವೆ. ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ದುರ್ಘಟನೆಗಳಿಗೂ ಸಾಕ್ಷಿಯಾಗಿದ್ದೇವೆ. ಈಗ ಭಾಷಾ ಅನನ್ಯತೆಯನ್ನು ಆ ಸಾಲಿಗೆ ಸೇರಿಸುವ ವಾತಾವರಣ ನಿರ್ಮಾಣವಾಗುತ್ತಿದೆಯೇ ಎಂಬ ಪ್ರಶ್ನೆಯು ಆತಂಕಕ್ಕೆ ಕಾರಣವಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು, ಸೆಲೆಬ್ರಿಟಿ ಎನಿಸಿಕೊಂಡವರು ವಿವೇಚನೆ ಇಲ್ಲದೆ ಸಾರ್ವಜನಿಕವಾಗಿ ಬಿಡುಬೀಸಾಗಿ ನೀಡುತ್ತಿರುವ ಹೇಳಿಕೆಗಳು, ಅವರ ವರ್ತನೆಗಳು ಗಾಯದ ಮೇಲೆ ಬರೆ ಎಳೆಯುವಂತಿವೆ. ಗಾಯಕರೊಬ್ಬರು ಭಾಷೆಯನ್ನು ಭಯೋತ್ಪಾದನಾ ಘಟನೆಗೆ ಹೋಲಿಸಿದ, ಪ್ರಾದೇಶಿಕ ಭಾಷೆಯನ್ನು ಮಾತನಾಡುವ ಕುರಿತ ಬ್ಯಾಂಕ್ ಅಧಿಕಾರಿಯ ವರ್ತನೆ, ತಮಿಳು ಭಾಷೆಯಿಂದ ಕನ್ನಡ ಭಾಷೆಯ ಉಗಮವಾಯಿತು ಎಂಬ ನಟ ಕಮಲ್ ಹಾಸನ್ ಅವರ ವಿವಾದಾತ್ಮಕ ಹೇಳಿಕೆಯಂತಹ ಬೆಳವಣಿಗೆಗಳು ಈ ಆತಂಕವನ್ನು ಇನ್ನಷ್ಟು ಹೆಚ್ಚು ಮಾಡಿವೆ.

ಕನ್ನಡದ ಕವಿರಾಜಮಾರ್ಗಕಾರ ಹೇಳಿದ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಮಂ ಪರ ಧರ್ಮಮುಮಂ' (ಮತ್ತೊಬ್ಬರ ವಿಚಾರವನ್ನು, ಧರ್ಮವನ್ನು ಸಹಿಸುವುದೇ ನಿಜವಾದ ಸಂಪತ್ತು) ಎಂಬ ವ್ಯಾಖ್ಯಾನವನ್ನು ಭಾಷೆಗೂ ಅನ್ವಯಿಸಿಕೊಂಡು ನಾವು ಆಚರಣೆಗೆ ಬದ್ಧರಾಗಬೇಕಾಗಿದೆ. ಆಗ ಭಾಷಾ ಸೌಹಾರ್ದ ನೆಲೆಗೊಳ್ಳುವುದರಲ್ಲಿ ಅನುಮಾನವಿಲ್ಲ.

ಎ.ನಾಗಿಣಿ, ಬೆಂಗಳೂರು

ಇಷ್ಟವಿಲ್ಲದ ಆಚರಣೆ ಕೈಬಿಡಲಿ

'ಹಿಂದೂ ಆಚರಣೆಗಳಿಗೆ ತಡೆ ಹೇರಬೇಡಿ. ಆಚರಣೆಗಳು ಜನರ ವೈಯಕ್ತಿಕ. ಬಸವತತ್ವ ಪಾಲನೆ ಮಾಡುವುದು ಅಗತ್ಯ' ಎಂಬ ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ್ ಬಿದರಿ ಅವರ ಹೇಳಿಕೆಗೆ 'ತಾತ್ವಿಕತೆಯ ವೈರುಧ್ಯ ಅರಿಯಬೇಕಿದೆ' ಎಂದು ಚಂದ್ರಶೇಖರ ತಾಳ್ಯ ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಮೇ 29). ಬಿದರಿ ಅವರು ಹೇಳಿರುವುದು ಸರಿಯಾಗಿದೆ. ಹಿಂದೂ ಧರ್ಮದಲ್ಲಿನ ಉತ್ತಮ ಅಂಶಗಳನ್ನು ಅಳವಡಿಸಿಕೊಂಡು ಬಸವತತ್ವ ಪಾಲನೆ ಮಾಡುವುದರಲ್ಲಿ ತಪ್ಪೇನಿಲ್ಲ.

12ನೇ ಶತಮಾನದಲ್ಲೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾನತೆ, ಬಸವತತ್ವ ಆಚರಣೆಗಳಿಗೆ ನಾಂದಿ ಹಾಡಿದರು. ಆದರೆ ಅಂದಿನಿಂದ ಇಲ್ಲಿಯವರೆಗೂ ಅವುಗಳ ಆಚರಣೆ ಪೂರ್ಣವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಹಿಂದೂ ಧರ್ಮದ ಆಚರಣೆಗಳ ಜೊತೆಗೆ ಅವು ಬೆಸೆದುಕೊಂಡಿವೆ. ಹೀಗಿರುವಾಗ ಅವನ್ನು ವಿರೋಧಿಸುವುದು ಸಲ್ಲ. ಬೇಕಾದರೆ ಹಿಂದೂ ಧರ್ಮದ ಯಾವ ಆಚರಣೆ ಅವರಿಗೆ ಇಷ್ಟವಿಲ್ಲವೋ ಅದನ್ನು ಕೈಬಿಡಬೇಕು. ಬಿದರಿ ಅವರ ಅಭಿಪ್ರಾಯವೂ ಬಹುಶಃ ಇದೇ ಇರಬಹುದು.

ಮುಳ್ಳೂರು ಪ್ರಕಾಶ್, ಮೈಸೂರು

ಇದೆಂಥ ಮೌಲ್ಯಮಾಪನ?

ಈ ದಿನಗಳಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾದರೂ ತಮಗೆ ನೀಡಿದ ಅಂಕಗಳು ನಿರೀಕ್ಷೆಗಿಂತ ಕಡಿಮೆ ಇವೆ ಎಂದು ಪರೀಕ್ಷೆ ಬರೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕುವುದು ಹೆಚ್ಚಾಗಿದೆ. ಆಗ ಕೆಲವರು ಹಿಂದಿಗಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವುದನ್ನೂ ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಇದನ್ನು ನೋಡಿದರೆ, ಮೌಲ್ಯಮಾಪನ ಮಾಡುವವರು ವಿದ್ಯಾರ್ಥಿಗಳ ಉತ್ತರಪತ್ರಿಕೆಗಳನ್ನು ಸರಿಯಾಗಿ ಗಮನಿಸದೇ ಅಂಕಗಳನ್ನು ನೀಡಿ ತಪ್ಪು ಮಾಡುತ್ತಿದ್ದಾರೆ ಎನಿಸುವುದು ಸಹಜ. ಹಾಗಿದ್ದರೆ, ಸರಿಯಾಗಿ ಕಾರ್ಯ ನಿರ್ವಹಿಸದವರಿಗೆ ಶಿಕ್ಷೆ ನೀಡುವ ಅಥವಾ ದಂಡ ವಿಧಿಸುವ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ.

ರಘುನಾಥ ರಾವ್ ತಾಪ್ಸೆ, ದಾವಣಗೆರೆ

ವರ್ಗಾವಣೆ ಗೊಂದಲ: ಭ್ರಷ್ಟಾಚಾರಕ್ಕೆ ಮೂಲ

ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ ಸಮಯದಲ್ಲಿ ಹುದ್ದೆಗಳ ಖಾಲಿ ಸ್ಥಾನ ಇದ್ದಾಗ್ಯೂ ಸ್ಥಳ ನಿಯುಕ್ತಿಗೊಳಿಸದೆ, ಕಡ್ಡಾಯ ಕಾಯುವಿಕೆಯಲ್ಲಿ ಇರಿಸಿ ಅವರಿಂದ ಕೆಲಸವನ್ನು ಪಡೆಯದೇ ವೇತನ ನೀಡುವುದು ಸರ್ಕಾರಕ್ಕೆ ಆಗುವ ರಾಜಸ್ವ ನಷ್ಟವೇ ಸರಿ. ಅಲ್ಲದೆ ಉದ್ದೇಶಪೂರ್ವಕವಾಗಿ ಈ ರೀತಿ ಮಾಡುವುದು ಅಧಿಕಾರಿಗಳ ನೈತಿಕ ಸ್ಥೈರ್ಯ ಕುಸಿಯುವಂತೆ ಮಾಡುವುದಲ್ಲದೆ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಅದರಲ್ಲೂ ಈ ರೀತಿಯ ಪ್ರಕರಣಗಳು ಸಾಮಾನ್ಯವಾಗಿ ಆಯಕಟ್ಟಿನ ಹುದ್ದೆಗಳನ್ನು ಹೊಂದಿರುವ ಇಲಾಖೆಗಳಲ್ಲಿ ನಡೆಯುತ್ತವೆ ಎಂಬುದಕ್ಕೆ ಉದಾಹರಣೆ, ಹಲವಾರು ತಿಂಗಳುಗಳಿಂದ ಹುದ್ದೆ ನಿರೀಕ್ಷೆಯಲ್ಲಿದ್ದ ಮುಖ್ಯ ಎಂಜಿನಿಯರುಗಳಿಗೆ ಸ್ಥಳ ನಿಯುಕ್ತಿಗೊಳಿಸಿರುವ ಬಗೆಗಿನ 'ವರ್ಗ: ಸಿ.ಎಂ ಅಸ್ತು– ಡಿಸಿಎಂ ಮುನಿಸು ಎಂಬ ಶೀರ್ಷಿಕೆಯ ವರದಿ (ಪ್ರ.ವಾ., ಮೇ 29).

ಸಾಮಾನ್ಯವಾಗಿ ಸರ್ಕಾರದಲ್ಲಿ ಮುಖ್ಯಮಂತ್ರಿಯ ತೀರ್ಮಾನವೇ ಅಂತಿಮ. 'ನನ್ನ ಪೂರ್ವಾನುಮತಿ ಪಡೆಯದೆ ಯಾವ ವಿಚಾರಗಳ ಬಗ್ಗೆಯೂ ಆದೇಶ ಹೊರಡಿಸಬಾರದು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡುವ ಅಧಿಕಾರ ಮುಖ್ಯಮಂತ್ರಿಗೆ ಇರುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಮುಖ್ಯಮಂತ್ರಿಯವರ ಅಧಿಕಾರವನ್ನೇ ಪ್ರಶ್ನಿಸುವಂತೆ ಇಲಾಖೆಯ ಮಂತ್ರಿಯೊಬ್ಬರು ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡುವುದು ಅಚ್ಚರಿಯ ಸಂಗತಿಯೇ ಸರಿ. ಇದರಿಂದ ಸರ್ಕಾರದಲ್ಲಿ ಮುಖ್ಯಮಂತ್ರಿಯವರು ಸಂಪೂರ್ಣ ಅಧಿಕಾರವನ್ನು ಹೊಂದಿಲ್ಲದಿರುವುದು ಕಂಡುಬರುತ್ತದೆ. ಅದನ್ನು ಹೊರತುಪಡಿಸಿ ಹೇಳುವುದಾದರೆ, ಸ್ಥಳ ನಿಯುಕ್ತಿಗೊಳಿಸದೆ ನೌಕರರು, ಅಧಿಕಾರಿಗಳನ್ನು ಕಡ್ಡಾಯ ಕಾಯುವಿಕೆಯಲ್ಲಿ ಇರಿಸಿ ವೇತನ ನೀಡುವುದು ಜನರ ತೆರಿಗೆಯ ದುರುಪಯೋಗವಷ್ಟೇ ಅಲ್ಲ, ಸರ್ಕಾರಿ ಕೆಲಸದಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ. ಅಸಾಧಾರಣ ಪ್ರಕರಣಗಳನ್ನು ಹೊರತುಪಡಿಸಿ ಈ ರೀತಿಯ ಘಟನೆಗಳು ಆಗಬಾರದು. ನಿರ್ಲಕ್ಷ್ಯ ಅಥವಾ ದುರುದ್ದೇಶದಿಂದ ಆದಲ್ಲಿ ಸಂಬಂಧಿಸಿದವರಿಂದ ನಷ್ಟ ವಸೂಲು ಮಾಡಬೇಕು.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದಕ್ಷಿಣ ಕನ್ನಡ ಮೂರು ದಶಕಗಳಲ್ಲಿ 45ಕ್ಕೂ ಹೆಚ್ಚು ಬಲಿ



ಮಂಗಳೂರು ನಗರದ ವೈಮಾನಿಕ ನೋಟ

ಶಿಕ್ಷಣ, ಆರೋಗ್ಯ, ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆ ಕೋಮು ದಳ್ಳುರಿಯಿಂದ ನಲುಗುತ್ತಿದೆ. ಒಂದು ಹತ್ಯೆಗೆ ಪ್ರತೀಕಾರವಾಗಿ ಇನ್ನೊಂದು ಹತ್ಯೆ ಎಂಬಂತೆ ಧರ್ಮಾಧಾರಿತವಾಗಿ ಸರಣಿ ಕೊಲೆಗಳು ನಡೆಯುತ್ತಿವೆ. ಮೂರು ದಶಕಗಳಿಂದೀಚೆಗೆ ಇಂತಹ ಪ್ರಕರಣಗಳು ಪುನರಾವರ್ತನೆಯಾಗುತ್ತಲೇ ಇವೆ. ಬಲಿಯಾದವರಲ್ಲಿ ಅಮಾಯಕರೂ ಇದ್ದಾರೆ. ಈ ಹಿಂದೆ ನಡೆದ ಕೋಮು ಗಲಭೆಗಳಲ್ಲಿ ಮುಗ್ಧ ಜನರು ಪ್ರಾಣ ಕಳೆದುಕೊಂಡಿದ್ದಾರೆ. ಧರ್ಮದ ಆಧಾರದ ಕೃತ್ಯಗಳು ಸಂಘಟಿತವಾಗಿ ನಡೆಯುತ್ತಿದ್ದು, ಈಗ ಅದರೊಳಗೆ ರಾಜಕೀಯವೂ ಬೆರೆತು ಹೋಗಿದೆ. ಸರಣಿ ಕೊಲೆಗಳು ದಕ್ಷಿಣ ಕನ್ನಡದಲ್ಲಿ ಕೋಮು ಸಾಮರಸ್ಯವನ್ನು ಕದಡುವಂತೆ ಮಾಡಿವೆ. ಜಿಲ್ಲೆಯಾದ್ಯಂತ ಕೋಮುದ್ವೇಷಮಯ ವಾತಾವರಣ ಇರುವುದರಿಂದ ಸಾರ್ವಜನಿಕರು ಭಯದಿಂದಲೇ ಓಡಾಡುವ, ಬದುಕುವ ಪರಿಸ್ಥಿತಿ ಬಂದೊದಗಿದೆ

ಧರ್ಮದ ಮತ್ತು ಅಮಾಯಕರಿಗೆ ಕುತ್ತು

● ಪ್ರವೀಣಕುಮಾರ್ ಪಿ.ವಿ.

ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸ್ಥಾನ ಮಂಗಳೂರಿನ ಹೊರವಲಯದ ಕುಡುಪುವಿನಲ್ಲಿ ಏಪ್ರಿಲ್ 27ರಂದು ಗುಂಪು ಹಲ್ಲೆಗೆ ಕೇರಳದ ವಯನಾಡಿನ ಅಶ್ರಫ್ ಎಂಬವರು ಬಲಿಯಾಗಿ ಸರಿಯಾಗಿ ಒಂದು ತಿಂಗಳು ಮುಗಿಯುವಷ್ಟರಲ್ಲಿ ಕೋಮುದ್ವೇಷಕ್ಕೆ ಮತ್ತಿಬ್ಬರು ಜೀವ ಕಳೆದುಕೊಂಡಿದ್ದಾರೆ. ಹಲವಾರು ಮಂದಿ ವಿನಾಕಾರಣ ಹಲ್ಲೆಗೊಳಗಾಗಿದ್ದಾರೆ. ಕೆಲವರು ಇನ್ನೂ ಆಸ್ಪತ್ರೆಯಿಂದ ಮನೆಗೆ ಹೋಗಿಲ್ಲ. ಮತಾಂಧ ಗುಂಪುಗಳು ನಡೆಸಿದ ದುಷ್ಕೃತ್ಯಗಳು ಜಿಲ್ಲೆಯ ಶಾಂತಿಪ್ರಿಯರನ್ನು ಆತಂಕದ ಮಡುವಿಗೆ ದೂಡಿವೆ.

ಮೂರು ದಶಕಗಳಿಗೂ ಹಿಂದೆ ನಡೆದ ಕೋಮುಗಲಭೆಗಳ ಹಾಗೂ ಅದರಲ್ಲಿ ಮೃತಪಟ್ಟವರ ಬಗ್ಗೆ ನಿಖರ ಮಾಹಿತಿ ಕಲೆ ಹಾಕುವುದು ಕಷ್ಟ. ಆದರೆ, 1998 ಹಾಗೂ ನಂತರ ನಡೆದ ಕೋಮು ಗಲಭೆಗಳ ಚಿತ್ರಣ ಕೆಲವು ನಿವೃತ್ತ ಪೊಲೀಸ್ ಅಧಿಕಾರಿಗಳ ಹಾಗೂ ಹಿರಿಯರ ನೆನಪಿನಲ್ಲಿ ಈಗಲೂ ಹಸಿಯಾಗಿದೆ.

ಜಿಲ್ಲೆಯಲ್ಲಿ 1998–99ರಲ್ಲಿ ನಡೆದ ಕೋಮು ಗಲಭೆ ಆರು ಮುಸ್ಲಿಮರು ಹಾಗೂ ಇಬ್ಬರು ಹಿಂದೂಗಳನ್ನು ಬಲಿ ಪಡೆದಿತ್ತು. ಚೊಕ್ಕಬೆಟ್ಟುವಿನಲ್ಲಿ 1998ರ ಡಿಸೆಂಬರ್ 29ರಂದು ಘರ್ಷಣೆ (ಮಸೀದಿಯ ಗುಜರಿ ಕಳವು ಮಾಡಿದ್ದು) ಕಾರಣಕ್ಕೆ ಶುರುವಾದ ಗಲಾಟೆ ಬೈಕಂಪಾಡಿ, ಕುಳಾಯಿ, ಕೃಷ್ಣಾಪುರ, ಹೊಸಬೆಟ್ಟು, ತಡಂಬೈಲ್, ಕಾನ, ಕಾಟಿಪಳ್ಳ, ಮಂಗಳೂರು, ಬಂಟ್ವಾಳ ಮತ್ತು ಪುತ್ತೂರು ಮೊದಲಾದ ಪ್ರದೇಶಗಳಿಗೆ ಹಬ್ಬಿತ್ತು. ಈ ಗಲಾಟೆಯಲ್ಲಿ 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು. ವಿವಿಧ ಠಾಣೆಗಳಲ್ಲಿ 300ಕ್ಕೂ ಹೆಚ್ಚು ಎಫ್‌ಐಆರ್ ದಾಖಲಾಗಿತ್ತು ಎಂದು ನಿವೃತ್ತ ಎಸಿಪಿಯೊಬ್ಬರು ನೆನಪಿಸಿಕೊಳ್ಳುತ್ತಾರೆ.

ಕೋಮು ದ್ವೇಷಕ್ಕೆ 2001ರಲ್ಲಿ ಕಂದಾವರದಲ್ಲಿ ಆಟೊ ಚಾಲಕ ಹಾಗೂ 2002ರಲ್ಲಿ ಕುದ್ರೋಳಿಯಲ್ಲಿ ಬಡಗಿಯೊಬ್ಬರು ಬಲಿಯಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆ 2003ರಲ್ಲಿ ಕೋಮುಗಲಭೆಯಿಂದ ಮತ್ತೊಮ್ಮೆ ತತ್ತರಿಸಿತ್ತು. ಹುಡುಗಿಯನ್ನು ಚುಡಾಯಿಸಿದ್ದಕ್ಕೆ ಶುರುವಾದ ಈ ಗಲಾಟೆ ಹತ್ತು ಮಂದಿಯನ್ನು ಬಲಿ ಪಡೆದಿತ್ತು. ಒಬ್ಬ ಪೊಲೀಸ್ ಕಾನ್‌ಸ್ಟೆಬಲ್ ಕ್ಲಾಕ್ ಟವರ್ ಬಳಿ ಹತ್ಯೆಯಾಗಿದ್ದರು. ನರಸಿಂಹ ಶೆಟ್ಟಿಗಾರ್ ಎಂಬಾತನ ಹತ್ಯೆಗೆ ಪ್ರತಿಯಾಗಿ ಮಾರ್ಗನ್ಸ್ ಗೇಟ್‌ನಲ್ಲಿ ರಿಕ್ಷಾ ಚಾಲಕ ಮುಸ್ಲಿಂ ಯುವಕನ ಹತ್ಯೆ ನಡೆಯಿತು. ಇದರಿಂದ ಶುರುವಾದ ಗಲಭೆ ನಗರದಾದ್ಯಂತ ವ್ಯಾಪಿಸಿ ಕೆಲವೇ ದಿನಗಳಲ್ಲಿ ಇನ್ನಷ್ಟು ಅಮಾಯಕರ ಬಲಿ ಪಡೆಯಿತು. ಕರ್ಫ್ಯೂ ವಿಧಿಸಬೇಕಾಗಿ ಬಂದಿತ್ತು.

2005ರಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿದ್ದ ಜಬ್ಬಾರ್ ಹತ್ಯೆ ಮತ್ತೊಂದು ಕೋಮುಗಲಭೆಗೆ ಕಿಡಿಹಚ್ಚಿತು. ಒಬ್ಬ ರಿಕ್ಷಾ ಚಾಲಕ ಹಾಗೂ ಅಡ್ಡೂರಿನಲ್ಲಿ ಒಬ್ಬ ಲಾರಿ ಕ್ಲೀನರ್ ಇದಕ್ಕೆ ಬಲಿಯಾದರು.

2006ರಲ್ಲಿ ದನದ ಸಾಗಾಟ ವಿಷಯಕ್ಕೆ ಸಂಬಂಧಿಸಿ ಬಿಜೈನಲ್ಲಿ ಧರ್ಮಗುರುವೊಬ್ಬರನ್ನು ಹತ್ಯೆ ಮಾಡಲಾಗಿತ್ತು. ಅದಕ್ಕೆ ಪ್ರತಿಯಾಗಿ ನಗರದಲ್ಲಿ ಇನ್ನೊಬ್ಬನ ಕೊಲೆ ನಡೆಯಿತು. ಅದರ ಬೆನ್ನಲ್ಲೇ ರಿಕ್ಷಾ ಚಾಲಕನನ್ನು ಹತ್ಯೆ ಮಾಡಲಾಯಿತು. ಈ ಗಲಾಟೆ ತಣ್ಣಗಾಯಿತು ಎನ್ನುವಾಗ ಸುರತ್ಕಲ್ ಬಳಿಯ ಚೊಕ್ಕಬೆಟ್ಟುವಿನಲ್ಲಿ ಬಿಜೆಪಿ ಮುಖಂಡ ಸುಖಾನಂದ ಶೆಟ್ಟಿ ಅವರ ಕೊಲೆ ನಡೆಯಿತು. ಅವರ ಅಂತಿಮ ಯಾತ್ರೆ ಸಂದರ್ಭದಲ್ಲಿ ಕೆಲವು ಯುವಕರು ಪೊಲೀಸರ ಮೇಲೆ ಆಕ್ರೋಶ ವ್ಯಕ್ತಪಡಿಸಲು ಮುಂದಾದರು. ಆಗ ನಡೆದ ಗೋಲಿಬಾರ್‌ನಲ್ಲಿ ಇಬ್ಬರು ಯುವಕರು ಮೃತಪಟ್ಟಿದ್ದರು. ಇದು ಜಿಲ್ಲೆಯಾದ್ಯಂತ ಕೋಮು ದ್ವೇಷದ ಜ್ವಾಲೆ ಇನ್ನಷ್ಟು ಹಬ್ಬಲು ಕಾರಣವಾಯಿತು. ಬಳಿಕ ಉಳ್ಳಾಲ, ಮಾಸ್ತಿಕಟ್ಟೆ, ಫರಂಗಿಪೇಟೆಯಲ್ಲಿ ಹತ್ಯೆಗಳು ನಡೆದವು. ಆಗ ಅನೇಕ ದಿನ ಕರ್ಫ್ಯೂ ಜಾರಿಗೊಳಿಸಲಾಗಿತ್ತು. ಬಳಿಕ ಪೊಲೀಸರು ಈ ಪ್ರಕರಣದ ಆರೋಪಿ ಮೂಲ್ಕಿ ರಫೀಕ್ ಹಾಗೂ ಬುಲೆಟ್ ಸುಧೀರ್ ಎಂಬವರನ್ನು ಎನ್‌ಕೌಂಟರ್ ಮಾಡಿದ್ದರು. 2008ರಲ್ಲಿ ನಡೆದ ಪೊಳಲಿ ಅನಂತು ಕೊಲೆ ಮತ್ತೆ ಜಿಲ್ಲೆಯು ಹೊತ್ತಿ ಉರಿಯಲು ಕಾರಣವಾಯಿತು. 2015ರ ಅಕ್ಟೋಬರ್‌ನಲ್ಲಿ ಮೂಡುಬಿದಿರೆಯ ಹೂವಿನ ವ್ಯಾಪಾರಿ ಪ್ರಶಾಂತ್ ಪೂಜಾರಿ ಅವರನ್ನು ಹತ್ಯೆ ಮಾಡಲಾಯಿತು. ಅಂತ್ಯಕ್ರಿಯೆ ವೇಳೆ ಶುರುವಾದ ಗಲಭೆ ಮತ್ತೆ ಕೋಮು ಸಂಘರ್ಷಕ್ಕೆ ಎಡೆ ಮಾಡಿತು. ನವೆಂಬರ್‌ನಲ್ಲಿ ಬಂಟ್ವಾಳದಲ್ಲಿ ಹರೀಶ್ ಪೂಜಾರಿಯ ಕೊಲೆಯಾಯಿತು.


ಸುಖಾನಂದ ಶೆಟ್ಟಿ ಕೊಲೆ ಆರೋಪಿ ಮಾಡೂರು ಇಸುಬು 2016ರಲ್ಲಿ ಜೈಲಿನೊಳಗೆ ಕೊಲೆಯಾಗಿದ್ದ. ಅದೇ ವರ್ಷ ನಗರದಲ್ಲಿ ಮತ್ತೆರಡು ಕೊಲೆಗಳಾದವು. 2017ರ ಜೂನ್‌ನಲ್ಲಿ ಎಸ್‌ಡಿಪಿಐ ನಾಯಕ ಅಶ್ರಫ್ ಕಲಾಯಿ ಹತ್ಯೆಯಾಯಿತು. ಕರಾವಳಿ ಮತ್ತೆ ಉದ್ವಿಗ್ನವಾಯಿತು. ಇದರ ಬೆನ್ನಲ್ಲೇ, ಜುಲೈನಲ್ಲಿ ಬಿ.ಸಿ.ರೋಡ್‌ನಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತ ಶರತ್ ಮಡಿವಾಳ ಕೊಲೆ ನಡೆಯಿತು. ಈ ಗಲಭೆ ತಣ್ಣಗಾಯಿತು ಎನ್ನುವಷ್ಟರಲ್ಲಿ 2018ರಲ್ಲಿ ಸುರತ್ಕಲ್‌ನಲ್ಲಿ ದೀಪಕ್ ರಾವ್ ಎಂಬುವರ ಹತ್ಯೆ ಆಯಿತು. ಇದಕ್ಕೆ ಪ್ರತೀಕಾರವಾಗಿ ಕೆಲವೇ ದಿನಗಳಲ್ಲಿ ಕೊಟ್ಟಾರದಲ್ಲಿ ಬಷೀರ್ ಎಂಬವರ ಕೊಲೆ ಮಾಡಲಾಯಿತು.

2022ರಲ್ಲಿ ಜಿಲ್ಲೆ ಮತ್ತೆ ಕೋಮು ದಳ್ಳುರಿಯಲ್ಲಿ ಸಿಲುಕಿತು. ಜುಲೈ 19ರಂದು ಬೆಳ್ಳಾರೆ ಬಳಿಯ ಕಳೆಂಜದಲ್ಲಿ ಮಸೂದ್ ಮೇಲೆ ಹಲ್ಲೆ ನಡೆದಿತ್ತು. ಅವರು ಜುಲೈ 21ರಂದು ಅಸುನೀಗಿದ್ದರು. ಇದಕ್ಕೆ ಪ್ರತೀಕಾರವಾಗಿ ಐದು ದಿನಗಳ ಬಳಿಕ ಅಂದರೆ, 26ರಂದು ಬಿಜೆಪಿ ಯುವಮೋರ್ಚಾ ಜಿಲ್ಲಾ ಘಟಕದ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ನಡೆಯಿತು. ಅದಕ್ಕೆ ಪ್ರತೀಕಾರವಾಗಿ ಜುಲೈ 28ರಂದು ಯುವಕ ಮೊಹಮ್ಮದ್ ಫಾಝಿಲ್‌ನನ್ನು ಸುರತ್ಕಲ್‌ನಲ್ಲಿ ಜನನಿಬಿಡ ಪ್ರದೇಶದಲ್ಲಿ ಕೊಲೆ ಮಾಡಲಾಯಿತು.

2025ರ ಏ. 27ರಂದು ಕುಡುಪುವಿನಲ್ಲಿ ನಡೆದ ಗುಂಪು ಹಲ್ಲೆ ಕೇರಳ ವಯನಾಡಿನ ಅಶ್ರಫ್ ಎಂಬವರ ಬಲಿ ಪಡೆ ಬೆನ್ನಲ್ಲೇ ಬಜಪೆಯಲ್ಲಿ ಮೇ 1ರಂದು ರೌಡಿಶೀಟರ್, ಹಿಂದುತ್ವವಾದಿ ಸಂಘಟನೆಯ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ನಡೆಯಿತು. ಮೇ 27ರಂದು ಬಂಟ್ವಾಳ ತಾಲ್ಲೂಕಿನ ಇರಾಕೋಡಿಯಲ್ಲಿ ಅಬ್ದುಲ್ ರಹಿಮಾನ್ ಎಂಬ ಯುವಕನ ಕೊಲೆಯಾಗಿದೆ...

30 ವರ್ಷಗಳಿಂದ ಈಚೆಗೆ ಜಿಲ್ಲೆಯಲ್ಲಿ 45ಕ್ಕೂ ಹೆಚ್ಚು ಮಂದಿ ಕೋಮುದ್ವೇಷಕ್ಕೆ ಬಲಿಯಾಗಿದ್ದಾರೆ. ಅವರಲ್ಲಿ ಕಾರಣ ಇಲ್ಲದೇ ಕೊಲೆಯಾದವರೇ ಜಾಸ್ತಿ. ಇಷ್ಟು ಜೀವಗಳ ಆಪೋಷನ ಪಡೆದರೂ ದ್ವೇಷದ ಜ್ವಾಲೆ ತಣ್ಣಗಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಏಕೆ ಇಷ್ಟೊಂದು ಕೋಮು ದ್ವೇಷ ಎಂಬುದು ಇನ್ನೂ ಉತ್ತರ ಸಿಗದ ಪ್ರಶ್ನೆ. ❖

ಪ್ರಮುಖ ಹತ್ಯೆ ಪ್ರಕರಣಗಳು



'ಈಗಿನದ್ದು ಸಂಘಟಿತ ಕೃತ್ಯಗಳು'

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1980ರ ದಶಕದವರೆಗೂ ಕೋಮುಗಲಭೆಗಳು ನಡೆಯುತ್ತಿದ್ದವಾದರೂ ಅವು ಸಂಘಟಿತ ಕೃತ್ಯಗಳಾಗಿರಲಿಲ್ಲ. ಆಕಸ್ಮಿಕವಾಗಿ ನಡೆಯುವ ಆ ಘಟನೆಗಳು ಸಹಜವಾಗಿಯೇ ತಣ್ಣಗಾಗುತ್ತಿದ್ದವು. ಆದರೆ ಈಗ ಹಾಗಲ್ಲ. ನಡೆಯುವ ಕೃತ್ಯಗಳ ಹಿಂದೆ ಸಂಘಟನೆಗಳ ಕೈವಾಡ ಇದೆ. ಅವರಿಗೆ ಹಣಕಾಸಿನ ಬೆಂಬಲ ನೀಡುವವರಿದ್ದಾರೆ. ವದಂತಿ ಹಬ್ಬಿಸಲು ಸಾಮಾಜಿಕ ಮಾಧ್ಯಮಗಳಿವೆ. ಕೋಮುದಳ್ಳುರಿಯನ್ನು ಹೊತ್ತಿಸಿ ಅದರಿಂದ ಲಾಭ ಪಡೆಯಲು ಕಾಯುವ ನಾಯಕರಿದ್ದಾರೆ. ಇವೆಲ್ಲವನ್ನು ಮಟ್ಟಹಾಕಲು ಪ್ರಬಲ ರಾಜಕೀಯ ಇಚ್ಛಾಶಕ್ತಿ ಬೇಕು. ಆದರೆ ರಾಜಕೀಯ ನಾಯಕರಿಗೂ ಕೋಮು ದ್ವೇಷ ಜೀವಂತವಾಗಿರಬೇಕು. ಪರಿಸ್ಥಿತಿ ಹೀಗಿರುವಾಗ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು' ಎಂದು ಪ್ರಶ್ನಿಸುತ್ತಾರೆ ಸಾಮಾಜಿಕ ಕಾರ್ಯಕರ್ತರೊಬ್ಬರು.

1960ರ ದಶಕದಲ್ಲೇ ನಲುಗಿದ್ದ ಜಿಲ್ಲೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ನಂತರದಲ್ಲಿ ನಡೆದ ಕೋಮು ಗಲಭೆಗಳ ಇತಿಹಾಸವನ್ನು ಕೆದಕುತ್ತಾ ಹೋದರೆ ಅದು 1960ರ ದಶಕದ ಹಿಂದಕ್ಕೆ ಹೋಗುತ್ತದೆ. 1968ರಲ್ಲಿ ಮಂಗಳೂರಿನ ಬಂದರಿನಲ್ಲಿ ವ್ಯಕ್ತಿಯೊಬ್ಬರು ಕೋಮುದ್ವೇಷಕ್ಕೆ ಬಲಿಯಾಗಿದ್ದರು. ಹಿಂದೂ ಮಹಿಳೆ ಮತ್ತು ಬ್ಯಾರಿ ಯುವಕ ನಡುವಿನ ಪ್ರೇಮ ಸಂಬಂಧ ಎರಡು ಧರ್ಮಗಳ ನಡುವೆ ದ್ವೇಷ ಹುಟ್ಟಲು ಕಾರಣವಾಗಿತ್ತು. 1979–80ರಲ್ಲಿ ಮುಸ್ಲಿಂ ಯುವಕ ಮತ್ತು ಹಿಂದೂ ಯುವತಿಯ ನಡುವೆ ನಡೆಯುವ ಪ್ರೇಮ ಕಥಾನಕವನ್ನು ಆಧರಿಸಿದ ಸಿನಿಮಾವೊಂದು 'ಕರಾವಳಿ'ಯಲ್ಲಿ ಕೋಮು ಗಲಭೆಗೆ ಕಾರಣವಾಗಿತ್ತು. ಮುಸ್ಲಿಂ ಹಾಗೂ ಹಿಂದೂಗಳ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿತ್ತು. ಹೊಯ್ಗೆಬಜಾರ್, ಕುದ್ರೋಳಿ, ಬಂದರು ಮುಂತಾದ ಪ್ರದೇಶಗಳಲ್ಲಿ ನಡೆದ ಈ ಗಲಭೆಯಲ್ಲಿ ಕೆಲವರು ಪ್ರಾಣ ಕಳೆದುಕೊಂಡಿದ್ದರು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸ ಮಾಡಿದ ಸಂದರ್ಭದಲ್ಲಿ ಮಂಗಳೂರಿನಲ್ಲೂ ಗಲಭೆಗಳು ನಡೆದಿದ್ದರೂ ಆಗ ಪ್ರಾಣ ಹಾನಿ ಸಂಭವಿಸಿರಲಿಲ್ಲ ಎಂದು ಹೇಳುತ್ತಾರೆ ಇಲ್ಲಿನ ಹಿರಿಯರು.

'ಕಣ್ಣಿಗೆ ಕಟ್ಟುವ ಕಣ್ಣೀರ ಕತೆಗಳು'

'ಪ್ರತಿ ಕೋಮು ಗಲಭೆಯಲ್ಲಿ ಅಮಾಯಕರು ಸತ್ತಾಗ ನೋವಾಗುತ್ತದೆ. ಏನೂ ತಪ್ಪೆಸಗದ ಮನೆಯ ಮಗನನ್ನು ಕಳೆದುಕೊಂಡ ತಂದೆ–ತಾಯಿ, ಬಂಧುಗಳು ಅನುಭವಿಸುವ ಕಷ್ಟವನ್ನು ಹತ್ತಿರದಿಂದ ನೋಡಿದ್ದೇನೆ. 2003ರಲ್ಲಿ ಮಂಗಳೂರಿನಲ್ಲಿ ನಡೆದ ಕೋಮುಗಲಭೆಯಲ್ಲಿ ರಿಕ್ಷಾ ಚಾಲಕನ ಹತ್ಯೆ ನಡೆದಿತ್ತು. ಆತನ ತಂದೆ ನಿತ್ಯ ಪುರಿ ಮಾರಿ ಬದುಕುತ್ತಿದ್ದ ಬಡಪಾಯಿ. ಮಗ ಸತ್ತದ್ದೇ ಅವರಿಗೆ ಗೊತ್ತಿಲ್ಲ. ಅವರಿಗೆ ವಿಷಯ ತಿಳಿಸಬೇಕಾಗಿ ಬಂದಾಗ ಬಹಳ ಸಂಕಟವಾಯಿತು. ಅವರ ಕುಟುಂಬ ಈಗಲೂ ಸಂಕಟ ಅನುಭವಿಸುತ್ತಿದೆ. ಇಂತಹ ಅನೇಕ ಕಣ್ಣೀರ ಕತೆಗಳು ಕಣ್ಣಿಗೆ ಕಟ್ಟಿದಂತಿವೆ' ಎಂದು ಮಂಗಳೂರಿನಲ್ಲಿ ಎಸಿಪಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಪೊಲೀಸ್ ಅಧಿಕಾರಿ ತಿಲಕಚಂದ್ರ ಮೆಲುಕು ಹಾಕುತ್ತಾರೆ.

ರಾಷ್ಟ್ರೀಯ

'ತುರ್ತು ಪರಿಸ್ಥಿತಿ: ಸಂಸತ್ತಿನ ವಿಶೇಷ ಅಧಿವೇಶನ?'



ಪ್ರಧಾನಿಯವರು ದೇಶವನ್ನು 11 ವರ್ಷಗಳಿಂದ ಅಘೋಷಿತ ತುರ್ತು ಸ್ಥಿತಿಯಲ್ಲಿ ಇರಿಸಿದ್ದಾರೆ. ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಉಗ್ರರು ಇನ್ನೂ ಸಿಗದಿರುವುದು ಏಕೆ ಎಂಬ ಪ್ರಶ್ನೆಗೆ ಉತ್ತರಿಸಲಿ.
ಜೈರಾಮ್ ರಮೇಶ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

ನವದೆಹಲಿ (ಪಿಟಿಐ): ತುರ್ತು ಪರಿಸ್ಥಿತಿ ಘೋಷಣೆಯಾದ 50ನೇ ವರ್ಷದ ಸಂದರ್ಭದಲ್ಲಿ ಸಂಸತ್ತಿನ ವಿಶೇಷ ಅಧಿವೇಶನ ಕರೆಯುವ ಬಗ್ಗೆ ಪರಿಶೀಲನೆ ನಡೆದಿದೆ ಎಂದು ಹೇಳಿರುವ ಕಾಂಗ್ರೆಸ್, 'ಇದು ಹೆಚ್ಚು ತುರ್ತಿನ ವಿಷಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಕಾಯಕಕ್ಕೆ ಇನ್ನೊಂದು ಉದಾಹರಣೆ' ಎಂದು ಟೀಕಿಸಿದೆ.

ಪಾಕಿಸ್ತಾನ ಮತ್ತು ಭಯೋತ್ಪಾದಕರನ್ನು ಗುರಿಯಾಗಿಸಬೇಕಾದ ಸಂದರ್ಭದಲ್ಲಿ ಬಿಜೆಪಿಯು ಕಾಂಗ್ರೆಸ್ಸಿನ ಮೇಲೆ ದಾಳಿ ನಡೆಸುವುದಕ್ಕೆ ಆಸಕ್ತಿ ತೋರುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಅದರ ಪರಿಣಾಮಗಳ ಬಗ್ಗೆ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸರ್ವ ಪಕ್ಷಗಳ ಸಭೆ ನಡೆಯಬೇಕು ಎಂದು ಕಾಂಗ್ರೆಸ್ ಪಕ್ಷವು ಏಪ್ರಿಲ್ 22ರ ರಾತ್ರಿಯಿಂದಲೇ ಆಗ್ರಹಿಸುತ್ತಿದೆ. ಆ ಸಭೆಯು ಇನ್ನೂ ನಡೆದಿಲ್ಲ ಎಂದು ರಮೇಶ್ ಹೇಳಿದ್ದಾರೆ.

'ಸಂಸತ್ತಿನ ವಿಶೇಷ ಅಧಿವೇಶನ ಕರೆದು ನಿರ್ಣಯ ಕೈಗೊಳ್ಳುವ ಮೂಲಕ ದೇಶದ ಒಗ್ಗಟ್ಟಿನ ತೀರ್ಮಾನವನ್ನು ತೋರಿಸಬೇಕು ಎಂದು ಲೋಕಸಭೆ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಪ್ರಧಾನಿಯವರಿಗೆ ಮೇ 10ರಂದು ಮನವಿ ಮಾಡಿದ್ದರು. ಇದನ್ನೂ ಪ್ರಧಾನಿ ಒಪ್ಪಿಲ್ಲ' ಎಂದು ರಮೇಶ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

'ತುರ್ತು ಪರಿಸ್ಥಿತಿ ಜಾರಿಗೆ ತಂದ 50ನೇ ವರ್ಷದ ಕಾರಣಕ್ಕೆ ಜೂನ್ 25, 26ಕ್ಕೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯುವ ಬಗ್ಗೆ ಪರಿಶೀಲನೆ ನಡೆದಿರುವುದಾಗಿ' ಎಂದು ರಮೇಶ್ ಹೇಳಿದ್ದಾರೆ. 'ನಿಜವಾದ ಹಾಗೂ ಹೆಚ್ಚು ತುರ್ತಿನ ವಿಷಯಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಪ್ರಧಾನಿ ನಡೆಸುವ ಕಾರ್ಯಕ್ಕೆ ಇದೊಂದು ಉತ್ತಮ ಉದಾಹರಣೆ' ಎಂದು ಅವರು ಹೇಳಿದ್ದಾರೆ. 'ಪ್ರಸಕ್ತ ಸವಾಲುಗಳ ಬಗ್ಗೆ ಮಾತನಾಡುವ ಬದಲು ಅವರು 50 ವರ್ಷಗಳ ಹಿಂದಿನ ವಿಷಯ ಚರ್ಚಿಸಲು ಬಯಸಿದ್ದಾರೆ' ಎಂದು ಟೀಕಿಸಿದರು.

ಆಗಸ್ಟಾ ಪ್ರಕರಣ: ಜೇಮ್ಸ್ ಅರ್ಜಿ ವಜಾ



ನವದೆಹಲಿ (ಪಿಟಿಐ): ₹3,600 ಕೋಟಿ ಹಣ ಅಕ್ರಮ ವರ್ಗಾವಣೆ ಆರೋಪದ ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಪ್ರಕರಣದ ಆರೋಪಿ, ಬ್ರಿಟನ್ ನಾಗರಿಕ ಕ್ರಿಸ್ಟಿಯಾನ್ ಮೈಕೆಲ್ ಜೇಮ್ಸ್ ಅವರು ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಆಗಸ್ಟಾ ವೆಸ್ಟ್‌ಲ್ಯಾಂಡ್ ಪ್ರಕರಣದಲ್ಲಿ ದಲ್ಲಾಳಿ ಎಂಬ ಆರೋಪ ಹೊತ್ತಿರುವ ಜೇಮ್ಸ್ ಜಾಮೀನು ಷರತ್ತುಗಳನ್ನು ಮಾರ್ಪಡಿಸಿದ್ದ ದೆಹಲಿ ಹೈಕೋರ್ಟ್ 'ಜಾಮೀನು ದೊರೆತ ನಂತರ ನೀವು ಎಲ್ಲಿ ನೆಲಸಲು ಉದ್ದೇಶಿಸಿದ್ದೀರಿ. ಆ ಸ್ಥಳದ ವಿಳಾಸವನ್ನು ನೀಡಬೇಕು' ಎಂದು ಮೇ 22ರಂದು ನಿರ್ದೇಶನ ನೀಡಿತ್ತು.

'ಶಿಂದೆ, ಅಜಿತ್ ಉತ್ತಮ ಸಂವಹನಕಾರರಲ್ಲ'

ಪ್ರಜಾವಾಣಿ ವಾರ್ತೆ



ದೇವೇಂದ್ರ ಫಡಣವೀಸ್

ಮುಂಬೈ: 'ಉಪ ಮುಖ್ಯಮಂತ್ರಿಗಳಾಗಿರುವ ಶಿವಸೇನೆಯ ಏಕನಾಥ ಶಿಂದೆ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಇಬ್ಬರೂ ಉತ್ತಮ ಸಂವಹನಕಾರರಲ್ಲ' ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಸುದ್ದಿಗಾರರ ಜೊತೆಗೆ ಮಾತನಾಡುತ್ತಿದ್ದ ಫಡಣವೀಸ್, 'ಡಿಸಿಎಂಗಳ ಪೈಕಿ ಉತ್ತಮ ಸಂವಹನಕಾರರು ಯಾರು' ಎಂಬ ಪ್ರಶ್ನೆಗೆ ಲಘು ಧಾಟಿಯಲ್ಲಿ ಹೀಗೆ ಪ್ರತಿಕ್ರಿಯಿಸಿದರು.

'ನಿಮ್ಮೊಂದಿಗೆ ಮುಕ್ತವಾಗಿ ಚರ್ಚಿಸುವುದಾದರೆ ಇಬ್ಬರಿಗೂ ಉತ್ತಮ ಸಂವಹನ ಕಲೆ ಇಲ್ಲ. ಈ ಮಾತಿಗಾಗಿ ಅವರು ನನ್ನನ್ನು ಕ್ಷಮಿಸಬೇಕು' ಎಂದು ಫಡಣವೀಸ್ ಹೇಳಿದರು.

ಇದಕ್ಕೆ ಉಭಯ ಮುಖಂಡರೂ ಪ್ರತಿಕ್ರಿಯಿಸಿಲ್ಲ. ಆದರೆ, ಪ್ರತಿಪಕ್ಷಗಳ ಮೈತ್ರಿಕೂಟ ಮಹಾವಿಕಾಸ ಆಘಾಡಿ, 'ಸರ್ಕಾರದಲ್ಲೇ ಪರಸ್ಪರ ಸಂವಹನ ಇಲ್ಲ. ಚರ್ಚೆಯೇ ಇಲ್ಲದೇ ಸರ್ಕಾರ ನಡೆಯುತ್ತಿದೆ' ಎಂದು ಟೀಕಿಸಿದೆ.

ಗುಂಡಣ್ಣ



ವಿನಾ ದೈನ್ಯೇನ ಜೀವನಂ, ಅನಾಯಾಸೇನ ಮರಣಂ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

206

ಒಬ್ಬ ಅನುಭಾವಿ ಇರುತ್ತಾನೆ. ಅವನು ದೇವರ ಮುಂದೆ ಕೈಮುಗಿದು ಕೇಳುತ್ತಾನೆ. 'ನನಗೆ ಕಷ್ಟ ಕೊಡು, ಸುಖ ಕೊಡು, ಶ್ರೀಮಂತಿಕೆ ಕೊಡು, ಬಡತನ ಕೊಡು ಏನಾದರೂ ಕೊಡು. ಆದರೆ ನನ್ನ ಬೇಡಿಕೆ ಎರಡೇ. ವಿನಾ ದೈನ್ಯೇನ ಜೀವನಂ, ಅನಾಯಾಸೇನ ಮರಣಂ. ಇವಿಷ್ಟೇ ನನ್ನ ಬೇಡಿಕೆ ಎನ್ನುತ್ತಾನೆ. ನೋವಿರದ ಬದುಕು ಬೇಕು. ನೋವಿರದ ಸಾವು ಇರಬೇಕು. ನಾವು ದೇವರ ಮುಂದೆ ಬರೀ ಕೇಳುವುದಷ್ಟೇ ಆಗಿದೆ. ನಮ್ಮ ಹೃದಯ ಭಿಕ್ಷಾ ಪಾತ್ರೆ ಆಗಿದೆ.

ಚಾತಕ ಪಕ್ಷಿ ಅಂತ ಒಂದು ಐತಿ. ಅದು ಕೆರೆ, ಬಾವಿ, ನದಿ ನೀರು ಕುಡಿಯೋದಿಲ್ಲ. ಅದು ನೇರವಾಗಿ ಮಳೆಯ ನೀರನ್ನೇ ಕುಡಿಯುತ್ತದೆ. ಆಕಾಶದಲ್ಲಿ ಮೋಡ ಕಟ್ಟಿತು ಅಂದರೆ ಅದು ಇಲ್ಲಿ ಬಾಯಿ ತೆರೆದುಕೊಂಡು ಕುಳಿತುಬಿಡುತ್ತದೆ. ಅದಕ್ಕೆ ಒಬ್ಬ ಕವಿ ಚಾತಕ ಪಕ್ಷಿಗೆ, 'ಏ ಚಾತಕ ಪಕ್ಷಿಯೇ ಎಲ್ಲರ ಬಳಿಯೂ ಕೇಳಬೇಡ. ಅವರು ಕೊಡುತ್ತಾರೆ ಎಂದು ಏನು ಗ್ಯಾರಂಟಿ? ಅಲ್ಲದೆ ನಿನ್ನನ್ನು ಅಪಹಾಸ್ಯ ಮಾಡುತ್ತಾರೆ. ಆಕಾಶದಲ್ಲಿ ಇರುವ ಮೋಡಗಳೆಲ್ಲಾ ಒಂದೇ ರೀತಿಯಲ್ಲಿ ಇಲ್ಲ. ಎಲ್ಲ ಮೋಡಗಳೂ ಮಳೆ ಸುರಿಸುವುದಿಲ್ಲ. ಕೆಲವು ಮೋಡಗಳು ಸುಮ್ಮನೆ ಶಬ್ದ ಮಾಡುತ್ತವೆ. ಇನ್ನು ಕೆಲವು ಮೋಡಗಳು ಮಳೆ ಸುರಿಸಿ ಭೂಮಿಯನ್ನು ಸಂತೃಪ್ತಿಗೊಳಿಸಿ ಹೋಗುತ್ತವೆ' ಎನ್ನುತ್ತಾನೆ. ಹಾಗೆಯೇ ಮನುಷ್ಯರಲ್ಲಿಯೂ ಎರಡು ತರಹ ಇದ್ದಾರೆ. ಕೆಲವರು ಬರೀ ಶಬ್ದ ಮಾಡುತ್ತಾರೆ. ಕೆಲವರು ನಿಜವಾಗಿ ಸಹಾಯ ಮಾಡುತ್ತಾರೆ. ಕಂಡವರ ಮುಂದೆ ಬೇಡುವುದನ್ನು ಮಾಡಬೇಡ. ದುಡಿಯುವ ಶಕ್ತಿಯನ್ನು ಕೇಳಬೇಕು. ಮನುಷ್ಯ ಬರಿ ಕೇಳುವುದರಲ್ಲಿ ನಿರತನಾಗಿದ್ದಾನೆಯೇ ವಿನಾ ಕೊಡುವ ಭಾವ ಅವನಲ್ಲಿ ಬಂದಿಲ್ಲ. ಇನ್ನೊಬ್ಬರ ಮುಂದೆ ಕೈಯೊಡ್ಡಿ ನಿಲ್ಲುವ ಹಾಗೆ ಮಾಡಬೇಡ. ಮತ್ತೆ ನೀನು ಏನು ಕೊಟ್ಟಿದ್ದೀಯಲ್ಲ. ಅದನ್ನು ದಾನ ಮಾಡುವ ಬುದ್ಧಿ ಕೊಡು ಎಂದು ದೇವರಲ್ಲಿ ಬೇಡಿಕೊಳ್ಳುವುದು ಅಷ್ಟೆ.

ದಾನ ಎಂದರೆ ಏನು? ಯಾವುದು ದಾನ ಅನ್ನಿಸಿಕೊಳ್ಳುತ್ತದೆ. ದಾನ ನೀಡುವುದು ನೀತಿಯುತವಾಗಿ ಗಳಿಸಿದ್ದು ಆಗಿರಬೇಕು. ಅನೀತಿಯಿಂದ ಬಂದಿದ್ದು ಆಗಬಾರದು. ಕೊಡುವುದು ಸತ್ಪಾತ್ರರಿಗೆ ಕೊಡಬೇಕು. ಕೊಡುವುದನ್ನು ಅನುರಾಗದಿಂದ ಕೊಡಬೇಕು. ಅದೇ ದಾನ. ಅನ್ಯಾಯದಿಂದ ಬಂದ ಹಣವನ್ನು ಯಾಕೆ ದಾನ ಮಾಡಬಾರದು? ಯಾಕೆಂದರೆ, ದಾನ ಕೊಟ್ಟರೆ ಆ ಹಣವನ್ನು ನಮ್ಮ ಬಂಧು ಬಳಗ, ಸ್ನೇಹಿತರು ಎಲ್ಲರೂ ಅನುಭವಿಸುತ್ತಾರೆ. ಆದರೆ ಅನ್ಯಾಯದಿಂದ ಬಂದ ಪಾಪವನ್ನು ಮಾತ್ರ ನಾವೇ ಅನುಭವಿಸಬೇಕು. ಅನ್ಯಾಯದಿಂದ ಬಂದ ಹಣದಿಂದ ದೇವರಿಗೆ ಹೋಳಿಗೆ ನೈವೇದ್ಯ ಮಾಡಿದರೂ ದೇವರಿಗೆ ಪ್ರೀತಿಯಾಗುವುದಿಲ್ಲ. ನಾವು ಕಷ್ಟಪಟ್ಟು ದುಡಿದಿದ್ದರಲ್ಲಿ ಒಂದು ಹುಲ್ಲು ಕಡ್ಡಿ ಇಟ್ಟರೂ ದೇವರಿಗೆ ತೃಪ್ತಿಯಾಗುತ್ತದೆ. ಆದರೆ ಮನುಷ್ಯನಿಗೆ ಬೇಗಬೇಗನೆ ಶ್ರೀಮಂತನಾಗಬೇಕು ಎಂಬ ಬಯಕೆ ಇದೆ. ನೀತಿಯಿಂದ ಬಂದ ಹಣವೇ ನಿಜವಾದ ಹಣ. ದಾರಿಯಲ್ಲಿ ಪುಕ್ಕಟೆಯಾಗಿ ಸಿಕ್ಕ ನೂರು ರೂಪಾಯಿಗಿಂತ ಕಷ್ಟಪಟ್ಟು ದುಡಿದ ಒಂದು ರೂಪಾಯಿ ದೊಡ್ಡದು ಎನ್ನುವುದನ್ನು ನಮ್ಮ ಮಕ್ಕಳಿಗೆ ಕಲಿಸಬೇಕು. ನೀತಿ ಬಿಟ್ಟಿರಬಾರದು. ನಾವು ಗಳಿಸಿದ್ದನ್ನು ಸತ್ಪಾತ್ರರಿಗೆ ಕೊಡಬೇಕು. ನಾವು ಕೊಟ್ಟಿದ್ದನ್ನು ಕನಸಿನಲ್ಲಿಯೂ ಕೆಟ್ಟದ್ದಕ್ಕೆ ಬಳಸಬಾರದು ಅಂತಹವರು ಸತ್ಪಾತ್ರರು. ಶಿವಕುಮಾರ ಸ್ವಾಮಿಗಳ ಜೋಳಿಗೆ ಬಡಮಕ್ಕಳ ಪಾಲಿಗೆ ಹೋಳಿಗೆಯಾಗಿತ್ತು. ಅದು ನಿಜವಾದ ಸತ್ಪಾತ್ರವಾಗಿತ್ತು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮೇ 30, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಚತುರ್ಥಿ ಗಂ.21-23 ನಕ್ಷತ್ರ: ಪುನರ್ವಸು ಗಂ. 21-29 ಯೋಗ: ಗಂಡ ಗಂ. 12-57 ಕರಣ: ವಣಜೆ ಗಂ. 10-15, ವೃಷಭ ಮಾಸದ 16 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 02 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 2, 9

ಮೇಷ: ಸಂಬಂಧಿಕರ ವಲಯದಲ್ಲಿ ತಪ್ಪು ಅಭಿಪ್ರಾಯಗಳು ದೂರಾಗಲಿವೆ. ಹೊಸಮನೆಯ ಅಲಂಕಾರಕ್ಕಾಗಿ ಹೆಚ್ಚಿನ ವಸ್ತುಗಳನ್ನು ಕೊಳ್ಳುವಿರಿ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ.

ವೃಷಭ: ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಮನೆಯವರಿಗೆಲ್ಲ ಸಮಾಧಾನ. ಕೆಲಸಗಳೆಲ್ಲವೂ ತನ್ನಷ್ಟಕ್ಕೆ ತಾನೆಯೇ ಪೂರ್ಣಗೊಳ್ಳುವುದು.

ಮಿಥುನ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿರುವುದು. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ.

ಕರ್ಕಾಟಕ: ಈ ದಿನ ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಬಹಳ ಉಪಯೋಗವಾಗಲಿದೆ. ಇಂದು ಮನಸ್ಸನ್ನು ಜಾಗ್ರತೆಯಾಗಿ ಇಟ್ಟುಕೊಳ್ಳಿ. ಷೇರು ವ್ಯವಹಾರಗಳಿಂದ ಲಾಭ ಬರುವುದು.

ಸಿಂಹ: ಮನೆಯಲ್ಲಿ ನಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದನೆ ಆಗಲಿದೆ.

ಕನ್ಯಾ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಏರಿಳಿತದ ನಡುವೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ವಾಹನ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ. ವಿದೇಶಕ್ಕೆ ತೆರಳುವ ಅವಕಾಶ ಒದಗಲಿದೆ.

ತುಲಾ: ಪಾಲುದಾರಿಕೆ ವಿಷಯವಾಗಿ ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ನ್ಯಾಯಾಲಯದ ಮೊರೆ ಹೋಗುವಂಥ ಕೃತ್ಯಗಳು ನಡೆಯಲಿವೆ. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ.

ವೃಶ್ಚಿಕ: ಹೂವು-ಹಣ್ಣು, ತರಕಾರಿಗಳ ಮಾರಾಟಗಾರರಿಗೆ ತಾವು ನಿರೀಕ್ಷಿಸಿದಕ್ಕಿಂತ ಲಾಭವನ್ನು ವ್ಯಾಪಾರದಲ್ಲಿ ಪಡೆದಕೊಳ್ಳುವುದರಿಂದ ಸಂತೋಷ ಇರುವುದು. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನಾಗಲಿದೆ.

ಧನು: ಋಣಬಾಧೆಯಿಂದ ಮುಕ್ತರಾಗಲು ಗಮನ ನೀಡಿ. ವಸ್ತ್ರ ವಿನ್ಯಾಸ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಮಲ್ಲಿಕಾರ್ಜುನನ ಅನುಗ್ರಹ ಸಂಪಾದಿಸಿ.

ಮಕರ: ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ಉಂಟಾಗಲಿದೆ. ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು. ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವ ಸಂಭವವಿದೆ.

ಕುಂಭ: ಸ್ವಯಂ ಸಾಮರ್ಥ್ಯದ ಬಗ್ಗೆ ವಿಶ್ವಾಸವಿರಲಿ. ಮಾನಸಿಕ ವ್ಯಥೆಗಳು ನಿವಾರಣೆಯಾಗಲಿವೆ. ಉದ್ಯೋಗದಲ್ಲಿ ಸಿಗುವಂಥ ವರ್ಗಾವಣೆಯ ಅವಕಾಶಗಳನ್ನು ಬಿಡಬೇಡಿ.


ಮೀನ: ಉದಯೋನ್ಮುಖ ತಾರೆಯರಿಗೆ ಮತ್ತು ಕಲಾವಿದರಿಗೆ ಅವಕಾಶ ಲಭಿಸಲಿದೆ. ಹಿಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ. ನೆರೆಹೊರೆಯವರ ಕಿರಿಕಿರಿ ತಪ್ಪದು.

ಪದಬಂಧ 6058

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹುತ್ತ ಇಲ್ಲಿದೆ (3)
3.ಸೂಕ್ಷ್ಮವಾದ ಪರಿಶೀಲನೆ (3)
4.ಗಡಿ ಹತ್ತಿರ ಖರೀದಿಸಿದ ದೊಡ್ಡ ಹಾರೆ (3)
5.ಆಳಿನ ಕಣ್ಣಿಂದ ಉದುರಿದ ಅಶ್ರು (2)
6.ಕರದಲ್ಲಿರುವುದು ನೀರು ತುಂಬಿದ ಕಳಶ (3)
8.ವಿಷಯ ತಿಳಿಸಿದಾಗ ಆಗಿರುವ ದುಃಖ (3)
9.ಮಾತು ಕೇಳುತ್ತಿರುವ ಸೋದರಮಾವ (3)
11.ನರನು ನೋಡಿರುವ ಪಟ್ಟಣ (3)
15.ಈತ ಭಾರ ಹೊರುವ ಕೂಲಿಯಾಳು (3)
16.ಬಯ್ಯಲು ಸೂಕ್ತವೆನಿಸಿದ ವಿಸ್ತಾರ ಜಾಗ (3)
17.ಜನರು ನೀಡಿದ ಕಾಣಿಕೆ (3)

ಮೇಲಿಂದ ಕೆಳಕ್ಕೆ
2.ಕರುವಿನ ಪಚನಾಂಗ (3)
3.ಓರಿಗೆಯವರೊಂದಿಗೆ ಧರಿಸಿರುವ ಕಂಠಾಭರಣ (3)
4.ಟಾರ ರಸ್ತೆಯ ಬಳಿಯಲ್ಲಿರುವ ಮೋರಿ (3)
5.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
6.ದನಕ್ಕಾಗಿ ನಡೆದ ಕಾಳಗ (3)
7.ಈತ ಪಕ್ಕಾ ಹಳ್ಳಿಯವ (3)
10.ಲಟಕ್ಕನೆ ಮುತ್ತು ನೀಡಿರುವ ಹಣೆ (3)
12.ರಸ್ತೆಯ ಉದ್ದಗಲ ನಡೆಯುತ್ತಿರುವ ಗಲಾಟೆ (3)
13.ಮಹನೀಯ ಕಟ್ಟಿಸಿರುವ ಭವ್ಯ ಸೌಧ (3)
14.ದಿನದಲ್ಲೇ ಬಂದಿರುವ ಮಂತ್ರಿ (3)



6057ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನ 3.ಕಂತುಪಿತ 5.ಗುಲಾಬಿ 7.ಸಜಾ 9.ರಣ 11.ನರ 12.ಮಿತ 14.ಪಾನಕ 16.ಕರಂಡಕ 17.ಪಿತಾಮಹ

ಮೇಲಿಂದ ಕೆಳಕ್ಕೆ:
1.ಪ್ರವಾಸ 2.ನಗು 3.ಕಂಬಿ 4.ತರುಣ 6.ಲಾಲಸೆ 8.ಜಾಮೀನುದಾರ 9.ರಥಸಪ್ತಮಿ 10.ಭೋಜನ 11.ನಡುಕ 13.ತರಹ 14.ಪಾಕ 15.ಕಪಿ

ಸುಡೊಕು 6442

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6441 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಶೈಕ್ಷಣಿಕ ವರ್ಷದ ಆರಂಭೋತ್ಸವ • ವಿದ್ಯಾರ್ಥಿಗಳಿಗೆ ಹಸ್ತಲಾಘವ ಮಾಡಿದ ಮುಖ್ಯಮಂತ್ರಿ, ಶಿಕ್ಷಣ ಸಚಿವ

ಶಾಲೆ ಆರಂಭ: ಮಕ್ಕಳಿಗೆ ಸಂಭ್ರಮದ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಿಗ್ಗೆಯೇ ಎದ್ದು, ಸಮವಸ್ತ್ರ ತೊಟ್ಟು ಬಂದು ಕಾದು ಕುಳಿತಿದ್ದ ಮಕ್ಕಳು ಒಂದೆಡೆ. ಇನ್ನೇನು ಮಳೆ ಸುರಿಸಿಯೇ ಬಿಡುತ್ತೇವೆ ಎಂಬಂತೆ ಆಗಾಗ್ಗೆ ಸೂರ್ಯನನ್ನು ಮರೆಮಾಚುತ್ತಿದ್ದ ಮೋಡಗಳು ಇನ್ನೊಂದೆಡೆ. ಬಹಳ ದಿನಗಳ ನಂತರ ಸಿಕ್ಕಿದ್ದ ಸಹಪಾಠಿಗಳ ಜತೆಗಿನ ಮಕ್ಕಳ ಮಾತುಕತೆ–ಆಟದ ಮಧ್ಯೆ, ಅವರನ್ನು ಶಿಸ್ತಾಗಿ ಕೂರಿಸಲು ಶಿಕ್ಷಕರು ಹೊರಡಿಸುತ್ತಿದ್ದ ಆಜ್ಞೆಗಳು ವಿಶಾಲ ಬಯಲಿನಲ್ಲಿ ಚದುರಿಹೋದವು.

ಶಾಲಾ ಶೈಕ್ಷಣಿಕ ವರ್ಷದ ಆರಂಭವನ್ನು ಒಂದು ಉತ್ಸವವನ್ನಾಗಿ ನಡೆಸುವ ಸಲುವಾಗಿ ಶಾಲಾ ಶಿಕ್ಷಣ ಇಲಾಖೆಯು ನಗರದ ಆಡುಗೋಡಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ, 'ಶಾಲಾ ಪ್ರಾರಂಭೋತ್ಸವ'ದಲ್ಲಿ ಕಂಡ ದೃಶ್ಯಗಳಿವು. ಶಾಲೆ ಪ್ರವೇಶಕ್ಕೆ ಕಾತರಾಗಿದ್ದ ಮಕ್ಕಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಜತೆಯಾದರು.

ಕಾರಿಳಿದು ಮಕ್ಕಳೊಂದಿಗೆ ಶಾಲೆಯತ್ತ ಹೆಜ್ಜೆಹಾಕಿದ ಸಿದ್ದರಾಮಯ್ಯ ಅವರಿಗೆ ಹಸ್ತಲಾಘವ ನೀಡಿ, ವಿದ್ಯಾರ್ಥಿಗಳು ಖುಷಿಪಟ್ಟರು. ಸಿದ್ದರಾಮಯ್ಯನವರೂ ಮಕ್ಕಳ ತಲೆ ನೇವರಿಸಿ, 'ಚೆನ್ನಾಗಿ ಓದಬೇಕು' ಎಂದು ತಿಳಿಹೇಳಿದರು. ಶಾಲೆಗೆ ಮಕ್ಕಳ ಸ್ವಾಗತಕ್ಕಾಗಿಯೇ ರೂಪಿಸಿದ್ದ ವೇದಿಕೆ ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಮಕ್ಕಳ ಹರ್ಷೋದ್ಗಾರವೂ ಹೆಚ್ಚಿತು.

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದಿದ್ದ ವಿದ್ಯಾರ್ಥಿಗಳು, ದೂರದ ಊರುಗಳಿಂದ ಸನ್ಮಾನ ಕಾರ್ಯಕ್ರಮಕ್ಕೆ ಬಂದಿದ್ದರು. ಒಬ್ಬೊಬ್ಬರನ್ನೂ ವೇದಿಕೆಗೆ ಬರಮಾಡಿಕೊಂಡ ಮಧು ಬಂಗಾರಪ್ಪ ಅವರು, ವಿದ್ಯಾರ್ಥಿಗಳನ್ನು ಮುಖ್ಯಮಂತ್ರಿಗೆ ಪರಿಚಯಿಸಿ ಕೊಟ್ಟರು. ಪ್ರತಿ ವಿದ್ಯಾರ್ಥಿಯ ಹೆಸರು ಮತ್ತು ಅಂಕಗಳ ಬಗ್ಗೆ ನಿರೂಪಕರು ವಿವರ ನೀಡುತ್ತಿದ್ದಂತೆ ಉಳಿದ ಮಕ್ಕಳು ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ನಂತರ ಶಾಲಾ ವಿದ್ಯಾರ್ಥಿಗಳನ್ನು ವೇದಿಕೆಗೆ ಕರೆದು ಸಿಹಿ ನೀಡಿ ಸ್ವಾಗತಿಸಲಾಯಿತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಶಿಕ್ಷಣ ಸಚಿವರ ಮಾತು ಕೇಳಿದ ವಿದ್ಯಾರ್ಥಿಗಳು, ಅವರ ಕಿವಿಮಾತುಗಳಿಗೆ ತಲೆಯಾಡಿಸಿದರು. ವೇದಿಕೆ ಕಾರ್ಯಕ್ರಮದ ನಂತರ ಎಲ್ಲರಿಗೂ ಸಿಹಿ ನೀಡಲಾಯಿತು. ನಂತರ ಕೆಲವರು ತಮ್ಮ ತರಗತಿಗಳತ್ತ ನುಗ್ಗಿದರೆ, ಕೆಲವರು ಮೈದಾನಕ್ಕಿಳಿದು ಕುಣಿದು ಕುಪ್ಪಳಿಸಿದರು.



ಶಾಲಾ ತರಗತಿಗಳ ಆರಂಭೋತ್ಸವದ ಹಿನ್ನೆಲೆಯಲ್ಲಿ ಹುಬ್ಬಳ್ಳಿಯ ಗೋಪನಕೊಪ್ಪದ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕಿಯರು ಗುರುವಾರ ಮಕ್ಕಳನ್ನು ಸ್ವಾಗತಿಸಲು, ರಂಗೋಲಿ ಬಿಡಿಸಿದರು ಚಿತ್ರ: ಗೋವಿಂದರಾಜ ಜವಳಿ

'ಕೇಂದ್ರ ಸರ್ಕಾರದ ಪ್ರಶಂಸೆ'

'ರಾಜ್ಯದಲ್ಲಿ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸುವ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿಯ ಕಾರಣದಿಂದ ಎರಡು ವರ್ಷಗಳಲ್ಲಿ ಫಲಿತಾಂಶದ ಪ್ರಮಾಣ ಸುಧಾರಿಸಿದೆ. ಈ ಪದ್ಧತಿಯ ಬಗ್ಗೆ ಕೇಂದ್ರ ಮತ್ತು ದೆಹಲಿ ಸರ್ಕಾರಗಳು ಪ್ರಶಂಸೆ ವ್ಯಕ್ತಪಡಿಸಿದೆ. ದೆಹಲಿಯಲ್ಲಿ ಇದನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳುವ ಚಿಂತನೆ ನಡೆಸಿದೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

'ಈ ಪದ್ಧತಿ ಜಾರಿ ಮಾಡಿದಾಗಿನಿಂದ ಉತ್ತೀರ್ಣರಾಗುವವರ ಪ್ರಮಾಣ ಹೆಚ್ಚಾಗಿದೆ. ಎರಡನೇ ಪರೀಕ್ಷೆಯಲ್ಲಿ 60 ಸಾವಿರ ಮಕ್ಕಳು ಉತ್ತೀರ್ಣರಾಗಿದ್ದಾರೆ ಮತ್ತು ಅಂಕಗಳನ್ನು ಉತ್ತಮ ಪಡಿಸಿಕೊಂಡಿದ್ದಾರೆ. ಪರಿಣಾಮವಾಗಿ ಸಿಇಟಿಯಲ್ಲಿ ಅವರ ರ‍್ಯಾಂಕ್ ಸಹ ಉತ್ತಮಗೊಂಡಿದೆ' ಎಂದರು.

'ಹೆಚ್ಚು ಭಾಷೆ ಕಲಿಯಿರಿ, ಕನ್ನಡದಲ್ಲಿ ಮುಂದಿರಿ'

'ನೀವು ಹೆಚ್ಚು ಹೆಚ್ಚು ಭಾಷೆ ಕಲಿಯಬೇಕು. ಆದರೆ ಕನ್ನಡದಲ್ಲಿ ಸದಾ ಮುಂದಿರಬೇಕು. ಕನ್ನಡದಲ್ಲಿ ಕಲಿತರೆ ಮಕ್ಕಳು ಪ್ರತಿಭಾವಂತರಾಗುವುದಿಲ್ಲ ಎನ್ನುವುದು ತಪ್ಪು ಕಲ್ಪನೆ. ನಮ್ಮ ಕನ್ನಡ ಶಾಲೆಯ ಮಕ್ಕಳು ಈ ಬಾರಿಯ ಪರೀಕ್ಷೆಯಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಶಾಲಾ ಶಿಕ್ಷಣ ಇಲಾಖೆಯು ಹಲವು ಸುಧಾರಣೆಗಳನ್ನು ತಂದಿದೆ. ಕೃಪಾಂಕ ನೀಡುವುದನ್ನು ನಿಲ್ಲಿಸಿದೆ. ಎರಡು ಮತ್ತು ಮೂರನೇ ಪರೀಕ್ಷೆ ಬರೆಯಲು ಅವಕಾಶ ನೀಡುವ ಮೂಲಕ ಉತ್ತಮ ಫಲಿತಾಂಶ ಬರುವಂತೆ ಮಾಡಿದೆ. ಉತ್ತಮ ಫಲಿತಾಂಶ ಬಂದರೆ, ಸರ್ಕಾರಿ ಶಾಲೆಗಳಲ್ಲಿ ಹಾಜರಾತಿಯೂ ಹೆಚ್ಚುತ್ತದೆ' ಎಂದರು.

'ಮಕ್ಕಳಿಗೆ ಉತ್ತಮ ಪೌಷ್ಟಿಕಾಂಶ ಸಿಕ್ಕರೆ ಮಾತ್ರ ಉತ್ತಮ ವಿದ್ಯಾರ್ಥಿಗಳಾಗಿ ಓದಲು ಸಾಧ್ಯ. ಈ ಕಾರಣಕ್ಕೇ ನಾವು ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ, ಹಾಲು ಕೊಡುತ್ತಿದ್ದೇವೆ. ಇದರ ಜತೆಗೆ ಪಠ್ಯ, ಸಮವಸ್ತ್ರ, ಶೂ, ಸಾಕ್ಸ್, ಪುಸ್ತಕಗಳನ್ನೂ ಸರ್ಕಾರದಿಂದಲೇ ಕೊಡುತ್ತಿದ್ದೇವೆ. ಇವನ್ನೆಲ್ಲಾ ಸರಿಯಾಗಿ ಬಳಸಿಕೊಂಡು ಮಕ್ಕಳು ಮುಂದೆಬರಬೇಕು' ಎಂದರು.

'1992–93ರಲ್ಲಿ ನಾನು ಹಣಕಾಸು ಸಚಿವನಾಗಿದ್ದಾಗ 1 ಲಕ್ಷ ಶಿಕ್ಷಕರ ನೇಮಕಾತಿಗಾಗಿ ಅನುಮೋದನೆ ನೀಡಿದ್ದೆ. ಈ ಬಾರಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ₹725 ಕೋಟಿ ನೀಡಿದ್ದೇವೆ. ಗುಣಮಟ್ಟದಲ್ಲಿ ಸರ್ಕಾರಿ ಶಾಲೆಗಳು ಹಿಂದೆ ಉಳಿದಿಲ್ಲ. ಪರೀಕ್ಷಾ ಫಲಿತಾಂಶವೇ ಅದನ್ನು ಸಾಬೀತು ಮಾಡಿದೆ' ಎಂದರು.

'ರಾಜನಾಗುತ್ತೀರೋ, ಸೇವಕನೋ'

'ಚೆನ್ನಾಗಿ ಓದಿದರೆ ರಾಜನಾಗುತ್ತೀರಿ. ಇಲ್ಲವೇ ಸೇವಕನಾಗುತ್ತೀರಿ. ಯಾರೂ ಕದಿಯಲಾಗದ, ಬೆಂಕಿ ಸುಡಲಾರದ, ನೀರಿನಲ್ಲಿ ನೆನೆಯದ ಸಂಪತ್ತು ಎಂದರೆ ಅದು ವಿದ್ಯೆ ಮಾತ್ರ. ನೀವು ರಾಜನಾಗುತ್ತೀರೋ ಅಥವಾ ಸೇವಕನಾಗುತ್ತೀರೋ ಎಂಬುದನ್ನು ನೀವೇ ನಿರ್ಧರಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಕ್ಕಳಿಗೆ ಕಿವಿಮಾತು ಹೇಳಿದರು.

'ರಾಜ್ಯದಲ್ಲಿ 2,000 ಸರ್ಕಾರಿ ಶಾಲೆಗಳನ್ನು ಪಬ್ಲಿಕ್ ಶಾಲೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡು, ಬೇರೆಡೆಯಿಂದ ಈ ಪಬ್ಲಿಕ್ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸುತ್ತೇವೆ. ಪಂಚಾಯತಿ ಮಟ್ಟದಲ್ಲಿ ಅನೇಕ ಸಂಸ್ಥೆಗಳು ಶಾಲೆಗಳ ನಿರ್ಮಾಣಕ್ಕೆ ಮುಂದೆ ಬಂದಿವೆ' ಎಂದರು.

ಸುದ್ದಿ 2 ನಿಮಿಷ

ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಸಂಗೀತ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಂಗೀತದಲ್ಲಿನ ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸ್‌ಗೆ 'ದಿ ಮ್ಯೂಸಿಕ್ ಅಕಾಡೆಮಿ ಮದ್ರಾಸ್' ಅರ್ಜಿ ಆಹ್ವಾನಿಸಿದೆ. ಇದು ಮೂರು ವರ್ಷಗಳ ಕೋರ್ಸ್.

ಅರ್ಜಿ ಸಲ್ಲಿಸಲು ಜೂನ್ 25 ಕಡೆಯ ದಿನ. ಜುಲೈನಿಂದ ತರಗತಿಗಳು ಆರಂಭವಾಗಲಿದ್ದು, 'ದಿ ಮ್ಯೂಸಿಕ್ ಅಕಾಡೆಮಿ'ಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ತರಗತಿಗಳು ನಡೆಯುತ್ತವೆ.

12ನೇ ತರಗತಿ ಉತ್ತೀರ್ಣರಾಗಿರುವ, 18ರಿಂದ 30 ವರ್ಷ ವಯಸ್ಸಿನ ನಡುವೆ ಇರುವವರು ಈ ಕೋರ್ಸ್‌ಗೆ ಸೇರಲು ಅರ್ಹರು. ಕೋರ್ಸ್ ಸೇರಲು ಬಯಸುವವರಿಗೆ ವರ್ಣಗಳು, ಕೃತಿಗಳನ್ನು ಹಾಡಲು ಬರಬೇಕು, ಅವರಿಗೆ ತಕ್ಕಮಟ್ಟಿಗೆ ಸಂಗೀತದ ಮನೋಧರ್ಮ ಇರಬೇಕು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ನಮೂನೆಗಳನ್ನು ಅಕಾಡೆಮಿಯ ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಅಭ್ಯರ್ಥಿಗಳು ಅರ್ಜಿಯನ್ನು ತಮ್ಮ ವೈಯಕ್ತಿಕ ವಿವರ ಮತ್ತು ಸಂಗೀತ ತರಬೇತಿ ವಿವರಗಳ ಜೊತೆ ಇ–ಮೇಲ್ ಮೂಲಕ ಕಳುಹಿಸಬೇಕು.

ವೆಬ್‌ಸೈಟ್ ವಿಳಾಸ: www.musicacademymadras.in ದೂರವಾಣಿ ಸಂಖ್ಯೆ: 044-2811 2231, 2811 6902, 2811 5162.

ಲೋಕೇಶ್ವರ ಸ್ವಾಮೀಜಿ ಮಠ ನೆಲಸಮ



ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮೇಖಳಿ ಗ್ರಾಮದಲ್ಲಿ ಸರ್ಕಾರಿ ಗಾಯರಾಣ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತಹಶೀಲ್ದಾರ್ ಸುರೇಶ ಮುಂಜೆ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತಿನಲ್ಲಿ ಗುರುವಾರ ತೆರವುಗೊಳಿಸಲಾಯಿತು. ಅತ್ಯಾಚಾರ ಆರೋಪದ ಮೇಲೆ ಬಂಧಿತರಾಗಿರುವ ಹಠಯೋಗಿ ಲೋಕೇಶ್ವರ ಸ್ವಾಮೀಜಿಗೆ ಈ ಕಟ್ಟಡಗಳು ಸೇರಿದ್ದಾಗಿತ್ತು.


'ಮೇಖಳಿ ಗ್ರಾಮದ ಗಾಯರಾಣ ಸ.ನಂ.225ರಲ್ಲಿ ಒಟ್ಟು 21 ಎಕರೆ 23 ಗುಂಟೆ ಪೈಕಿ ಎಂಟು ಎಕರೆಯಲ್ಲಿ ಸ್ವಾಮೀಜಿ ನಿರ್ಮಿಸಿದ್ದ ಮಠ ಮತ್ತು ಅನ್ನದಾಸೋಹ ಭವನವನ್ನು ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ ನಡೆಸಿ, ಜಮೀನನ್ನು ಇಲಾಖೆ ಸುಪರ್ದಿಗೆ ಪಡೆಯಲಾಗಿದೆ. ಸರ್ಕಾರ ಅನುದಾನ ನೀಡಿದ ನಂತರ ಜಮೀನಿಗೆ ತಂತಿ ಬೇಲಿ ಹಾಕಲಾಗುವುದು' ಎಂದು ತಹಶೀಲ್ದಾರ ಸುರೇಶ ಮುಂಜೆ ತಿಳಿಸಿದರು.

ಪ್ರತಿಭಟಿಸಿದ ಮುಖ್ಯ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ನಿಡಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ತರಗತಿ ಕೊಠಡಿಗಳ ಮಂಜೂರಾತಿಗಾಗಿ ಆಗ್ರಹಿಸಿ ಮೌನ ಕಾಲ್ನಡಿಗೆ ಹಾಗೂ ಉಪವಾಸ ಪ್ರತಿಭಟನೆ ನಡೆಸಿದ್ದ ಮುಖ್ಯ ಶಿಕ್ಷಕ ವೀರಣ್ಣ ಮಡಿವಾಳರ ಅವರನ್ನು ಗುರುವಾರ ಸೇವೆಯಿಂದ ಅಮಾನತು ಮಾಡಲಾಗಿದೆ.

'ಸರ್ಕಾರಿ ನೌಕರನಾಗಿ ಅದರಲ್ಲೂ ಮುಖ್ಯಶಿಕ್ಷಕನಾಗಿ ಇಲಾಖೆ ವಿರುದ್ಧ ಪ್ರತಿಭಟಿಸಿ, ಇಲಾಖೆ ಹಾಗೂ ಸರ್ಕಾರಕ್ಕೆ ಮುಜು'ಗರ ಉಂಟು ಮಾಡಿದ್ದೀರಿ. ಈಗಾಗಲೇ ಎರಡು ಕೊಠಡಿ ಮಂಜೂರು ಆಗಿವೆ. ಶೀಘ್ರ ಕೆಲಸಗಳು ಆರಂಭವಾಗಲಿವೆ ಎಂದು ತಿಳಿ ಹೇಳಿದರೂ ಅನುಚಿತವಾಗಿ ವರ್ತಿಸಿದ್ದೀರಿ. ಈ ಎಲ್ಲದರ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ' ಎಂದು ರಾಯಬಾಗ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ. ಆರ್ ತಿಳಿಸಿದ್ದಾರೆ.



ವೀರಣ್ಣ

ಇದಕ್ಕೆ ವೀರಣ್ಣ ಮಡಿವಾಳರ, 'ಶಾಲೆಯ ಅಭಿವೃದ್ಧಿಗೆ 9 ವರ್ಷಗಳಿಂದ ಶ್ರಮಿಸುತ್ತಿದ್ದೇನೆ. ಇದಕ್ಕೆ ಸಾಕ್ಷಿಯಾಗಿ ಶಾಲೆಗೆ ಹಲವು ಪ್ರಶಸ್ತಿಗಳು ಬಂದಿವೆ. ಸರಿಯಾದ ವ್ಯವಸ್ಥೆ ಇಲ್ಲದೇ ಕೂರಲು ಕಷ್ಟ ಎಂದು ಮಕ್ಕಳು ಹೇಳಿದ ಕಾರಣಕ್ಕೆ ಪ್ರತಿಭಟನೆ ನಡೆಸಿದೆ' ಎಂದಿದ್ದಾರೆ.

'ನಾನು ಸರಕಾರದ ಘನತೆ ಹೆಚ್ಚಿಸುವ ಕೆಲಸ ಮಾಡಿದ್ದೇನೆ, ಇಲಾಖೆ ಅಥವಾ ಸರ್ಕಾರಕ್ಕೆ ಮುಜುಗರ ತಂದಿಲ್ಲ. ನಾಲ್ಕು ಕೊಠಡಿ ನಿರ್ಮಿಸಿಕೊಡಿ. ಕನಸಿನ ಶಾಲೆ ನಿರ್ಮಿಸಲು ನಮ್ಮ ಜೊತೆ ಕೈಜೋಡಿಸಿ' ಎಂದು ಕೋರಿದ್ದಾರೆ.

ಸರ್ಕಾರಿ ಶಾಲೆ: ಎಲ್‌ಕೆಜಿ ಪ್ರವೇಶಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ: ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ 'ದಾಖಲಾತಿ ಆಂದೋಲನ' ಮೂಲಕ ಶಿಕ್ಷಣ ಇಲಾಖೆ ಎಲ್ಲೆಡೆ ಅರಿವು ಮೂಡಿಸುತ್ತಿದ್ದರೆ, ತಾಲ್ಲೂಕಿನ ಮಾಗಳ ಗ್ರಾಮದ ಪಿಎಂಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೀಟು ಸಿಗುವುದೇ ಕಷ್ಟ ಎಂಬ ಸ್ಥಿತಿ ಇದೆ.

ಮೊದಲ ದಿನವೇ ಎಲ್ಲ ಸೀಟುಗಳು ಭರ್ತಿಯಾಗಿದ್ದು, ಶಾಲೆಯ ಮುಂದೆ ಗುರುವಾರ ಪೋಷಕರು ಸರದಿಯಲ್ಲಿ ನಿಂತು ಮಕ್ಕಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದರು. ಈ ಶಾಲೆಯು ಶತಮಾನೋತ್ಸವ ಆಚರಿಸಿಕೊಂಡಿದೆ.

ಶಾಲಾ ಪ್ರಾರಂಭೋತ್ಸವ ಮೊದಲ ದಿನವೇ ಎಲ್‌ಕೆಜಿಯ 30 ಸೀಟುಗಳಿಗೆ 50ಕ್ಕೂ ಹೆಚ್ಚು ಪ್ರವೇಶ ಅರ್ಜಿಗಳು ಸಲ್ಲಿಕೆ ಆಗಿವೆ. ಎಲ್‌ಕೆಜಿಯಿಂದ 7ನೇ ತರಗತಿವರಗೆ ಪ್ರತಿ ತರಗತಿಗೆ 30 ಸೀಟುಗಳು ಲಭ್ಯವಿದ್ದು, ಎಲ್ಲ ಸೀಟುಗಳು ಭರ್ತಿಯಾಗಿವೆ.

ಶಾಲೆಯ ಕನ್ನಡ ಮಾಧ್ಯಮ ವಿಭಾಗಕ್ಕೂ ಬೇಡಿಕೆ ಹೆಚ್ಚಿದೆ. 1ರಿಂದ 7ನೇ ತರಗತಿವರೆಗೆ ಎರಡೆರಡು ವಿಭಾಗಗಳನ್ನು ಮಾಡಿ, ಬೋಧಿಸಲಾಗುತ್ತಿದೆ. ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಸೇರಿ 669 ವಿದ್ಯಾರ್ಥಿಗಳು ಓದುತ್ತಿದ್ದು, ದಾಖಲಾತಿ ಇನ್ನೂ ಹೆಚ್ಚುವ ಸಾಧ್ಯತೆ ಇದೆ.

ಈ ಶಾಲೆ ಕೇಂದ್ರ ಸರ್ಕಾರದ ಪಿಎಂಶ್ರೀ ಯೋಜನೆಗೆ ಆಯ್ಕೆಯಾದ ಬಳಿಕ ಬೇಡಿಕೆ ಇನ್ನೂ ಹೆಚ್ಚಾಗಿದೆ. ಸ್ಮಾರ್ಟ್ ಕ್ಲಾಸ್, ಡಿಜಿಟಲ್ ಲೈಬ್ರರಿ, ಕಂಪ್ಯೂಟರ್ ಲ್ಯಾಬ್ ಮೂಲಕ ಮಕ್ಕಳಿಗೆ ಆಧುನಿಕ ಶಿಕ್ಷಣ ನೀಡಲಾಗುತ್ತಿದೆ. 6 ಮತ್ತು 7ನೇ ತರಗತಿ ಮಕ್ಕಳಿಗೆ ಯೋಗಾಭ್ಯಾಸ, ಬಾಲಕಿಯರಿಗೆ ಕರಾಟೆ ತರಬೇತಿ ನೀಡಲಾಗುತ್ತಿದೆ.

'ಇಂಗ್ಲಿಷ್ ಮಾಧ್ಯಮ ಎಲ್‌ಕೆಜಿಗೆ 30 ಸೀಟುಗಳು ಲಭ್ಯವಿದ್ದು, 50ಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಮೊದಲು ಬಂದವರಿಗೆ ಆದ್ಯತೆ ನೀಡಿ, ಉಳಿದ ಅರ್ಜಿಗಳ ಕುರಿತು ಇಲಾಖೆಗೆ ಪ್ರಸ್ತಾವ ಸಲ್ಲಿಸುತ್ತೇವೆ' ಎಂದು ಮುಖ್ಯ ಶಿಕ್ಷಕ ಡಿ. ವಿರುಪಣ್ಣ ತಿಳಿಸಿದ್ದಾರೆ.



ಹೂವಿನಹಡಗಲಿ ತಾಲ್ಲೂಕು ಮಾಗಳ ಗ್ರಾಮದ ಪಿಎಂಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಎಲ್‌ಕೆಜಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಪೋಷಕರು ಗುರುವಾರ ಸಾಲಿನಲ್ಲಿ ನಿಂತಿದ್ದರು

'ಕೇಂದ್ರದ ಜನಗಣತಿಗೆ ಕಾನೂನು ಮಾನ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರಗಳು ಜಾತಿ ಗಣತಿ ನಡೆಸಿದರೆ, ಅದಕ್ಕೆ ಕಾನೂನಿನ ಮಾನ್ಯತೆ ಇಲ್ಲ. ಕೇಂದ್ರ ಸರ್ಕಾರ ನಡೆಸುವ ಗಣತಿಯೇ ಅಧಿಕೃತ ಮತ್ತು ಅದಕ್ಕೆ ಕಾನೂನಿನ ಮಾನ್ಯತೆ ಇದೆ ' ಎಂದು ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ರಾಧಾ ಮೋಹನದಾಸ್ ಅಗರವಾಲ್ ಅವರು ಹೇಳಿದ್ದಾರೆ.

'ಹೀಗಾಗಿ ರಾಜ್ಯ ಸರ್ಕಾರಗಳು ಜಾತಿ ಗಣತಿ ಮಾಡಿಸಿ ವರದಿ ಪಡೆಯುವುದರಿಂದ ಏನು ಮಾಡಲು ಸಾಧ್ಯವಿಲ್ಲ ಎಂಬುದು ಜನರಿಗೂ ಗೊತ್ತಿದೆ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.



ರಾಧಾ ಮೋಹನದಾಸ್ ಅಗರವಾಲ್

'ಆದ ಕಾರಣ ಜನಗಣತಿಯೊಂದಿಗೆ ಜಾತಿ ಗಣತಿ ನಡೆಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೇಂದ್ರ ನಡೆಸುವ ಗಣತಿಯೇ ಎಲ್ಲದಕ್ಕೂ ಪರಿಹಾರ. ಕಾನೂನು ಪ್ರಕಾರ ಮಾನ್ಯತೆಯೂ ಇದೆ. ಕೇಂದ್ರ ನಡೆಸುವ ಗಣತಿ ಹಾಲು ಇದ್ದಂತೆ, ರಾಜ್ಯಗಳು ನಡೆಸುವ ಗಣತಿ ನೀರು ಇದ್ದಂತೆ. ಹಾಲಿನದು ಹಾಲಿಗೆ, ನೀರಿನದು ನೀರಿಗೆ ಆಗಿ ಹೋಗಲಿ' ಎಂದು ಸ್ಪಷ್ಟಪಡಿಸಿದರು.

ಮೂರು ದಿನ ಮಳೆ: ಮೀನುಗಾರರಿಗೆ ಎಚ್ಚರಿಕೆ

ಬೆಂಗಳೂರು: ಕರಾವಳಿಯಲ್ಲಿ ಶುಕ್ರವಾರದಿಂದ ಮೂರು ದಿನಗಳು ಮಳೆಯ ಜತೆಗೆ ಭಾರಿ ಗಾಳಿ ಬೀಸುವ ಸಾಧ್ಯತೆಯಿದ್ದು, ಮೀನುಗಾರರು ಎಚ್ಚರವಹಿಸಬೇಕು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗಂಟೆಗೆ 35ರಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಜತೆಗೆ ಸಮುದ್ರದಲ್ಲಿ ಅಲೆಗಳ ಉಬ್ಬರ ಉಂಟಾಗುವ ಸಂಭವವಿದೆ. ಆದ್ದರಿಂದ ಸಣ್ಣ ಹಡಗುಗಳು ಸಂಚರಿಸದಂತೆ, ಸಮುದ್ರ ತೀರದ ಮನೋರಂಜನಾ ಚಟುವಟಿಕೆಗಳನ್ನು ಸ್ಥಗಿತಗೊಳಿಸುವಂತೆ ಸೂಚಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದ್ದು, ಒಂದು ಅಥವಾ ಎರಡು ಸ್ಥಳಗಳಲ್ಲಿ ಧಾರಾಕಾರ ಮಳೆಯಾಗುವ ಸಂಭವವಿದೆ. ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳ ಒಂದೆರಡು ಕಡೆ ಭಾರಿ ಮಳೆಯಾಗುವ ಸಂಭವವಿದೆ. ಶನಿವಾರದಿಂದ ಮಳೆಯ ತೀವ್ರತೆ ರಾಜ್ಯದಾದ್ಯಂತ ಕಡಿಮೆಯಾಗುವ ಸಂಭವವಿದೆ. ಶನಿವಾರ ಮತ್ತು ಭಾನುವಾರದಂದು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ 'ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಮಳೆ: ನದಿ, ತೊರೆಗಳಿಗೆ ಜೀವಕಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಗುರುವಾರ ಬೆಳಿಗ್ಗೆ ಬಿರುಸಿನಿಂದ ಮಳೆಯಾಗಿದೆ. ಸೋಮವಾರಪೇಟೆಯಲ್ಲಿ ಸಂಜೆ ಭಾರಿ ಮಳೆ ಸುರಿಯಿತು. ಮಡಿಕೇರಿ ಭಾಗದಲ್ಲಿ ದಿನವಿಡೀ ಆಗಾಗ ಬಿರುಸಿನಿಂದ ಕೂಡಿತ್ತು.

ಕಾವೇರಿ ನದಿ ಸೇರಿದಂತೆ ತೊರೆಗಳು, ಹಳ್ಳಕೊಳ್ಳಗಳಿಗೆ ಜೀವಕಳೆ ಬಂದಿದೆ. ಹಾರಂಗಿ ಜಲಾಶಯದ ಮಟ್ಟ ಗುರುವಾರ 2,843.19 ಅಡಿಗಳಿಗೆ ತಲುಪಿದೆ. ಒಳಹರಿವು 3,299 ಕ್ಯುಸೆಕ್ ಇತ್ತು. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಗ್ರಾಮದಲ್ಲಿ ಗುಡ್ಡ ಕುಸಿತ ಹಾಗೂ ತಡೆಗೋಡೆ ಕುಸಿತ ಸ್ಥಳಕ್ಕೆ ಗುರುವಾರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭೇಟಿ ನೀಡಿ ಪರಿಶೀಲಿಸಿದರು.

'ಹಾಸನದಿಂದ- ಮಾರನಹಳ್ಳಿವರೆಗಿನ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಕಳಪೆ ಕಾಮಗಾರಿ ಹಾಗೂ ಕಾಮಗಾರಿ ವಿಳಂಬಕ್ಕೆ ಕೇಂದ್ರ ಸರ್ಕಾರವೇ ನೇರ ಹೊಣೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವಿಲ್ಲ' ಎಂದರು.

'ಈ ಕಾಮಗಾರಿಯ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರದ್ದೇ. ನಾವು ಕೇಂದ್ರದ ಗಮನಕ್ಕೆ ತರಬಹುದಷ್ಟೆ. ನಿರಂತರವಾಗಿ ಭೂಕುಸಿತಗಳು ಸಂಭವಿಸುತ್ತಿವೆ. ಕಾಮಗಾರಿಯನ್ನು ವೈಜ್ಞಾನಿಕವಾಗಿ ನಡೆಸುವಂತೆ ಕೇಂದ್ರಕ್ಕೆ ತಿಳಿಸಿದ್ದೇವೆ. ಆದರೆ, ನಮ್ಮ ಸಲಹೆಗಳನ್ನು ಕಾರ್ಯಗತ ಮಾಡುತ್ತಿಲ್ಲ' ಎಂದು ದೂರಿದರು.

ಮೈಸೂರು ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಂಜೆ ತುಂತುರು ಮಳೆ ಬಿದ್ದಿತು.


ಮೂಡುಬಿದಿರೆ (ದಕ್ಷಿಣಕನ್ನಡ): ಇಲ್ಲಿಗೆ ಸಮೀಪದ ಪಡುಮಾರ್ನಾಡು ಗ್ರಾಮದ ಕೊಪ್ಪಳ ಎಂಬಲ್ಲಿ ಗಾಳಿ- ಮಳೆಗೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ತುಳಿದು ಹಾಲು ಕೊಡುವ ಎರಡು ಹಸುಗಳು ಮೃತಪಟ್ಟಿವೆ.

ರಾಯಚೂರು: ಮಹಾರಾಷ್ಟ್ರದಲ್ಲಿ ಮಳೆಯಾಗುತ್ತಿರುವ ಕಾರಣ ಭೀಮಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಕೃಷ್ಣಾ ನದಿಗೂ ಹರಿದು ಬರುವ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ರಾಯಚೂರು ತಾಲ್ಲೂಕಿನ ಗುರ್ಜಾಪುರ ಬ್ಯಾರೇಜ್‌ನ ಗೇಟ್ ತೆರೆದು ನೀರು ಹರಿಯ ಬಿಡಲಾಗಿದೆ.

ರಾಯಚೂರು ತಾಲ್ಲೂಕಿನ ಕೃಷ್ಣಾ ನದಿ ಪಾತ್ರದ ಗ್ರಾಮಗಳ ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ತಾಲ್ಲೂಕು ಆಡಳಿತ ಎಚ್ಚರಿಕೆ ನೀಡಿದೆ.

ಬೀದರ್ ಜಿಲ್ಲೆಯ ಹುಮನಾಬಾದ್, ಚಿಟಗುಪ್ಪ, ಹುಲಸೂರಿನ ಗ್ರಾಮೀಣ ಭಾಗಗಳಲ್ಲಿಮಳೆಯಾಗಿದೆ. ಬೀದರ್, ಬಸವಕಲ್ಯಾಣದ ಗ್ರಾಮಾಂತರ ಪ್ರದೇಶಗಳಲ್ಲಿ ಗುಡುಗು ಸಹಿತ ಸಾಧಾರಣ ವರ್ಷಧಾರೆಯಾಗಿದೆ. ಮಹಾರಾಷ್ಟ್ರದಿಂದ ಬುಧವಾರ ರಾತ್ರಿ ಮಾಂಜ್ರಾ ನದಿಗೆ ನೀರು ಹರಿಸಿದ್ದರಿಂದ ಗದ್ದೆಗಳಿಗೆ ಅಪಾರ ಪ್ರಮಾಣದ ನೀರು ನುಗ್ಗಿತು.

ಆಲಮಟ್ಟಿ ಜಲಾಶಯದ ಒಳಹರಿವು ಹೆಚ್ಚುತ್ತಿದ್ದು, ಜಲಾಶಯದಿಂದ 10 ಸಾವಿರ ಕ್ಯೂಸೆಕ್ ನೀರನ್ನು ಗುರುವಾರ ಸಂಜೆಯಿಂದ ಹೊರಬಿಡಲಾಗುತ್ತಿದೆ. 'ಮಹಾರಾಷ್ಟ್ರದ ಕೃಷ್ಣಾ ಜಲಾನಯನದಲ್ಲಿ ಸುರಿಯುತ್ತಿರುವ ಮಳೆ ಗಮನದಲ್ಲಿ ಇಟ್ಟುಕೊಂಡು ಹೊರಹರಿವನ್ನು ಆರಂಭಿಸಲಾಗಿದೆ.



ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟ್‌ನಲ್ಲಿರುವ ಬಾಳೆಬರೆ ಜಲಪಾತಕ್ಕೆ ಜೀವಕಳೆ ಬಂದಿದೆ



ಸಾಲಿಗ್ರಾಮ ತಾಲ್ಲೂಕಿನ ಚುಂಚನಕಟ್ಟೆ ಧನುಷ್ಕೋಟಿ ಜಲಪಾತದಲ್ಲಿ ಕಾವೇರಿ ತುಂಬಿ ಹರಿಯುತ್ತಿದೆ ಚಿತ್ರ: ಹಂಪಾ ನಾಗರಾಜ

ಕಡಲತೀರಕ್ಕೆ ಬಂದ ಬೋಯ್ಯಾ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಮಳೆಯಾಗಿದೆ. ಗಾಳಿಯ ವೇಗವೂ ಹೆಚ್ಚಿರುವ ಪರಿಣಾಮ ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದೆ.



ಬೋಯ್ಯಾ

ಕಾರವಾರದ ದೇವಗಡ ಲೈಟ್ ಹೌಸ್ ಬಳಿ ಹಡಗುಗಳಿಗೆ ಪಥ ತೋರಿಸಲು ಬಂದರು ಇಲಾಖೆ ಅಳವಡಿಸಿದ್ದ ಬೋಯ್ (ತೇಲುವ ಯಂತ್ರ) ಅಲೆಗಳ ಅಬ್ಬರಕ್ಕೆ ಟ್ಯಾಗೋರ್ ಕಡಲತೀರಕ್ಕೆ ಬಂದು ನಿಂತಿದೆ.

ಉಳಿದಂತೆ, ಹೊನ್ನಾವರದ ಮುಗ್ವಾ ಬಳಿ ರಾಷ್ಟ್ರೀಯ ಹೆದ್ದಾರಿ–69ರ ಪಕ್ಕದಲ್ಲಿ ಸಣ್ಣ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿದೆ. ಭಟ್ಕಳ, ಕುಮಟಾದಲ್ಲೂ ರಭಸದ ಮಳೆಯಾಗಿದೆ.

ಪ್ರಕರಣ ಹಿಂತೆಗೆತ ಆದೇಶ ರದ್ದು

ಒಂದನೇ ಪುಟದಿಂದ...

ಆದರೆ, ಸರ್ಕಾರ ಈ ಪ್ರಕರಣದಲ್ಲಿ ಇದನ್ನು ಪಾಲನೆ ಮಾಡಿಲ್ಲ. ಅಂತೆಯೇ, ಸಿಆರ್‌ಪಿಸಿ ಅಡಿಯಲ್ಲಿ ಆದೇಶ ಹೊರಡಿಸುವಾಗ ಅದಾಗಲೇ ಈ ಕಾಯ್ದೆ ರದ್ದುಗೊಂಡಿತ್ತು' ಎಂಬ ಪ್ರತಿಪಾದನೆಯನ್ನು ನ್ಯಾಯಪೀಠ ಮಾನ್ಯ ಮಾಡಿದೆ.

'ಪ್ರಕರಣಗಳನ್ನು ಹಿಂಪಡೆಯಲು ಅಂಜುಮಾನ್ ಇ-ಇಸ್ಲಾಂ ಸಂಘಟನೆ ಮತ್ತು ಉಪ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ. ಈ ಮನವಿಗಳನ್ನು ಆಧರಿಸಿ ಸಚಿವರು ಮತ್ತು ಅಧಿಕಾರಿಗಳು ಭಾಗವಹಿಸಿದ್ದ ಸಂಪುಟ ಸಭೆಯಲ್ಲಿ ಒಟ್ಟು 43 ಪ್ರಕರಣಗಳನ್ನು ಹಿಂಪಡೆಯಲು ನಿರ್ಧರಿಸಲಾಗಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಆದ್ದರಿಂದ, ಇದು ರಾಜಕೀಯವಾಗಿ ತೆಗೆದುಕೊಂಡ ನಿರ್ಧಾರ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ' ಎಂದು ನ್ಯಾಯಪೀಠ ಉಲ್ಲೇಖಿಸಿದೆ.

'ಸಿಆರ್‌ಪಿಸಿ ಕಲಂ 321ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ಹಿಂತೆಗೆದುಕೊಳ್ಳುವುದು ಕೇವಲ ಪಬ್ಲಿಕ್ ಪ್ರಾಸಿಕ್ಯೂಟರ್ ವಿವೇಚನೆಗೆ ಅನುಗುಣವಾಗಿ ಅಲ್ಲ. ಬದಲಿಗೆ, ಅಪರಾಧದ ಗಂಭೀರತೆ, ಪ್ರಕರಣದ ಸಂಗತಿಗಳನ್ನೂ ಆಧರಿಸಿ ಮುಂದಡಿ ಇಡಬೇಕಾಗುತ್ತದೆ. ಸರ್ಕಾರ ಇಂತಹ ವಿಚಾರದಲ್ಲಿ ಕಟ್ಟಪ್ಪಣೆ ಹೊರಡಿಸಲು ಸಾಧ್ಯವಿಲ್ಲ. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪ್ರಾಸಿಕ್ಯೂಟರ್ ಸ್ವಾತಂತ್ರ್ಯ ಮತ್ತು ಅವರ ವಿವೇಚನಾಯುಕ್ತ ನಿರ್ಧಾರಗಳ ಮೇಲೆ ಒತ್ತಡ ಹೇರಲು ಆಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ರಾಜಕೀಯ ಅಂಶಗಳ ಆಧಾರದಲ್ಲಿ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಅಧಿಕಾರ ದುರುಪಯೋಗದ ಅತ್ಯಂತ ಕೆಟ್ಟ ಸ್ವರೂಪ ಮತ್ತು ಅದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಡೆ' ಎಂದು ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಪೀಠ, 'ಪ್ರಕರಣವನ್ನು ಹಿಂಪಡೆಯುವುದು ಪ್ರಾಸಿಕ್ಯೂಟರ್ ಮತ್ತು ಆಯಾ ನ್ಯಾಯಾಲಯದ ವಿವೇಚನೆಯ ವಿಷಯ. ಇದನ್ನು ಮೀರಿದರೆ ಅದು ಈ ನೆಲದ ಕಾನೂನಿನ ಉಲ್ಲಂಘನೆಯಾದಂತೆ' ಎಂದು ಹೇಳಿದೆ.

ಯಾವೆಲ್ಲಾ ಕಾಯ್ದೆಯಡಿಯ ಪ್ರಕರಣಗಳು?: 'ಕೋಮು ಪ್ರಚೋದನೆ ಉಂಟು ಮಾಡುವ ಛಾಯಾಚಿತ್ರವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ' ಎಂದು ಆರೋಪಿಸಿ ಮುಸ್ಲಿಂ ಸಮುದಾಯದ ನೂರಾರು ಜನರು 2022ರ ಏಪ್ರಿಲ್ 16ರಂದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಎದುರು ಗಲಭೆ ನಡೆಸಿದ್ದರು. ಪೊಲೀಸ್ ಠಾಣೆ, ಆಸ್ಪತ್ರೆ, ದೇವಸ್ಥಾನ, ಮನೆಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿತ್ತು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 158 ಮಂದಿ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 307, 143, 147, 148, 323, 324, 333, 353, 504, 427 ಮತ್ತು 149, ಸಾರ್ವಜನಿಕ ಆಸ್ತಿಗೆ ಹಾನಿ ತಡೆ ಕಾಯ್ದೆ–1984ರ ಕಲಂ 3 ಮತ್ತು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ–1967ರ 16(1), (ಬಿ) 18, 20ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು.

ಒಟ್ಟು 43 ಪ್ರತ್ಯೇಕ ಪ್ರಕರಣಗಳಲ್ಲಿನ ಆರೋಪಿಗಳು ಭಾರತೀಯ ದಂಡ ಸಂಹಿತೆ–1869, ಸಾರ್ವಜನಿಕ ಆಸ್ತಿ ಹಾನಿಗೆ ತಡೆ–1984, ಕಾನೂನು ಬಾಹಿರ ಚಟುವಟಿಕೆ ತಡೆ–1967, ವಿಪತ್ತು ನಿರ್ವಹಣೆ–2005 ಮತ್ತು ಧಾರ್ಮಿಕ ಸ್ಥಳಗಳ ದುರ್ಬಳಕೆ ತಡೆ ಕಾಯ್ದೆ–1988ರ ವಿವಿವಿಧ ಕಲಂಗಳಡಿಯ ಅಪರಾಧಗಳನ್ನು ಎದುರಿಸುತ್ತಿದ್ದಾರೆ.

ಯಾರೆಲ್ಲರ ವಿರುದ್ಧ ಪ್ರಕರಣ ವಾಪಸ್

ಒಂದನೇ ಪುಟದಿಂದ...

ತುಮಕೂರಿನ ಯುವ ಕಾಂಗ್ರೆಸ್ ಅಧ್ಯಕ್ಷ ಶಶಿ ಹುಲಿಕುಂಟೆ, ಕಲಬುರಗಿ ಜಿಲ್ಲೆಯ ದರ್ಗಾ ಹಜರತ್ ಮಲಿಕುಲ್ ಮಶಾಲ್‌ಕಹ್ ಮಖ್ದೂಮ್ ಲಾಡಿ ಅನ್ಸಾರಿ (ಸುನ್ನಿ) ಅಧ್ಯಕ್ಷರು ಮತ್ತು ಕಾರ್ಯದರ್ಶಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ, ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಎಸ್.ಅಂಗಡಿ, ಮೈಸೂರಿನ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್.ಭಾಸ್ಕರ್, ಭೀಮ್ ಆರ್ಮಿ ಜಿಲ್ಲಾ ಸಮಿತಿ ಅಧ್ಯಕ್ಷ ರಾಘು ಚಾಕ್ರಿ. ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಚಿಕ್ಕಬಳ್ಳಾಪುರದ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ, ಹುಬ್ಬಳ್ಳಿಯ ಅಂಜುಮನ್ ಇ-ಇಸ್ಲಾಂ ಅಡಿ ರಚಿಸಲಾಗಿದ್ದ ಪರಿಹಾರ ಸಮಿತಿಯ ಸದಸ್ಯರು, ರಾಯಚೂರಿನ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಎಸ್.ಪ್ರಸಾದ್, ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪರವಾದ ಚುಕ್ಕಿ ನಂಜುಂಡಸ್ವಾಮಿ ಮತ್ತು ಶಿವಮೊಗ್ಗ, ಹಾವೇರಿ, ಬಾಗಲಕೋಟೆ, ಉತ್ತರ ಕನ್ನಡದ ರೈತರ ವಿರುದ್ಧದ ಪ್ರಕರಣ ಹಿಂಪಡೆಯಲು ರಾಜ್ಯ ಸರ್ಕಾರ ಆದೇಶಿಸಿತ್ತು.

ಶಿಕ್ಷಕರ ವರ್ಗಾವಣೆಗೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ 2025–26ನೇ ಸಾಲಿನ ವರ್ಗಾವಣೆಗೆ ಶಾಲಾ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಮೊದಲ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ನಡೆಯಲಿದ್ದು, ನಂತರ ಶಿಕ್ಷಕರು, ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ವಿಶೇಷ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ನಡೆಯಲಿದೆ. ಶೈಕ್ಷಣಿಕ ತಾಲ್ಲೂಕಿನ ಒಳಗೆ ವಲಯ ವರ್ಗಾವಣೆ ಶೇ 4, ಶೈಕ್ಷಣಿಕ ಜಿಲ್ಲೆಯ ಒಳಗೆ ಕೋರಿಕೆ ವರ್ಗಾವಣೆ ಶೇ 7, ವಿಭಾಗದ ಒಳಗೆ ಕೋರಿಕೆ ವರ್ಗಾವಣೆ ಶೇ 2 ಹಾಗೂ ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಶೇ 2 ನಿಗದಿ ಮಾಡಲಾಗಿದೆ.

ಮೇ 29ರಿಂದಲೇ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಲಿದ್ದು, ಒಂದು ಸ್ಥಳದಲ್ಲಿ ಕನಿಷ್ಠ ಮೂರು ವರ್ಷ ಪೂರೈಸಿದವರು ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಬಹುದು. ಆದರೆ, ಐದು ವರ್ಷ ಪೂರೈಸಿದವರಿಗೆ ಆದ್ಯತೆ ನೀಡಲಾಗುತ್ತದೆ. ಜೂನ್ 6ರಂದು ಮಂಜೂರಾದ ಹುದ್ದೆಗಳ ವಿವರ ಪ್ರಕಟಿಸಲಾಗುತ್ತದೆ. ಜೂನ್ 19ರಂದು ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆಯ ಕರಡು ಪಟ್ಟಿ ಪ್ರಕಟಿಸಲಾಗುತ್ತದೆ. ನಂತರ ಜೂನ್ 21ರವರೆಗೆ ಘಟಕದ ಒಳಗೆ ಮತ್ತು ಹೊರಗೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದು. ಜುಲೈ 2ರಿಂದ 4ರವರೆಗೆ ಹೆಚ್ಚುವರಿ ಶಿಕ್ಷಕರಿಗೆ ಕೌನ್ಸೆಲಿಂಗ್ ನಡೆಯಲಿದೆ.

ಜಿಲ್ಲಾ ಹಂತದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಜುಲೈ 18ರಿಂದ 21ರವರೆಗೆ, ಪ್ರೌಢಶಾಲಾ ಶಿಕ್ಷಕರ ಕೌನ್ಸೆಲಿಂಗ್ ಜುಲೈ 22ರಿಂದ 23ರವರೆಗೆ, ಪರಸ್ಪರ ವರ್ಗಾವಣೆಯ ಕೌನ್ಸೆಲಿಂಗ್ ಜುಲೈ 24ರಂದು, ವಿಭಾಗೀಯ ವರ್ಗಾವಣೆ ಕೌನ್ಸೆಲಿಂಗ್ ಜುಲೈ 29ರಿಂದ ಆಗಸ್ಟ್ 7ರವರೆಗೆ, ಅಂತರ್ ವಿಭಾಗೀಯ ವರ್ಗಾವಣೆ ಕೌನ್ಸೆಲಿಂಗ್ ಆ.11ರಿಂದ 22ರವರೆಗೆ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ಹೇಳಿದ್ದಾರೆ.

ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಎಚ್ಚರಿಕೆ

'ಕಮಲ್ ಕ್ಷಮೆ ಕೇಳದಿದ್ದರೆ 'ಥಗ್ ಲೈಫ್'ಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆ ಹುಟ್ಟಿದ್ದು ತಮಿಳಿನಿಂದ ಎಂಬ ಹೇಳಿಕೆ ನೀಡಿರುವ ಕಮಲ್ ಹಾಸನ್ ಕನ್ನಡಿಗರಲ್ಲಿ ಕ್ಷಮೆ ಕೇಳಬೇಕು. ಇಲ್ಲವಾದಲ್ಲಿ ಕರ್ನಾಟಕದಲ್ಲಿ ಅವರ 'ಥಗ್ ಲೈಫ್' ಚಿತ್ರ ಬಿಡುಗಡೆಗೆ ಅವಕಾಶವಿಲ್ಲ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದರು.



ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಥಗ್ ಲೈಫ್' ಚಿತ್ರದ ಕರ್ನಾಟಕದ ವಿತರಕ ವೆಂಕಟೇಶ್ ಅವರನ್ನು ವಾಣಿಜ್ಯ ಮಂಡಳಿಗೆ ಕರೆಸಿ ಮಾತುಕತೆ ನಡೆಸಿದ್ದೇವೆ. ಕಮಲ್ ಹಾಸನ್ ಅವರನ್ನು ಸಂಪರ್ಕಿಸುವ ಪ್ರಯತ್ನ ಮಾಡಲಾಗುತ್ತಿದೆ. ಕಮಲ್ ಅವರಿಂದ ಕ್ಷಮೆ ಕೇಳಿಸುತ್ತೇವೆ. ಕ್ಷಮೆ ಯಾಚಿಸದಿದ್ದರೆ ರಾಜ್ಯದಲ್ಲಿ ಅವರ ಚಿತ್ರ ಬಿಡುಗಡೆಗೆ ಅವಕಾಶ ನೀಡುವುದಿಲ್ಲ' ಎಂದು ತಿಳಿಸಿದರು.

ಮಣಿರತ್ನಂ ನಿರ್ದೇಶನದಲ್ಲಿ ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಸಿನಿಮಾ ಜೂನ್ 5ರಂದು ತೆರೆ ಕಾಣುತ್ತಿದೆ.

ಚೆನ್ನೈನಲ್ಲಿ ಶನಿವಾರ ನಡೆದ 'ಥಗ್ ಲೈಫ್' ಚಿತ್ರದ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಕಮಲ್ ಹಾಸನ್ ಕನ್ನಡದ ಕುರಿತಾಗಿ ಹೇಳಿಕೆ ನೀಡಿದ್ದರು. ಅದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ, ಕಮಲ್ ವಿರುದ್ಧ ರಾಜ್ಯದಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿತ್ತು.

'ಹಿಂದಿ ಹೇರಿಕೆ ವಿರುದ್ಧ ಒಗ್ಗೂಡಬೇಕಿದೆ'



ಕನ್ನಡ, ತಮಿಳು, ತೆಲುಗು ಹಾಗೂ ಮಲಯಾಳ ಭಾಷೆಗಳು ದ್ರಾವಿಡ ಭಾಷೆಯಡಿ ಬರುತ್ತವೆ. ಇವುಗಳಲ್ಲಿ ಸಾಮ್ಯತೆ ಇರಬಹುದೇ ವಿನಾ ಯಾವ ಭಾಷೆಯೂ ಮತ್ತೊಂದು ಭಾಷೆಗಿಂತ ಶ್ರೇಷ್ಠವಲ್ಲ ಎಂದು ನಟಿ ರಮ್ಯಾ ಇನ್‌ಸ್ಟಾಗ್ರಾಂನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಸಂಸ್ಕೃತವು ಎಲ್ಲಾ ಭಾಷೆಗಳ ತಾಯಿ ಎಂದುಕೊಂಡಿದ್ದರೆ ಅದೂ ತಪ್ಪು ತಿಳಿವಳಿಕೆ. ಸಂಸ್ಕೃತವು ಇಂಡೋ–ಆರ್ಯನ್‌ಗೆ ಸೇರಿದ್ದಾಗಿದ್ದು, ನಾವು ದ್ರಾವಿಡರು. ಇಂಡೋ–ಆರ್ಯನ್ ವಲಸೆಗಿಂತಲೂ ಮೊದಲೇ ನಾವಿಲ್ಲಿ ಇದ್ದೆವು. ಕಮಲ್ ಹಾಸನ್ ಅವರು ಒಂದು ಬೀಸು ಹೇಳಿಕೆಯನ್ನು ನೀಡಿದ್ದಾರೆ. ಆ ಮಾತ್ರಕ್ಕೆ ಅವರ ಸಿನಿಮಾವನ್ನೇ ನಿಷೇಧಿಸಲು ಮುಂದಾಗಿರುವುದು ತುಸು ಅತಿರೇಕವಲ್ಲವೇ? ಪ್ರಸ್ತುತ ನಾವು ಹಿಂದಿ ಹೇರಿಕೆ ವಿರುದ್ಧ ಒಗ್ಗೂಡಬೇಕಿದೆ. ಇದಕ್ಕಾಗಿ ಮೊದಲು ನಾವು ಪರಸ್ಪರ ಗೌರವ ಕೊಡಬೇಕಾಗಿದೆ ಎಂದಿದ್ದಾರೆ.



ಕನ್ನಡಕ್ಕೆ ಪ್ರಾಚೀನ ಇತಿಹಾಸವಿದೆ. ಹಿರಿಮೆ, ಶ್ರೀಮಂತಿಕೆ ಹೊಂದಿದೆ. ಕಮಲ್ ಆ ಹೇಳಿಕೆ ಕೊಡುವ ಮುಂಚೆ ಯೋಚಿಸಬೇಕಿತ್ತು. ಅವರ ಹೇಳಿಕೆ ತಪ್ಪು. ಕಮಲ್ ಕನ್ನಡಿಗರಲ್ಲಿ ಕ್ಷಮೆ ಯಾಚಿಸಿದರೆ ಒಳ್ಳೆಯದು

ಸುಮಲತಾ, ನಟಿ, ಮಾಜಿ ಸಂಸದೆ

ಸೇನಾ ಮುಖ್ಯಸ್ಥರಿಗೆ ದೀಕ್ಷೆ ನೀಡಿದ ರಾಮಭದ್ರಾಚಾರ್ಯ ಸ್ವಾಮೀಜಿ

‘ಗುರುದಕ್ಷಿಣೆಯಾಗಿ ಪಿಒಕೆ ಕೊಡಿ’

ಪ್ರಜಾವಾಣಿ ವಾರ್ತೆ



ಲಖನೌ: ಶಿಕ್ಷಣ ನೀಡಿದ ಗುರು ದ್ರೋಣಾಚಾರ್ಯರಿಗೆ ಏಕಲವ್ಯ ತನ್ನ ಬಲಗೈ ಹೆಬ್ಬೆರಳನ್ನು ‘ಗುರುದಕ್ಷಿಣೆ’ಯಾಗಿ ನೀಡಿದ ಪ್ರಸಂಗ ಮಹಾಭಾರತದಲ್ಲಿ ಬರುತ್ತದೆ. ಇದೀಗ, ಪ್ರಸಿದ್ಧ ಹಿಂದೂ ದಾರ್ಶನಿಕ ಮತ್ತು ಪದ್ಮವಿಭೂಷಣ ಪುರಸ್ಕೃತ ರಾಮಭದ್ರಾಚಾರ್ಯ ಸ್ವಾಮೀಜಿ ಅವರು, ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರಿಗೆ ದೀಕ್ಷೆ ನೀಡಿ ‘ಗುರುದಕ್ಷಿಣೆ’ಯಾಗಿ ಪಾಕ್ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ಕೇಳಿದ್ದಾರೆ.

‘ಜನರಲ್ ಉಪೇಂದ್ರ ದ್ವಿವೇದಿ ಮತ್ತು ಅವರ ಪತ್ನಿ ಸುನಿತಾ ದ್ವಿವೇದಿ ಅವರು ಬುಧವಾರ ಆಶ್ರಮಕ್ಕೆ ಭೇಟಿ ನೀಡಿದ್ದರು. ಈ ವೇಳೆ ಉಪೇಂದ್ರ ಅವರಿಗೆ ಅತ್ಯಂತ ಶಕ್ತಿಶಾಲಿ ಮತ್ತು ಪವಿತ್ರವಾದ ರಾಮಮಂತ್ರದ ದೀಕ್ಷೆ ನೀಡಲಾಯಿತು. ಈ ಮಂತ್ರವನ್ನು ಮಾತೆ ಸೀತೆಯಿಂದ ಪಡೆದಿದ್ದ ಹನುಮಾನ್, ಲಂಕಾ ಯುದ್ಧವನ್ನು ಜಯಸಿದ್ದನು’ ಎಂದು ಸ್ವಾಮೀಜಿ ತಿಳಿಸಿದರು.

ದೀಕ್ಷೆಯು ಹಿಂದೂ ಧರ್ಮದ ಒಂದು ಧಾರ್ಮಿಕ ಪ್ರಕ್ರಿಯೆ. ದೀಕ್ಷೆ ಕೊಡುವವರನ್ನು ಗುರುವಾಗಿಯೂ, ತೆಗೆದುಕೊಳ್ಳುವವರನ್ನು ಶಿಷ್ಯರನ್ನಾಗಿಯೂ ಪರಸ್ಪರರು ಸ್ವೀಕರಿಸುತ್ತಾರೆ.

‘ದೀಕ್ಷೆ ಪಡೆದ ದ್ವಿವೇದಿ ಅವರು ಗುರುದಕ್ಷಿಣೆಯಾಗಿ ಏನನ್ನು ನೀಡಬೇಕು ಎಂದು ಕೇಳಿದರು. ಆಗ ನಾನು, ಆಭರಣ ಅಥವಾ ಬಟ್ಟೆ ಬೇಡ. ಪಿಒಕೆಯನ್ನು ಗುರುದಕ್ಷಿಣೆಯಾಗಿ ಪಡೆಯಲು ಬಯಸುತ್ತೇನೆ ಎಂದು ತಿಳಿಸಿದೆ’ ಎಂದು ಹೇಳಿದರು.

‘ಜನರಲ್ ದ್ವಿವೇದಿ ಅವರಿಗೆ ದೀಕ್ಷೆ ನೀಡಿದ್ದಕ್ಕೆ ಹೆಮ್ಮೆಯಿದೆ. ದೇಶಕ್ಕೆ ಶಸ್ತ್ರದಷ್ಟೇ ಶಾಸ್ತ್ರ ಮತ್ತು ಸದಾಚಾರವೂ ಮುಖ್ಯ’ ಎಂದು ಅವರು ಹೇಳಿದರು. ದೀಕ್ಷೆ ಪಡೆದ ದ್ವಿವೇದಿ ಅವರು ಆಶ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಎನ್.ವಿ. ಅಂಜಾರಿಯಾ ಇಂದು ಪ್ರಮಾಣ

ಪ್ರಜಾವಾಣಿ ವಾರ್ತೆ


ನವದೆಹಲಿ: ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ.ಅಂಜಾರಿಯಾ (ಕರ್ನಾಟಕ), ವಿಜಯ್ ಬಿಷ್ಣೋಯ್ (ಗುವಾಹಟಿ) ಹಾಗೂ ಎ.ಎಸ್. ಚಂದೂರ್ಕರ್ (ಬಾಂಬೆ) ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಈ ಮೂವರು ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಕೊಲಿಜಿಯಂ ಸೋಮವಾರ ಶಿಫಾರಸು ಮಾಡಿತ್ತು. ಇದಕ್ಕೆ ಕೇಂದ್ರ ಸರ್ಕಾರ ಗುರುವಾರ ಅನುಮೋದನೆ ನೀಡಿದೆ. ಈ ಮೂಲಕ, ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆಯಾಗಿದೆ.



ಅಂಜಾರಿಯಾ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,752
ಇಂದಿನ ಅಂತ್ಯ	24,833
▲	81
ದಿನದ ಗರಿಷ್ಠ	24,892

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196.50
ಆರ್‌ಎಸ್‌ಎಸ್-5	₹192
ಗುಡ್ ಲಾಟ್	₹182

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1250 (1270)
ಸೂರ್ಯಕಾಂತಿ (ರಿಫೈನ್ಡ್)	₹1380 (1380)
ಪಾಮೋಲಿನ್	₹1190 (1195)

ಬ್ಯಾಂಕಿಂಗ್ ವಂಚನೆ ಮೊತ್ತ 3 ಪಟ್ಟು ಏರಿಕೆ

ಮುಂಬೈ (ಪಿಟಿಐ): 2024-25ನೇ ಆರ್ಥಿಕ ವರ್ಷದಲ್ಲಿ ದೇಶದ ಬ್ಯಾಂಕಿಂಗ್ ವಲಯದಲ್ಲಿ ನಡೆದಿರುವ ವಂಚನೆ ಮೊತ್ತವು ಮೂರು ಪಟ್ಟು ಹೆಚ್ಚಳವಾಗಿದೆ. ಇದರಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಪಾಲು ಹೆಚ್ಚಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ವಾರ್ಷಿಕ ವರದಿಯು ಗುರುವಾರ ತಿಳಿಸಿದೆ.



2023-24ರಲ್ಲಿ ಒಟ್ಟು 36,060 ವಂಚನೆ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳಿಗೆ ಸಂಬಂಧಿಸಿದ ಮೊತ್ತ ₹12,230 ಕೋಟಿ ಆಗಿದೆ. 2024-25ರಲ್ಲಿ 23,953 ಪ್ರಕರಣಗಳು ವರದಿಯಾಗಿದ್ದು, ವಂಚನೆ ಮೊತ್ತ ₹36,014 ಕೋಟಿ ಆಗಿದೆ ಎಂದು ವಿವರಿಸಿದೆ.

ಸಾಲ ಮತ್ತು ಡಿಜಿಟಲ್ ಪಾವತಿ ಮೂಲಕ ನಡೆದಿರುವ ವಂಚನೆ ಹೆಚ್ಚಿದೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ ಭಾರತವು ಅತ್ಯಂತ ವೇಗವಾಗಿ ಬೆಳೆಯುವ ಆರ್ಥಿಕತೆಯಾಗಿ ಉಳಿಯಲಿದೆ. ಹಣಕಾಸು ವಲಯದ ಸದೃಢತೆಯು ಇದಕ್ಕೆ ನೆರವಾಗಲಿದೆ

ಭಾರತೀಯ ರಿಸರ್ವ್ ಬ್ಯಾಂಕ್‌ನ 2024-25ನೇ ವಾರ್ಷಿಕ ವರದಿ

ಒಟ್ಟಾರೆ ವಂಚನೆ ಪ್ರಕರಣ ಮತ್ತು ಮೊತ್ತದ ಪೈಕಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಪಾಲು ಶೇ 71ರಷ್ಟಿದೆ. ಸಾಲದ ವಂಚನೆ ಪ್ರಕರಣಗಳೇ ಇದರಲ್ಲಿ ಹೆಚ್ಚಿವೆ. ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಕಾರ್ಡ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ನಡೆದಿರುವ ಪಾವತಿಯಲ್ಲಿ ಹೆಚ್ಚು ವಂಚನೆ ನಡೆದಿದೆ ಎಂದು ಹೇಳಿದೆ.

2023ರ ಮಾರ್ಚ್ 27ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಅನುಸಾರ ವಂಚನೆ ಪ್ರಕರಣಗಳ ವರ್ಗೀಕರಣವನ್ನು ಪುನರ್ ಪರಿಶೀಲಿಸಲಾಗಿದೆ. ಹಾಗಾಗಿ, 2024-25ರಲ್ಲಿ ವಂಚನೆ ಮೊತ್ತದಲ್ಲಿ ಏರಿಕೆಯಾಗಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

29-05-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1188 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹95,200 (95,200)
ಬೆಳ್ಳಿ ಕೆ.ಜಿ ₹98,000 (97,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹244-561
ದ್ವಿತಳಿ (ಬಿ.ವಿ)	₹356-722

ಕೆ.ಜಿ ಧಾರಣೆ ₹410ಕ್ಕೆ ಇಳಿಕೆ • ದಾಸ್ತಾನಿಟ್ಟುಕೊಂಡಿರುವ ರೈತರಿಗೆ ಆತಂಕ

ರೊಬಸ್ಟಾ ಕಾಫಿ ದರ ಕುಸಿತ

• ರವಿ ಕೆಳಂಗಡಿ

ಕಳಸ: ಮೂರು ತಿಂಗಳ ಹಿಂದೆ ಕೆ.ಜಿ.ಗೆ ₹500 ತಲುಪಿದ್ದ ರೊಬಸ್ಟಾ ಕಾಫಿ ಬೀಜದ ದರವು ಈಗ ಕೆ.ಜಿ.ಗೆ ₹410ಕ್ಕೆ ಕುಸಿದಿದೆ.

ಎರಡು ವಾರಗಳಿಂದ ರೊಬಸ್ಟಾ ಕಾಫಿ ಬೆಲೆಯು ನಿರಂತರವಾಗಿ ಕುಸಿಯುತ್ತಿದೆ. ಲಂಡನ್ನಾ ಮಾರುಕಟ್ಟೆಯಲ್ಲಿ ಗುರುವಾರ ಟನ್‌ವೊಂದಕ್ಕೆ 4,540 ಡಾಲರ್ ದೊರೆತಿತ್ತು. ಮೂರು ತಿಂಗಳ ಹಿಂದೆ ದರವು 5,800 ಡಾಲರ್‌ವರೆಗೆ ತಲುಪಿತ್ತು.

ರೊಬಸ್ಟಾ ಕಾಫಿಯ ಗುಣಮಟ್ಟ ಆಧಾರದ ಮೇಲೆ ಬೆಳೆಗಾರರು ಮೂರು ತಿಂಗಳ ಹಿಂದೆ 50 ಕೆ.ಜಿ ಚೀಲವೊಂದಕ್ಕೆ ₹14 ಸಾವಿರದವರೆಗೂ ಧಾರಣೆ ಪಡೆದಿದ್ದರು. ಈಗ ಅದೇ ಕಾಫಿಗೆ ಚೀಲವೊಂದಕ್ಕೆ ₹10 ಸಾವಿರದಿಂದ ₹11 ಸಾವಿರ ಸಿಗುತ್ತಿದೆ. ಖರೀದಿಸುವ ಮುನ್ನ ವ್ಯಾಪಾರಿಗಳು ಹಿಂದೆ ಮುಂದೆ ನೋಡುತ್ತಿದ್ದಾರೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಸಣ್ಣ ಬೆಳೆಗಾರರು ಕಾಫಿಯನ್ನು ಈಗಾಗಲೇ ಮಾರಾಟ ಮಾಡಿದ್ದಾರೆ. ದಾಸ್ತಾನು ಇಟ್ಟಿರುವ ಬೆಳೆಗಾರರಿಗೆ ದರ ಕುಸಿತ ಭ್ರಮನಿರಸನ ತಂದಿದೆ. ಏರಿದ್ದ ದರವನ್ನು ನಂಬಿಕೊಂಡು ತೋಟಕ್ಕೆ ವಿಪರೀತ ಖರ್ಚು ಮಾಡುವ ಬೆಳೆಗಾರರಿಗೂ ಈಗಿನ ದರ ಇಳಿಕೆಯು



ರೊಬಸ್ಟಾ ಕಾಫಿ ಬೇಳೆ

ಆಘಾತ ತಂದಿದೆ. ಮುಂದಿನ ಎರಡು ವರ್ಷ ಬೆಲೆ ಇಳಿಯಲಾರದು ಎಂಬ ಪರಿಣತರ ಹೇಳಿಕೆ ಸುಳ್ಳಾಗಿದೆ ಎನ್ನುತ್ತಾರೆ ಅವರು.

ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಅರೇಬಿಕಾ ಕಾಫಿ ದರ 7 ವಾರದ ಕನಿಷ್ಠ ಮಟ್ಟಕ್ಕೆ ಇಳಿದಿದ್ದರೆ, ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ 6 ತಿಂಗಳಲ್ಲಿ ಈಗ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ವಿಯೆಟ್ನಾಂ ದೇಶದಲ್ಲಿ ಮುಂದಿನ ಹಂಗಾಮಿಗೆ ಶೇ 7ರಷ್ಟು ರೊಬಸ್ಟಾ ಕಾಫಿ ಮತ್ತು ಬ್ರೆಜಿಲ್ ದೇಶದಲ್ಲಿ ಅರೇಬಿಕಾ ಕಾಫಿ ಅಲ್ಪಪ್ರಮಾಣದಲ್ಲಿ ಹೆಚ್ಚಾಗಬಹುದು ಎಂಬ ನಿರೀಕ್ಷೆಯಿಂದ ದರ ಇಳಿಕೆ ಶುರು ಆಗಿದೆ ಎಂಬುದು ವ್ಯಾಪಾರಿಗಳ ಹೇಳಿಕೆ.

‘ಈ ವರ್ಷ ಕಾಫಿ ದರ ಎಲ್ಲ ನಿರೀಕ್ಷೆ ಮೀರಿ ಏರಿಕೆ ಕಂಡಿತ್ತು. ಈಗಿನ ಅಲ್ಪ ಇಳಿಕೆ ಮಾರುಕಟ್ಟೆಯಲ್ಲಿನ ಸಹಜ ನಡವಳಿಕೆ. ಈಗಿನ ಧಾರಣೆ ಸ್ಥಿರವಾಗಿ, ಮುಂದಿನ ಎರಡು ವರ್ಷ ಉಳಿದರೆ ಬೆಳೆಗಾರರಿಗೆ ಅನುಕೂಲ ಆಗಲಿದೆ’ ಎಂದು ಕಾಫಿ ಮಾರುಕಟ್ಟೆ ತಜ್ಞ ಮನೋಹರ್ ಹೇಳುತ್ತಾರೆ.

ವಿಯೆಟ್ನಾಂ, ಇಂಡೊನೇಷ್ಯಾ ಮತ್ತು ಬ್ರೆಜಿಲ್ ದೇಶಗಳಿಂದ ರೊಬಸ್ಟಾ ಕಾಫಿ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಹೆಚ್ಚಾಗಿ ಬರುತ್ತಿದೆ. ಬ್ರೆಜಿಲ್‌ನಲ್ಲಿಯೂ ಧಾರಣೆ ಕುಸಿದಿದ್ದು, ಇದು ಕೂಡ ಬೆಲೆ ಇಳಿಕೆಗೆ ಪ್ರಮುಖ ಕಾರಣವಾಗಿದೆ.

ಕಾಫಿ ಧಾರಣೆಯು ಬಹುವರ್ಷಗಳ ಮಾರುಕಟ್ಟೆ ಆಧರಿಸಿದ್ದು, ಬೇಗ ಕುಸಿಯಲಾರದು. ಬೇಡಿಕೆ, ಪೂರೈಕೆ ಆಧಾರದ ಮೇಲೆ ಸ್ವಲ್ಪಕಾಲದ ನಂತರ ದರ ಸ್ವಲ್ಪ ಮಟ್ಟಿಗೆ ಏರಿಕೆಯಾಗಬಹುದು ಎಂಬ ಆಶಾವಾದವೂ ಬೆಳೆಗಾರರಲ್ಲಿ ಇದೆ.

₹21 ಸಾವಿರ ದಾಟಿದ ಕೊಬ್ಬರಿ ಬೆಲೆ

ತುಮಕೂರು: ಸತತ ಎರಡನೇ ವಾರವೂ ಕೊಬ್ಬರಿ ಬೆಲೆ ಏರಿಕೆಯಾಗಿದೆ. ಕ್ವಿಂಟಲ್ ದರವು ₹21 ಸಾವಿರದ ಗಡಿ ದಾಟಿದ್ದು, ₹22 ಸಾವಿರದ ಸಮೀಪದಲ್ಲಿದೆ.

ಮೇ 26ರಂದು ₹20,900ಕ್ಕೆ ಮಾರಾಟವಾಗಿದ್ದ ಕೊಬ್ಬರಿ ಸಾರ್ವಕಾಲಿಕ ದಾಖಲೆ ಬರೆದಿತ್ತು. ಎರಡು ದಿನಗಳ ಅಂತರದಲ್ಲಿ ಕ್ವಿಂಟಲ್‌ಗೆ ₹900 ಹೆಚ್ಚಳವಾಗಿದೆ.



ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ಕ್ವಿಂಟಲ್‌ಗೆ ಗರಿಷ್ಠ ₹21,809, ಕನಿಷ್ಠ ₹20 ಸಾವಿರ, ಮಾದರಿ ದರ ₹20,500 ಇತ್ತು. 2,613 ಕ್ವಿಂಟಲ್ (6,078 ಚೀಲ) ಆವಕವಾಗಿತ್ತು.

ಮಾರುಕಟ್ಟೆಯಲ್ಲಿ ಕೊಬ್ಬರಿ ಆವಕ ಕಡಿಮೆಯಾಗಿದ್ದು ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. 26ರಂದು 3,056 ಕ್ವಿಂಟಲ್ ಕೊಬ್ಬರಿ ಮಾರುಕಟ್ಟೆಗೆ ಬಂದಿತ್ತು, ಗುರುವಾರ 2,613 ಕ್ವಿಂಟಲ್ ಆವಕವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಗೋಧಿ ದಾಸ್ತಾನು ಮಿತಿ ಮುಂದುವರಿಕೆ: ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗೋಧಿ ದಾಸ್ತಾನು ಮಿತಿಗೆ ಸಂಬಂಧಿಸಿದಂತೆ ಹೊರಡಿಸಿದ್ದ ಆದೇಶವನ್ನು 2026ರ ಮಾರ್ಚ್ ಅಂತ್ಯದವರೆಗೆ ವಿಸ್ತರಿಸಿದೆ.

ಆಹಾರ ಭದ್ರತೆ ದೃಷ್ಟಿಯಿಂದ ಈ ಕ್ರಮಕೈಗೊಳ್ಳಲಾಗಿದೆ. ವರ್ತಕರು, ಸಗಟುದಾರರು ಮತ್ತು ಚಿಲ್ಲರೆ ವ್ಯಾಪಾರಿಗಳು ಈ ಆದೇಶ ಪಾಲಿಸಬೇಕಿದೆ ಎಂದು ಹೇಳಿದೆ.

ಹೊಸ ನಿಯಮಾವಳಿ ಅನ್ವಯ ವರ್ತಕರು ಮತ್ತು ಸಗಟುದಾರರು 3 ಸಾವಿರ ಟನ್, ಚಿಲ್ಲರೆ ಮತ್ತು ದೊಡ್ಡಮಟ್ಟದ ಚಿಲ್ಲರೆ ಮಾರಾಟಗಾರರು ಪ್ರತಿ ಮಳಿಗೆಗೆ 10 ಟನ್‌ನಷ್ಟು ದಾಸ್ತಾನಿಟ್ಟುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಂಸ್ಕರಣೆ ಮಾಡುವವರು ಪ್ರತಿ ತಿಂಗಳ ಸಂಸ್ಕರಣಾ ಸಾಮರ್ಥ್ಯದ ಪೈಕಿ ಶೇ 70ರಷ್ಟು ಗೋಧಿಯನ್ನಷ್ಟೇ ದಾಸ್ತಾನು ಮಾಡಿಟ್ಟುಕೊಳ್ಳಲು ಅವಕಾಶವಿದೆ.



ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪೋರ್ಟಲ್‌ನಲ್ಲಿ ಪ್ರತಿ ದಿನದ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕಿದೆ ಎಂದು ಸೂಚಿಸಿದೆ.

ಷೇರು ಸೂಚ್ಯಂಕಗಳು ಚೇತರಿಕೆ

ಮುಂಬೈ (ಪಿಟಿಐ): ಸತತ ಎರಡು ವಹಿವಾಟುಗಳಲ್ಲಿ ಇಳಿಕೆ ಕಂಡಿದ್ದ ದೇಶೀಯ ಷೇರುಪೇಟೆಯು ಗುರುವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಜಾರಿಗೆ ತಂದಿದ್ದ ವಿವಾದಾತ್ಮಕ ವಿಮೋಚನಾ ದಿನದ ಸುಂಕ ನೀತಿಗೆ ಅಲ್ಲಿನ ಅಂತರ ರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ. ಜಾಗತಿಕ ಷೇರುಪೇಟೆಗಳು ಏರಿಕೆ ಕಂಡಿವೆ. ಹಾಗಾಗಿ, ದೇಶೀಯ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 320 ಅಂಶ ಏರಿಕೆ ಕಂಡಿದ್ದು, 81,633 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 81 ಅಂಶ ಹೆಚ್ಚಳ ಕಂಡು, 24,833 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,662 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಶಿವಮೊಗ್ಗ		ಶಿರಸಿ	
ಚಾಲಿ	36600-43598	ಬೆಟ್ಟೆ	50509-58899	ಬೆಟ್ಟೆ	29199-41999
ಚಿಪ್ಪು	22559-35600	ಗೊರಬಲು	16169-32158	ಬಿಳಿಗೋಟು	14699-33699
ಕೋಕ	8100-24170	ರಾಶಿ	48056-58599	ಚಾಲಿ	35999-43639
ಹೊಸಚಾಲಿ	34600-44299	ಸರಕು	55119-96996	ಕೆಂಪುಗೋಟು	13999-25166
ಪುತ್ತೂರು		ಸಿದ್ದಾಪುರ		ರಾಶಿ	42099-49299
ಕೋಕ	20000-31500	ಬಿಳಿಗೋಟು	25099-32899	ಯಲ್ಲಾಪುರ	
ಹೊಸತು	26000-49500	ಚಾಲಿ	35119-42600	ಬಿಳಿಗೋಟು	15600-35299
ಸಾಗರ		ಕೋಕ	16669-27309	ಚಾಲಿ	35369-43444
ಬಿಳಿಗೋಟು	8129-26696	ಹಳೆಚಾಲಿ	36099-39099	ಕೋಕ	8600-18099
ಚಾಲಿ	15899-39299	ಕೆಂಪುಗೋಟು	22109-27909	ಕೆಂಪುಗೋಟು	16899-26799
ಕೋಕ	8129-21399	ರಾಶಿ	41899-46099	ರಾಶಿ	42310-56900
ಕೆಂಪುಗೋಟು	16899-28099	ತಟ್ಟಿಬೆಟ್ಟೆ	28099-41199	ತಟ್ಟಿಬೆಟ್ಟೆ	28969-37269
ರಾಶಿ	31000-58599				
ಸಿಪ್ಪೆಗೋಟು	6099-18189				

ಇಂಡಸ್ ಇಂಡ್ ಬ್ಯಾಂಕ್‌ನ ಲೆಕ್ಕಪತ್ರ ಪರಿಶೀಲನೆ: ಐಸಿಎಐ

ನವದೆಹಲಿ (ಪಿಟಿಐ): ಖಾಸಗಿ ವಲಯದ ಇಂಡಸ್ ಇಂಡ್ ಬ್ಯಾಂಕ್‌ನಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯು (ಐಸಿಎಐ) ಪರಿಶೀಲನೆ ನಡೆಸಲು ಮುಂದಾಗಿದೆ.

2023-24 ಮತ್ತು 2024-25ನೇ ಆರ್ಥಿಕ ವರ್ಷದ ಬ್ಯಾಂಕ್‌ನ ಲೆಕ್ಕಪತ್ರಗಳನ್ನು ಸಂಸ್ಥೆಯ ಹಣಕಾಸು ವರದಿ ಪರಿಶೀಲನಾ ಮಂಡಳಿಯು ಪರಿಶೀಲನೆ ನಡೆಸಲಿದೆ ಎಂದು ಐಸಿಎಐ ಅಧ್ಯಕ್ಷ ಚರಣ್‌ಜೋತ್ ಸಿಂಗ್ ನಂದಾ ಅವರು, ಪಿಟಿಐಗೆ ತಿಳಿಸಿದ್ದಾರೆ.

ಬ್ಯಾಂಕ್‌ನ ಲೆಕ್ಕಪತ್ರದಲ್ಲಿ ₹1,979 ಕೋಟಿ ವ್ಯತ್ಯಾಸ ಕಂಡು ಬಂದಿದೆ.

ಶೇ 33ರಷ್ಟು ಬೆಲೆ ಏರಿಕೆಯೇ ಕಾರಣ: ಐಸಿಆರ್‌ಎ

ಚಿನ್ನಕ್ಕೆ ಬೇಡಿಕೆ ತಗ್ಗುವ ನಿರೀಕ್ಷೆ

ಮುಂಬೈ (ಪಿಟಿಐ): ಚಿನ್ನದ ಬೆಲೆಯಲ್ಲಿ ಶೇ 33ರಷ್ಟು ಏರಿಕೆಯಾಗಿದೆ. ಹಾಗಾಗಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಚಿನ್ನಾಭರಣಗಳ ಬೇಡಿಕೆಯು ಶೇ 9ರಿಂದ ಶೇ 10ರಷ್ಟು ತಗ್ಗುವ ನಿರೀಕ್ಷೆಯಿದೆ ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ವರದಿ ಗುರುವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದಲ್ಲೂ ಬೇಡಿಕೆ ಪ್ರಮಾಣವು ಶೇ 7ರಷ್ಟು ಕಡಿಮೆಯಾಗಿತ್ತು. ಆದರೆ, ಚಿನ್ನದ ಮೇಲಿನ ಹೂಡಿಕೆಯು ಏರಿಕೆಯಾಗುತ್ತಿದೆ ಎಂದು ಹೇಳಿದೆ.

2023-24 ಮತ್ತು 2024-25ನೇ ಆರ್ಥಿಕ ವರ್ಷದಲ್ಲಿ ಚಿನ್ನದ ಗಟ್ಟಿ ಮತ್ತು ನಾಣ್ಯಗಳಿಗೆ ಕ್ರಮವಾಗಿ ಶೇ 17 ಮತ್ತು ಶೇ 25ರಷ್ಟು ಬೇಡಿಕೆ ಹೆಚ್ಚಳವಾಗಿತ್ತು. ಜಾಗತಿಕ ಅನಿಶ್ಚಿತ ಸ್ಥಿತಿ ಮತ್ತು ವ್ಯಾಪಾರದ ಬಿಕ್ಕಟ್ಟಿನಿಂದಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದ ಖರೀದಿಗೆ ಮುಂದಾಗಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲೂ ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಬೇಡಿಕೆಯು ಶೇ 10ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆಯಿದೆ. ದೇಶೀಯಮಟ್ಟದಲ್ಲಿ ಚಿನ್ನಾಭರಣಗಳ ಬೇಡಿಕೆ ಮೌಲ್ಯ ಶೇ 12ರಿಂದ ಶೇ 14ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ವಿವರಿಸಿದೆ.

‘ಚಿನ್ನದ ದರ ಏರಿಕೆ ಹೊರತಾಗಿಯೂ ದೊಡ್ಡ ಮಾರಾಟಗಾರರು ಶೇ 16ರಷ್ಟು ವರಮಾನ ಗಳಿಸುವ ಅಂದಾಜಿದೆ’ ಎಂದು ಐಸಿಆರ್‌ಎ ಹಿರಿಯ ಉಪಾಧ್ಯಕ್ಷ ಜಿತಿನ್ ಮಕ್ಕರ್ ಹೇಳಿದ್ದಾರೆ.

ದೇಶದ ಸಂಸ್ಕೃತಿಯಲ್ಲಿ ಚಿನ್ನಕ್ಕಿರುವ ಪ್ರಾಮುಖ್ಯತೆ, ವಿವಾಹ ಮತ್ತು ಮಂಗಳಕರ ದಿನಗಳಂದು ಖರೀದಿ ಪ್ರಮಾಣವನ್ನು ಹೆಚ್ಚಿಸಲಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ಚಿನ್ನದ ದರವು ಸ್ಥಿರವಾಗಿದೆ. ಆದರೆ, ಜಾಗತಿಕ ಮಟ್ಟದಲ್ಲಿ ತಲೆದೋರುವ ಬಿಕ್ಕಟ್ಟು ಬೆಲೆ ಏರಿಕೆ ಮೇಲೆ ಪರಿಣಾಮ ಬೀರಬಹುದು ಎಂದಿದ್ದಾರೆ.

ಚಿನ್ನದ ದರ ₹500 ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹500 ಕಡಿಮೆಯಾಗಿ, ₹98,500ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹98 ಸಾವಿರವಾಗಿದೆ. ಬೆಳ್ಳಿ ಧಾರಣೆಯು ಯಥಾಸ್ಥಿತಿಯಲ್ಲಿದ್ದು, ಕೆ.ಜಿ ಬೆಳ್ಳಿ ದರವು ₹1 ಲಕ್ಷ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆಯಾಗಿದೆ. ಹೀಗಾಗಿ, ದೇಶೀಯ ಮಾರುಕಟ್ಟೆಯಲ್ಲೂ ಧಾರಣೆ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟ್ರಂಪ್ ಆಡಳಿತ ತೊರೆದ ಮಸ್ಕ್

ವಾಷಿಂಗ್ಟನ್ (ಎಪಿ): ಉದ್ಯಮಿ ಇಲಾನ್ ಮಸ್ಕ್ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉನ್ನತ ಸಲಹೆಗಾರ ಸ್ಥಾನವನ್ನು ತೊರೆಯುವುದಾಗಿ ಘೋಷಿಸಿದ್ದಾರೆ.

ಈ ಮೂಲಕ ಸರ್ಕಾರಿ ಸೇವೆಯಿಂದ ನಿರ್ಗಮಿಸುತ್ತಿರುವುದಾಗಿ ಅವರು ‘ಎಕ್ಸ್’ನಲ್ಲಿ ಪ್ರಕಟಿಸಿದ್ದಾರೆ. ಅಮೆರಿಕ ಸರ್ಕಾರದ ದಕ್ಷತಾ ಇಲಾಖೆಯ (ಡಿಒಜಿಇ) ನೇತೃತ್ವ ವಹಿಸಿದ್ದ ಅವರು ಫೆಡರಲ್ ಅಧಿಕಾರಶಾಹಿಯ ಖರ್ಚು, ವೆಚ್ಚಗಳನ್ನು ಕಡಿಮೆಗೊಳಿಸಲು ಪ್ರಯತ್ನಿಸಿದ್ದರು.

‘ವಿಶೇಷ ಸರ್ಕಾರಿ ಉದ್ಯೋಗಿಯಾಗಿ ನನ್ನ ನಿಗದಿತ ಅವಧಿ ಕೊನೆಗೊಂಡಿದೆ. ಅನಗತ್ಯ ವೆಚ್ಚಗಳನ್ನು ಕಡಿತ ಮಾಡಲು ಅವಕಾಶ ನೀಡಿದ್ದಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದಗಳು. ಡಿಒಜಿಇ ಕಾಲಕ್ರಮೇಣ ಬಲಗೊಳ್ಳಲಿದೆ’ ಎಂದು ಹೇಳಿದ್ದಾರೆ.

₹3,400 ಕೋಟಿ ಟಿಡಿಆರ್ ಬಳಕೆಗೆ ತಡೆ

ಒಂದನೇ ಪುಟದಿಂದ...

ಅವರ ವಾದ ಆಲಿಸಿದ ನಂತರ ಪೀಠವು ಈ ಆದೇಶ ನೀಡಿತು. ರಾಜ್ಯ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಹಾಜರಿದ್ದರು.

ರಾಜವಂಶಸ್ಥರ ಪರವಾಗಿ ಹಿರಿಯ ವಕೀಲರಾದ ಎ.ಕೆ. ಗಂಗೂಲಿ, ಗೋಪಾಲ್ ಶಂಕರನಾರಾಯಣನ್ ಮತ್ತು ಇತರರು ವಾದ ಮಂಡಿಸಿ, ‘ರಾಜ್ಯ ಸರ್ಕಾರ ಎತ್ತಿರುವ ವಾದಗಳನ್ನು ಹಲವಾರು ಬಾರಿ ಪರಿಗಣಿಸಲಾಗಿದೆ ಮತ್ತು ತಿರಸ್ಕರಿಸಲಾಗಿದೆ’ ಎಂದು ಪೀಠದ ಗಮನಕ್ಕೆ ತಂದರು.

‘ರಾಜ್ಯ ಸರ್ಕಾರವು 2014ರ ಆದೇಶ ಮಾರ್ಪಡಿಸಲು ಪ್ರಯತ್ನಿಸಿತು ಮತ್ತು ಮೂರು ವಿಭಿನ್ನ ಪೀಠಗಳು ಅದನ್ನು ವಜಾಗೊಳಿಸಿವೆ. ಕೆಲವು ಕಾನೂನುಗಳು ಇರಬೇಕು’ ಎಂದು ಗಂಗೂಲಿ ಕೇಳಿದರು.

ದ್ವಿಸದಸ್ಯ ಪೀಠ ನೀಡಿದ್ದ ತೀರ್ಪಿನ ವಿರುದ್ಧ ಮತ್ತೊಂದು ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಶಂಕರನಾರಾಯಣನ್ ಹೇಳಿದರು.

‘ಮಧ್ಯಂತರ ಕ್ರಮವಾಗಿ, ನ್ಯಾಯಾಂಗ ನಿಂದನೆ ವಿಚಾರಣೆಯಲ್ಲಿ ನೀಡಿರುವ ತೀರ್ಪಿನ ಅನುಸಾರ ನೀಡಲಾದ ಎಲ್ಲ ಟಿಡಿಆರ್‌ಗಳನ್ನು ಮುಂದಿನ ಆದೇಶದವರೆಗೆ ರಿಜಿಸ್ಟ್ರಿಯಲ್ಲೇ ಠೇವಣಿ ಇಡಬೇಕು’ ಎಂದು ಪೀಠ ಹೇಳಿದೆ.


ನ್ಯಾಯಾಲಯವು ಮೇ 22ರ ತೀರ್ಪು ಸೇರಿದಂತೆ ಹಿಂದಿನ ಆದೇಶಗಳಿಗೆ ತಡೆ ನೀಡಿದೆ. ‘2024ರ ಡಿಸೆಂಬರ್ 10, 2022ರ ಮೇ 17 ಹಾಗೂ 2024ರ ಮಾರ್ಚ್ 19ರ ಆದೇಶಗಳಿಗೂ ತಡೆ ನೀಡಲಾಗಿದೆ ಎಂದು ಪೀಠ ಸ್ಪಷ್ಟಪಡಿಸಿದೆ.

ಈ ಮಧ್ಯಂತರ ಆದೇಶವು ಕಕ್ಷಿದಾರರ ಹಕ್ಕುಗಳಿಗೆ ಯಾವುದೇ ಹಾನಿ ಮಾಡುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

‘ತೀರ್ಪು ಸಂತಸ ತಂದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅರಮನೆ ಮೈದಾನದ 15.36 ಎಕರೆಗೆ ₹3,400 ಕೋಟಿ ಮೌಲ್ಯದ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣ ಪತ್ರಗಳನ್ನು ಮೈಸೂರಿನ ರಾಜವಂಶಸ್ಥರಿಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿದ್ದ ತೀರ್ಪನ್ನು ತ್ರಿಸದಸ್ಯ ಪೀಠ ಅಮಾನತುಗೊಳಿಸಿರುವುದು ರಾಜ್ಯ ಸರ್ಕಾರಕ್ಕೆ ದೊರೆತ ತಾತ್ಕಾಲಿಕ ಜಯ’ ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.



ಎಚ್‌.ಕೆ. ಪಾಟೀಲ

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ದ್ವಿಸದಸ್ಯ ಪೀಠದ ತೀರ್ಪಿನಂತೆ 15.36 ಎಕರೆಗೆ ₹3,400 ಕೋಟಿ ಪಾವತಿಸಿದರೆ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ. ಅಂದಿನ ಬೆಲೆ ₹11 ಕೋಟಿ ನಿಗದಿ ಮಾಡಿ ಆದೇಶ ಹೊರಡಿಸಲಾಗಿತ್ತು ಎಂದರು.

ರಾಜಮನೆತನದವರು ಕೋರ್ಟ್ ಮೊರೆ ಹೋಗಿದ್ದರು. ಆದರೆ, ತಡೆಯಾಜ್ಞೆ ನೀಡಿರಲಿಲ್ಲ. 28 ವರ್ಷಗಳಿಂದ ವಿಚಾರಣೆ ನಡೆಯುತ್ತಿತ್ತು. ₹3,400 ಕೋಟಿ ನೀಡುವಂತೆ ಆದೇಶ ಬಂತು. ಅರಮನೆ ಮೈದಾನ ಸರ್ಕಾರದ ಆಸ್ತಿ. ಟಿಡಿಆರ್ ಕೊಡುವುದು ಸಮಂಜಸವಲ್ಲ. ಅಷ್ಟು ಹಣ ಕೊಟ್ಟರೆ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ ಎಂದು ತ್ರಿಸದಸ್ಯ ಪೀಠದ ಗಮನಕ್ಕೆ ತಂದೆವು. ಕೋರ್ಟ್ ನಮ್ಮ ಮನವಿ ಪುರಸ್ಕರಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ವಸಾಹತುಶಾಹಿ ವ್ಯವಸ್ಥೆಯನ್ನು ಗುರಿಯಾಗಿಸಿಕೊಂಡು ಬರೆದಿದ್ದ ಲೇಖಕ

ಕೀನ್ಯಾದ ಕಾದಂಬರಿಕಾರ ಥಿಯಾಂಗೊ ಇನ್ನಿಲ್ಲ

ನೈರೋಬಿ (ರಾಯಿಟರ್ಸ್): ಕೀನ್ಯಾದ ಬಹುಶ್ರುತ ಕಾದಂಬರಿಕಾರ ಮತ್ತು ನಾಟಕಕಾರ ಗೂಗಿ ವಾ ಥಿಯಾಂಗೊ ಅವರು (87) ಇನ್ನಿಲ್ಲ ಎಂದು ಕೀನ್ಯಾ ಅಧ್ಯಕ್ಷ ವಿಲಿಯಂ ರುಟೊ ತಿಳಿಸಿದ್ದಾರೆ.



ಥಿಯಾಂಗೊ ಅವರು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕೆಲವು ಉಚ್ಚ ವರ್ಗದವರನ್ನು ಕಟುವಾಗಿ ಟೀಕಿಸಿದ್ದಕ್ಕಾಗಿ ಜೈಲುವಾಸ ಅನುಭವಿಸಿದ್ದರು, ಎರಡು ದಶಕಗಳ ಕಾಲ ದೇಶಭ್ರಷ್ಟರಾಗಿದ್ದರು.

ಬ್ರಿಟನ್ನಿನಿಂದ ಸ್ವಾತಂತ್ರ್ಯ ಪಡೆಯಲು ನಡೆದ ಸಶಸ್ತ್ರ ಹೋರಾಟವನ್ನು ಥಿಯಾಂಗೊ ಅವರು ಹದಿಹರೆಯದಲ್ಲಿ ಇದ್ದಾಗಲೇ ಕಾಣಬೇಕಾಯಿತು. ತಮ್ಮ ಬರಹಗಳಲ್ಲಿ ಅವರು ವಸಾಹತು ಆಡಳಿತವನ್ನು ಮತ್ತು ಆ ಆಡಳಿತದ ಹಲವು ವಿಶೇಷ ಸವಲತ್ತುಗಳನ್ನು ಪಡೆದಿದ್ದ ಕೀನ್ಯಾದ ಉಚ್ಚ ವರ್ಗದ ಕೆಲವರನ್ನು ಗುರಿಯಾಗಿಸಿಕೊಂಡರು.

ರೈತರು ಮತ್ತು ಕಾರ್ಮಿಕರು ಥಿಯಾಂಗೊ ಅವರ ನಾಟಕ ‘ಗಾಹಿಕಾ ದೀಂಡಾ’ವನ್ನು (ನಾನು ಬಯಸಿದಾಗ ಮದುವೆ ಆಗುವೆ) ಅಡಿತೋರಿಸಿದಾಗ, 1977ರ ಡಿಸೆಂಬರ್ ತಿಂಗಳಲ್ಲಿ ಥಿಯಾಂಗೊ ಅವರನ್ನು ಬಂಧಿಸಿ, ಯಾವ ದೋಷಾರೋಪವೂ ಇಲ್ಲದೆ ಜೈಲಿನಲ್ಲಿ ಒಂದು ವರ್ಷ ಇರಿಸಲಾಗಿತ್ತು.

ಕೀನ್ಯಾ ಸಮಾಜದಲ್ಲಿನ ಅಸಮಾನತೆಯ ಬಗ್ಗೆ ಈ ನಾಟಕದಲ್ಲಿ ಟೀಕೆಗಳು ಇವೆ. ಇದರಿಂದ ಸಿಟ್ಟಿಗೆದ್ದ ಅಧಿಕಾರಿಗಳು ರಂಗಸ್ಥಳ ಇದ್ದ ಸೌಧವನ್ನು ನೆಲಸಮ ಮಾಡಲು ಮೂರು ಟ್ರಕ್ಕುಗಳಲ್ಲಿ ಪೊಲೀಸರನ್ನು ಕಳುಹಿಸಿದ್ದರು ಎಂದು ಥಿಯಾಂಗೊ ಅವರು ನಂತರ ಒಮ್ಮೆ ಹೇಳಿದ್ದರು.

ಕೀನ್ಯಾದ ಅಧ್ಯಕ್ಷ ಡೇನಿಯಲ್ ಅರಾಪ್ ಮೊಯಿ ಅವರ ಭದ್ರತಾ ಸಿಬ್ಬಂದಿಯು ತಮ್ಮನ್ನು ಬಂಧಿಸಿ, ಕೊಲ್ಲಲು ಯೋಜನೆ ರೂಪಿಸಿದ್ದಾರೆ ಎಂಬುದು ಗೊತ್ತಾಗಿದೆ ಎಂದು ಥಿಯಾಂಗೊ ಅವರು 1982ರಲ್ಲಿ ಹೇಳಿ, ದೇಶಭ್ರಷ್ಟರಾಗಿದ್ದರು. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ (ಇರ್ವಿನ್) ಥಿಯಾಂಗೊ ಅವರು ಇಂಗ್ಲಿಷ್ ಮತ್ತು ತುಲನಾತ್ಮಕ ಸಾಹಿತ್ಯದ ಪ್ರೊಫೆಸರ್ ಆಗಿ ಕೆಲಸ ಮಾಡಿದ್ದರು.

ಮೊಯಿ 2004ರಲ್ಲಿ ಅಧಿಕಾರದಿಂದ ನಿರ್ಗಮಿಸಿದ ನಂತರದಲ್ಲಿ ಥಿಯಾಂಗೊ ಅವರ ದೇಶಭ್ರಷ್ಟ ಸ್ಥಿತಿ ಕೊನೆಗೊಂಡಿತು. ಅವರು ಕೀನ್ಯಾಕ್ಕೆ ಮರಳಿದರು.

ಇಂಗ್ಲಿಷ್‌ನಲ್ಲಿ ಬರೆಯುವುದನ್ನು 1980ರಲ್ಲಿ ಕೈಬಿಟ್ಟ ಥಿಯಾಂಗೊ, ತಮ್ಮ ಮಾತೃಭಾಷೆ ‘ಗಿಕುಯು’ದಲ್ಲಿ ಬರೆಯಲು ಆರಂಭಿಸಿದರು. ಆಮದು ಮಾಡಿಕೊಂಡ ಭಾಷೆಗೆ ತಾವು ವಿದಾಯ ಹೇಳುತ್ತಿರುವುದಾಗಿ ಅವರು ಆಗ ತಿಳಿಸಿದ್ದರು.

ಪ್ರಮುಖ ಕಾದಂಬರಿಗಳು

ಗೂಗಿ ವಾ ಥಿಯಾಂಗೊ ಅವರ ಮುಖ್ಯವಾದ ಕಾದಂಬರಿಗಳೆಂದರೆ, ವೀಪ್ ನಾಟ್- ಚೈಲ್ಡ್, ದಿ ರಿವರ್ ಬಿಟ್ವೀನ್, ಎ ಗ್ರೈನ್ ಆಫ್ ವೀಟ್, ಡೆವಿಲ್ ಆನ್ ದಿ ಕ್ರಾಸ್, ವಿಜಾರ್ಡ್ ಆಫ್ ದಿ ಕ್ರೊ. ಇವಲ್ಲದೆ ನಾಟಕ, ಸಾಹಿತ್ಯ, ಸಂಸ್ಕೃತಿ, ರಾಜಕೀಯ ಸ್ವರೂಪದ ಬಗ್ಗೆ ಹಲವಾರು ಪ್ರಬಂಧಗಳನ್ನೂ ಬರೆದಿದ್ದಾರೆ. ಇವರ ಬಹುಚರ್ಚಿತ ಕೆಲವು ಲೇಖನಗಳು ಕನ್ನಡಕ್ಕೆ ಅನುವಾದಗೊಂಡಿವೆ.

ಟ್ರಂಪ್ ಆಡಳಿತಕ್ಕೆ ಮುಖಭಂಗ: ಅಮೆರಿಕ ಷೇರುಪೇಟೆಯಲ್ಲಿ ಚೇತರಿಕೆ

ಸುಂಕ ನೀತಿಗೆ ತಡೆ ನೀಡಿದ ಕೋರ್ಟ್

ವಾಷಿಂಗ್ಟನ್(ರಾಯಿಟರ್ಸ್/ಎಎಫ್‌ಪಿ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇರಿದ್ದ ಸುಂಕ ನೀತಿಗೆ ಇಲ್ಲಿನ ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯ ತಡೆ ನೀಡಿ ಬುಧವಾರ ಆದೇಶಿಸಿದೆ.

‘ಟ್ರಂಪ್ ಅವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಈ ನಿರ್ಧಾರ ಕೈಗೊಂಡಿದ್ದಾರೆ’ ಎಂದು ಹೇಳಿರುವ ಮೂವರು ನ್ಯಾಯಮೂರ್ತಿಗಳು, ಟ್ರಂಪ್ ಅವರು ಜನವರಿಯಲ್ಲಿ ಅಧಿಕಾರ ವಹಿಸಿಕೊಂಡ ನಂತರ ಹೇರಿದ್ದ ಬಹುತೇಕ ಎಲ್ಲ ಸುಂಕಗಳಿಗೆ ತಡೆ ನೀಡಿದ್ದಾರೆ.

ಸುಂಕ ವಿಧಿಸುವುದನ್ನು ಸ್ಥಗಿತಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕಾಗಿ ನ್ಯಾಯಾಲಯವು ಶ್ವೇತಭವನಕ್ಕೆ 10 ದಿನ ಕಾಲಾವಕಾಶ ನೀಡಿದೆ. ಚೀನಾ, ಕೆನಡಾ ಮತ್ತು ಮೆಕ್ಸಿಕೊ ಮೇಲೆ ಟ್ರಂಪ್ ಅವರು ಪ್ರತ್ಯೇಕವಾಗಿ ವಿಧಿಸಿರುವ ಸುಂಕಗಳನ್ನು ಕೂಡ ನ್ಯಾಯಾಲಯ ರದ್ದು ಮಾಡಿದೆ.

ಆದರೆ, ಆಟೊ, ಉಕ್ಕು, ಅಲ್ಯುಮಿನಿಯಂ ಉದ್ದಿಮೆಗಳಿಗೆ ಸಂಬಂಧಿಸಿ ವಿಧಿಸಲಾಗಿರುವ ಶೇ 25ರಷ್ಟು ಸುಂಕವನ್ನು ರದ್ದು ಮಾಡಿಲ್ಲ.

ನ್ಯಾಯಾಲಯದ ಈ ಆದೇಶ ಟ್ರಂಪ್ ಅವರಿಗಾದ ಹಿನ್ನಡೆ ಎಂದೇ ವಿಶ್ಲೇಷಲಾಗುತ್ತಿದೆ. ಇನ್ನೊಂದೆಡೆ, ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಗುರುವಾರ ಚೇತರಿಕೆ ಕಂಡು ಬಂತು.

ನ್ಯಾಯಾಲಯದ ಆದೇಶ ಪ್ರಶ್ನಿಸಿ ಟ್ರಂಪ್ ಆಡಳಿತ ಪರ ಅಟಾರ್ನಿಗಳು ಮೇಲ್ಮನವಿ ಸಲ್ಲಿಸಿದ್ದಾರೆ.

ಅಮೆರಿಕ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಧಿಕ ಪ್ರತಿ ಸುಂಕ ಹೇರಿದ್ದರಿಂದಾಗಿ, ಅಮೆರಿಕದೊಂದಿಗೆ ವ್ಯಾಪಾರ ನಡೆಸುತ್ತಿರುವ ದೇಶಗಳು ಸಂಕಷ್ಟಕ್ಕೀಡಾಗಿದ್ದವು. ನ್ಯಾಯಾಲಯದ ಈ ಆದೇಶದಿಂದ ವಿವಿಧ ದೇಶಗಳು ನಿರಾಳವಾಗಿವೆ.

ಶ್ವೇತಭವನ ಪ್ರತಿಕ್ರಿಯೆ: ‘ರಾಷ್ಟ್ರದ ತುರ್ತುಗಳ ಕುರಿತು ನಿರ್ಧಾರ ಕೈಗೊಳ್ಳುವುದು ಚುನಾಯಿತರಲ್ಲದ ನ್ಯಾಯಮೂರ್ತಿಗಳ ಕೆಲಸವಲ್ಲ’ ಎಂದು ಶ್ವೇತಭವನದ ವಕ್ತಾರ ಕುಶ್ ದೇಸಾಯಿ ಹೇಳಿದ್ದಾರೆ.

‘‘ಅಮೆರಿಕ ಮೊದಲು’ ಎಂಬ ನೀತಿಯ ಭಾಗವಾಗಿ ಟ್ರಂಪ್ ಅವರು ತಮಗಿರುವ ಅಧಿಕಾರ ಬಳಸಿ ಸುಂಕಗಳ ಕುರಿತ ನಿರ್ಧಾರ ಕೈಗೊಂಡಿದ್ದರು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಸಮುದಾಯ ಮತ್ತು ಅಮೆರಿಕದ ಭಾಗೀದಾರರ ಅಹವಾಲುಗಳಿಗೆ ಅಮೆರಿಕ ಕಿವಿಗೊಡಬೇಕು. ಏಕಪಕ್ಷೀಯವಾಗಿ ಹಾಗೂ ತಪ್ಪಾಗಿ ಹೇರಿರುವ ಸುಂಕಗಳನ್ನು ಸಂಪೂರ್ಣ ಹಿಂಪಡೆಯಬೇಕು

ಹಿ ಯಾಂಗ್‌ಷಿಯಾನ್, ಚೀನಾ ವಾಣಿಜ್ಯ ಸಚಿವಾಲಯ ವಕ್ತಾರೆ

ಅಮೆರಿಕದ ಅಂತರರಾಷ್ಟ್ರೀಯ ವಾಣಿಜ್ಯ ನ್ಯಾಯಾಲಯ ನೀಡಿರುವ ತೀರ್ಪನ್ನು ಅಧ್ಯಯನ ಮಾಡಿದ ನಂತರ ಪ್ರತಿಕ್ರಿಯಿಸುವೆ

ರೋಸಿ ಅಕಝೂವಾ, ಸುಂಕಗಳ ಕುರಿತ ರಾಯಭಾರಿ, ಜಪಾನ್

ಟ್ರಂಪ್ ಆಡಳಿತ ವಿಧಿಸಿರುವ ಸುಂಕಗಳ ಕುರಿತ ವಿಚಾರಣೆ ಇನ್ನೂ ಮುಗಿದಿಲ್ಲ. ಹೀಗಾಗಿ, ಅಮೆರಿಕದಲ್ಲಿ ನಡೆಯುತ್ತಿರುವ ನ್ಯಾಯಾಂಗ ಪ್ರಕ್ರಿಯೆ ಕುರಿತು ಪ್ರತಿಕ್ರಿಯಿಸುವುದಿಲ್ಲ. ಪರಸ್ಪರರಿಗೆ ಅನುಕೂಲವಾಗುವಂತಹ ಒಪ್ಪಂದಗಳಿಗೆ ಐರೋಪ್ಯ ಒಕ್ಕೂಟ ಹಾಗೂ ಅಮೆರಿಕ ಮುಂದಾಗಬೇಕು

ಜರ್ಮನಿ ಹಣಕಾಸು ಸಚಿವಾಲಯ ವಕ್ತಾರ

ಸುಂಕಗಳ ಕುರಿತು ನ್ಯಾಯಾಲಯ ನೀಡಿರುವ ತೀರ್ಪು ಅಮೆರಿಕದ ಆಂತರಿಕ ವಿಚಾರ. ಅಲ್ಲದೇ, ಇದು ಕಾನೂನು ಪ್ರಕ್ರಿಯೆಯ ಆರಂಭಿಕ ಹಂತವಾಗಿದೆ

ಬ್ರಿಟನ್ ಸರ್ಕಾರ

‘ಟ್ರಂಪ್ ಮಧ್ಯಸ್ಥಿಕೆಯಿಂದ ಕದನ ವಿರಾಮ ಕೋರ್ಟ್‌ಗೆ ಟ್ರಂಪ್ ಆಡಳಿತ ಮಾಹಿತಿ’



ನ್ಯೂಯಾರ್ಕ್(ಪಿಟಿಐ): ‘ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯಸ್ಥಿಕೆ ವಹಿಸಿದ ಮೇಲಷ್ಟೆ ಭಾರತ ಮತ್ತು ಪಾಕಿಸ್ತಾನ ‘ಅನಿಶ್ಚಿತ ಕದನ ವಿರಾಮ’ಕ್ಕೆ ಒಪ್ಪಿಕೊಂಡವು’ ಎಂದು ಡೊನಾಲ್ಡ್ ಟ್ರಂಪ್ ಆಡಳಿತವು ನ್ಯೂಯಾರ್ಕ್‌ನ ನ್ಯಾಯಾಲಯವೊಂದಕ್ಕೆ ತಿಳಿಸಿದೆ.

‘ಉಭಯ ದೇಶಗಳ ನಡುವೆ ನಡೆಯಲಿದ್ದ ಪೂರ್ಣ ಪ್ರಮಾಣದ ಯುದ್ಧವನ್ನು ತಡೆಗಟ್ಟುವ ಉದ್ದೇಶದಿಂದ ಟ್ರಂಪ್ ಅವರು ಮಧ್ಯಸ್ಥಿಕೆ ವಹಿಸಿದರಲ್ಲದೇ, ಅಮೆರಿಕದೊಂದಿಗೆ ವ್ಯಾಪಾರ ನಡೆಸಲು ಎರಡೂ ದೇಶಗಳಿಗೆ ಅನುಕೂಲ ಒದಗಿಸುವ ಭರವಸೆ ನೀಡಿದರು’ ಎಂದೂ ನ್ಯಾಯಾಲಯಕ್ಕೆ ತಿಳಿಸಿದೆ.

ಅಮೆರಿಕ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಅವರು ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯಕ್ಕೆ ಕಳೆದ ವಾರ ಈ ಮಾಹಿತಿ ನೀಡಿದ್ದಾರೆ.

ಯಾವುದೇ ಮೂರನೇ ದೇಶದ ಮಧ್ಯಸ್ಥಿಕೆ ಇಲ್ಲದೆಯೇ ಎರಡೂ ದೇಶಗಳು ಕಾರ್ಯಾಚರಣೆ ಸ್ಥಗಿತಗೊಳಿಸುವ ತೀರ್ಮಾನಕ್ಕೆ ಬಂದಿವೆ ಎಂದು ಭಾರತ ಹೇಳುತ್ತಾ ಬಂದಿದೆ.

‘ದೇಶದ ರಾಷ್ಟ್ರೀಯ ಭದ್ರತೆ ಹಾಗೂ ಆರ್ಥಿಕತೆ ಕಾಪಾಡುವ ಉದ್ದೇಶದಿಂದ ಟ್ರಂಪ್ ಅವರು ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರಗಳ ಕಾಯ್ದೆಯಡಿ (ಐಇಇಪಿಎ) ದತ್ತವಾದ ಅಧಿಕಾರ ಬಳಸಿ, ಸುಂಕ ಹೇರುವ ವಿಚಾರವಾಗಿ ನಿರ್ಧಾರ ಕೈಗೊಂಡಿದ್ದಾರೆ. ಜಾಗತಿಕ ಮಟ್ಟದ ರಾಜತಾಂತ್ರಿಕ ವಿಷಯಗಳಲ್ಲಿ ಸುಂಕಗಳ ನಿರ್ವಹಣೆ ನಿರ್ಣಾಯಕ ಪಾತ್ರ ವಹಿಸುತ್ತದೆ’ ಎಂದೂ ಲುಟ್ನಿಕ್ ತಿಳಿಸಿದ್ದಾರೆ.

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಕಳವಳ

ರಕ್ಷಣಾ ಯೋಜನೆಗಳ ಅನುಷ್ಠಾನ ವಿಳಂಬ

ನವದೆಹಲಿ (ಪಿಟಿಐ): ರಕ್ಷಣಾ ಯೋಜನೆಗಳ ಅನುಷ್ಠಾನದಲ್ಲಿ ಅತಿಯಾದ ವಿಳಂಬದ ಬಗ್ಗೆ ಭಾರತೀಯ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಗುರುವಾರ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ನಡುವಿನ ನಾಲ್ಕು ದಿನಗಳ ಸೇನಾ ಸಂಘರ್ಷದ ಬಳಿಕ ಇದೇ ಮೊದಲ ಬಾರಿಗೆ ಸಾರ್ವಜನಿಕ ವೇದಿಕೆಯಲ್ಲಿ ಮಾತನಾಡಿದ ಅವರು, 'ರಕ್ಷಣೆಗೆ ಸಂಬಂಧಿಸಿದ ಒಂದೇ ಒಂದು ಯೋಜನೆಯೂ ಸಕಾಲದಲ್ಲಿ ಪೂರ್ಣಗೊಂಡಿಲ್ಲ' ಎಂದು ಅಸಮಾಧಾನ ಹೊರಹಾಕಿದರು.

ಸಿಐಐ ವ್ಯಾಪಾರ ಶೃಂಗಸಭೆಯಲ್ಲಿ ಮಾತನಾಡುವಾಗ ಈ ಹೇಳಿಕೆ ನೀಡಿದ ಅವರು ವಿಳಂಬವಾಗುತ್ತಿರುವ ಯೋಜನೆಗಳ ನಿರ್ದಿಷ್ಟ ವಿವರಗಳನ್ನು ಒದಗಿಸಲಿಲ್ಲ. ಅದೇ ರೀತಿ, ಯೋಜನೆಗಳ ಅನುಷ್ಠಾನದಲ್ಲಿನ ವಿಳಂಬವು ಯಾವಾಗಿನಿಂದ ಭಾರತೀಯ ವಾಯುಪಡೆಯ (ಐಎಎಫ್) ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನೂ ಹೇಳಲಿಲ್ಲ.

ಎಚ್‌ಎಎಲ್‌ನಿಂದ ತೇಜಸ್ ಲಘು ಯುದ್ಧ ವಿಮಾನಗಳ ಹಸ್ತಾಂತರ ಪ್ರಕ್ರಿಯೆ ಭಾರಿ ವಿಳಂಬವಾಗಿರುವುದಕ್ಕೆ ವಾಯುಪಡೆಯು ಅಸಮಾಧಾನಗೊಂಡಿದೆ.

'ನಿಗದಿತ ಗಡುವಿನ ಒಳಗಾಗಿ ಯೋಜನೆಗಳು ಪೂರ್ಣಗೊಳ್ಳದೇ ಇರುವುದು ದೊಡ್ಡ ಸಮಸ್ಯೆಯಾಗಿದೆ. ನಾನು ಯೋಚಿಸಿದಂತೆ ಒಂದೇ ಒಂದು ಯೋಜನೆಯೂ ನಿಗದಿತ ಸಮಯಕ್ಕೆ ಪೂರ್ಣಗೊಂಡಿಲ್ಲ. ನಾವು ಈ ವಿಚಾರದ ಬಗ್ಗೆ ಹೆಚ್ಚು ಗಮನ ಹರಿಸಬೇಕಿದೆ' ಎಂದು ಹೇಳಿದರು.

'ಒಪ್ಪಂದಕ್ಕೆ ಸಹಿ ಹಾಕುವಾಗ, ಕೆಲವೊಮ್ಮೆ ಅದು ಈಡೇರುವುದಿಲ್ಲ ಎಂಬುದು ನಮಗೆ ಖಚಿತವಾಗಿರುತ್ತದೆ. ಆದರೂ ನಾವು ಮುಂದಿನದ್ದು ಆಮೇಲೆ ನೋಡೋಣ ಎಂದು ಒಪ್ಪಂದಕ್ಕೆ ಸಹಿ ಹಾಕುತ್ತೇವೆ. ಇದರಿಂದ ಇಡೀ ಪ್ರಕ್ರಿಯೆಯೇ ಹಾದಿ ತಪ್ಪುತ್ತದೆ. ನಮಗೆ ಸಾಧಿಸಲು ಆಗದೇ ಇರುವುದರ ಭರವಸೆಯನ್ನು ಏಕೆ ನೀಡಬೇಕು' ಎಂದು ಪ್ರಶ್ನಿಸಿದರು.



'ಆಪರೇಷನ್ ಸಿಂಧೂರ' ಮೂಲಕ ನಾವು ಸತ್ಯದ ಹಾದಿಯನ್ನು ಹಿಡಿದಿದ್ದೇವೆ. ದೇವರು ಕೂಡಾ ನಮ್ಮೊಂದಿಗಿದ್ದ ಎಂದು ನಾನು ಭಾವಿಸುತ್ತೇನೆ

ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್
ವಾಯುಪಡೆ ಮುಖ್ಯಸ್ಥ

'ರಾಷ್ಟ್ರೀಯ ವಿಜಯ'

ಆಪರೇಷನ್ ಸಿಂಧೂರವನ್ನು 'ರಾಷ್ಟ್ರೀಯ ವಿಜಯ' ಎಂದು ಶ್ಲಾಘಿಸಿದ ಎ.ಪಿ.ಸಿಂಗ್ ಅವರು, ಈ ಕಾರ್ಯಾಚರಣೆಯು ಭಾರತದ ಸಶಸ್ತ್ರ ಪಡೆಗಳಿಗೆ 'ನಾವು ಎಲ್ಲಿಗೆ ಹೋಗುತ್ತಿದ್ದೇವೆ ಮತ್ತು ಭವಿಷ್ಯದಲ್ಲಿ ನಮಗೆ ಏನೆಲ್ಲಾ ಬೇಕು' ಎಂಬುದರ 'ಸ್ಪಷ್ಟ ಕಲ್ಪನೆ'ಯನ್ನು ನೀಡಿದೆ ಎಂದರು.

'ಈ ಗೆಲುವಿಗೆ ಪ್ರತಿಯೊಬ್ಬ ಭಾರತೀಯರು ಕೊಡುಗೆ ನೀಡಿದ್ದಾರೆ ಎಂಬುದು ನನಗೆ ಖಚಿತವಾಗಿದೆ. ಈ ಹಿಂದೆ ಹಲವು ಸಲ ಹೇಳಿದಂತೆ, ಇದು ಎಲ್ಲರೂ ಬಹಳ ವೃತ್ತಿಪರ ರೀತಿಯಲ್ಲಿ ನಿರ್ವಹಿಸಿದ ಕಾರ್ಯಾಚರಣೆಯಾಗಿದೆ. ಎಲ್ಲಾ ಏಜೆನ್ಸಿಗಳು, ಸಶಸ್ತ್ರ ಪಡೆಗಳು ಮತ್ತು ನಾವೆಲ್ಲರೂ ಕೈಜೋಡಿಸಿದ್ದೇವೆ. ಸತ್ಯವು ನಿಮ್ಮೊಂದಿಗಿದ್ದರೆ, ಎಲ್ಲವೂ ತನ್ನಿಂದ ತಾನೇ ನಡೆಯುತ್ತದೆ' ಎಂದು ಹೇಳಿದರು.

ಕ್ರೂರಿ ಸರ್ಕಾರ: ಮೋದಿ ಟೀಕೆ

ಅಲಿಪುರದ್ವಾರ (ಪಿಟಿಐ): ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಸರ್ಕಾರದ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಹಿಂಸಾಚಾರ, ಭ್ರಷ್ಟಾಚಾರ ಮತ್ತು ಕಾನೂನು ಸುವ್ಯವಸ್ಥೆಯ ಅಸ್ಥಿರತೆಯನ್ನು ಈ ಸರ್ಕಾರ ಪೋಷಿಸುತ್ತಿದೆ. ಇಂಥ 'ಕ್ರೂರಿ ಸರ್ಕಾರ'ವನ್ನು ಕಿತ್ತೊಗೆಯಲು ಇಲ್ಲಿನ ಜನರು ಹಾತೊರೆಯುತ್ತಿದ್ದಾರೆ' ಎಂದು ಹೇಳಿದ್ದಾರೆ.

ಉತ್ತರ ಬಂಗಾಳದ ಅಲಿಪುರದ್ವಾರ್‌ನಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಮೋದಿ, ಮುರ್ಷಿದಾಬಾದ್, ಮಾಲ್ಡಾ ಕೋಮು ಹಿಂಸಾಚಾರಗಳು ಟಿಎಂಸಿ ಅವಧಿಯ 'ಕ್ರೌರ್ಯ ಮತ್ತು ಉದಾಸೀನತೆ'ಯನ್ನು ನೆನಪಿಸುತ್ತವೆ ಎಂದರು.

'ಪಶ್ಚಿಮ ಬಂಗಾಳದ ಪ್ರತಿಯೊಂದು ಪ್ರಕರಣದಲ್ಲೂ ನ್ಯಾಯಾಲಯಗಳು ಮಧ್ಯಪ್ರವೇಶಿಸುತ್ತಿವೆ. ಇಲ್ಲದಿದ್ದರೆ ಈ ವಿಚಾರಗಳು ಇತ್ಯರ್ಥ ಆಗುತ್ತಿರಲಿಲ್ಲ. ಈ ಸರ್ಕಾರದ ಮೇಲೆ ಜನರಿಗೆ ನಂಬಿಕೆ ಇಲ್ಲ. ಬಂಗಾಳದಲ್ಲಿ 'ಕ್ರೂರಿ ಸರ್ಕಾರವನ್ನು ತೊಲಗಿಸೋಣ' ಎನ್ನುವ ಕೂಗು ಎದ್ದಿದೆ' ಎಂದರು.

ಮಮತಾ 'ಆಪರೇಷನ್ ಸಿಂಧೂರ'ವನ್ನು 'ಬ್ಯುಸಿನೆಸ್ ಆಫ್ ಸಿಂಧೂರ' ಎಂದಿದ್ದಾರೆ. ಇದು ನಮ್ಮ ಸೇನೆಯ ತ್ಯಾಗ, ಶೌರ್ಯವನ್ನು ಅಣಕಿಸುವ ಅವರ ನೈಜ ಮುಖ

ಅಮಿತ್ ಮಾಳವೀಯ
ಬಿಜೆಪಿ ನಾಯಕ



ಪಶ್ಚಿಮ ಬಂಗಾಳದ ಅಲಿಪುರದ್ವಾರ್‌ನಲ್ಲಿ ಗುರುವಾರ ನಡೆದ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಿದ್ದರು – ಪಿಟಿಐ ಚಿತ್ರ

ರಾಜಕೀಯ ಲಾಭಕ್ಕೆ ಬಳಕೆ: ಮಮತಾ

ಕೋಲ್ಕತ್ತ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 'ಆಪರೇಷನ್ ಸಿಂಧೂರ'ವನ್ನು ರಾಜಕೀಯಗೊಳಿಸುತ್ತಿದ್ದಾರೆ. ಮುಂಬರುವ ರಾಜ್ಯಗಳ ಚುನಾವಣೆಗಳಲ್ಲಿ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಪ್ರಯತ್ನ ಇದು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ರ್‍ಯಾಲಿ ನಡೆಸಿದ ಪ್ರಧಾನಿ ಮೋದಿ, ಸಿಂಧೂರಕ್ಕೂ ಪಶ್ಚಿಮ ಬಂಗಾಳಕ್ಕೂ ಇರುವ ಪವಿತ್ರ ಸಂಬಂಧ ಉಲ್ಲೇಖಿಸಿದ್ದರು. ದುರ್ಗಾ ಪೂಜೆಯಲ್ಲಿ ಮಹಿಳೆಯರು ಆಚರಿಸುವ 'ಸಿಂಧೂರ ಖೇಲಾ' ಅನ್ನು ಉದಾಹರಣೆಯಾಗಿ ಬಳಸಿದ್ದರು. ಇದಕ್ಕೆ ಮಮತಾ ಬ್ಯಾನರ್ಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಆಪರೇಷನ್ ಸಿಂಧೂರ ಮುಗಿದಿಲ್ಲ'

'ಆಪರೇಷನ್ ಸಿಂಧೂರ' ಇನ್ನೂ ಅಂತ್ಯಗೊಂಡಿಲ್ಲ. ಪಾಕಿಸ್ತಾನದ ನೆಲಕ್ಕೇ ನುಗ್ಗಿ ಮೂರು ಬಾರಿ ದಾಳಿ ಮಾಡಿದ್ದೇವೆ. ಯಾರು ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದ್ದಾರೋ ಅವರು ತಕ್ಕ ಬೆಲೆಯನ್ನು ತೆರಲಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕಂಟೇನರ್‌ನಲ್ಲಿ ಕಾಣಿಸಿದ ಬೆಂಕಿ; ಹೆಚ್ಚಿದ ಆತಂಕ

ತಿರುವನಂತಪುರ: ಕೇರಳದ ಕರಾವಳಿಯಲ್ಲಿ ಮುಳುಗಿರುವ ಲೈಬೀರಿಯಾದ ಸರಕು ಸಾಗಣೆ ಹಡಗಿನಲ್ಲಿದ್ದ ತೈಲದ ಕಂಟೇನರ್‌ಗಳು ತೀರಕ್ಕೆ ತೇಲಿ ಬಂದಿದ್ದು, ಅವುಗಳನ್ನು ತೆರವುಗೊಳಿಸುವಾಗ ಬೆಂಕಿ ಹೊತ್ತಿಕೊಂಡಿರುವುದು ಕೊಲ್ಲಂನಲ್ಲಿ ಭೀತಿಯನ್ನು ಹೆಚ್ಚಿಸಿದೆ.

ಕೊಲ್ಲಂನ ಉಪನಗರ ಶಕ್ತಿಕುಳಂಗರದ ಕರಾವಳಿಯ ತೀರಕ್ಕೆ ಬಂದಿರುವ ಕಂಟೇನರ್‌ಗಳನ್ನು ತೆರವುಗೊಳಿಸುವಾಗ ಒಂದು ಕಂಟೈನರ್‌ನಲ್ಲಿ ಗುರುವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿತು. ಪ್ರಾಥಮಿಕ ವರದಿಗಳ ಪ್ರಕಾರ, ವಿದ್ಯುತ್ ಕಟರ್‌ಗಳಿಂದ ಕಂಟೇನರ್ ಕತ್ತರಿಸುವಾಗ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡು, ದಟ್ಟ ಹೊಗೆ ಆವರಿಸಿತು. ಸ್ಥಳದಲ್ಲಿ ಬೀಡುಬಿಟ್ಟಿರುವ ಅಗ್ನಿಶಾಮಕ ಸಿಬ್ಬಂದಿ ತಕ್ಷಣ ಬೆಂಕಿ ನಂದಿಸಿದರು.

'ವಿಕೃತ ಮನುಷ್ಯ, ಶಿಕ್ಷೆ ಅಮಾನತು ಅಸಾಧ್ಯ'

ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವೈದ್ಯನ ಬಗ್ಗೆ ಕೋರ್ಟ್ ಮಾತು

ನವದೆಹಲಿ (ಪಿಟಿಐ): ಏಳು ವರ್ಷ ವಯಸ್ಸಿನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಕ್ಕೆ ತನಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಬೇಕು ಎಂದು ಹೃದ್ರೋಗ ತಜ್ಞನೊಬ್ಬ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

ಮದ್ಯಪಾನ ಮಾಡಿದ ನಂತರದಲ್ಲಿ ಮನುಷ್ಯ ಮೃಗದಂತೆ ಆಗುತ್ತಾನೆ ಎಂದು ಕೋರ್ಟ್ ಖೇದ ವ್ಯಕ್ತಪಡಿಸಿದೆ.

ವೈದ್ಯನನ್ನು ವಿಚಾರಣಾ ನ್ಯಾಯಾಲಯವು ಅಪರಾಧಿ ಎಂದು ಘೋಷಿಸಿದೆ, ಆತನಿಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಲಾಗದು ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

'ಈತ ಮಗುವಿನ ಮೇಲೆ ಏನು ಎಸಗಿದ್ದಾನೆ ನೋಡಿ... ನಿಮಗೆ ಸಮಾಧಾನ ಮೂಡಿಸುವಂತಹ ಯಾವುದೇ ಆದೇಶ ಕೊಡಲು ಆಗದು. ಈತನ ವಿರುದ್ಧ ಮಗು ಹೇಳಿಕೆ ನೀಡಿದೆ. ಈತ ವಿಕೃತ ಮನುಷ್ಯ, ಶಿಕ್ಷೆ ಅಮಾನತು ಸಾಧ್ಯವಿಲ್ಲ' ಎಂದು ಪೀಠವು ಮೌಖಿಕವಾಗಿ ಹೇಳಿತು.



'ನಿನ್ನದೇ ಮಗಳ ಮೇಲೆ ಹೀಗೆ ಮಾಡಬಾರದು... ಬಾಲಕಿಯು ಪಾಟೀಸವಾಲನ್ನು ಎದುರಿಸಿದ್ದಾಳೆ. ಮದ್ಯ ಸೇವಿಸಿದಾಗ ಮನುಷ್ಯ ಮೃಗವಾಗುತ್ತಾನೆ. ನಮ್ಮದು ಅತ್ಯಂತ ಉದಾರಿ ಪೀಠ. ನಾವು ಜಾಮೀನು ನೀಡುತ್ತಿಲ್ಲ ಎಂದಾದರೆ ಅದಕ್ಕೆ ಕಾರಣಗಳಿರುತ್ತವೆ' ಎಂದು ಕೂಡ ಪೀಠವು ಹೇಳಿತು. ವೈದ್ಯನು ಮದ್ಯಪಾನ ಮಾಡಿ ಲೈಂಗಿಕ ದೌರ್ಜನ್ಯ ನಡೆಸಿದ್ದ.

ವೈದ್ಯನ ಮಗಳು ಯಾರಿಂದಲೋ ಹೇಳಿಸಿಕೊಂಡು ಹೇಳಿಕೆ ನೀಡಿದ್ದಾಳೆ ಎಂದು ಆತನ ಪರವಾಗಿ ಹಾಜರಿದ್ದ ವಕೀಲರು ಪೀಠಕ್ಕೆ ತಿಳಿಸಿದರು. ಅಲಹಾಬಾದ್ ಹೈಕೋರ್ಟ್‌ನಲ್ಲಿ 12 ಲಕ್ಷಕ್ಕೂ ಹೆಚ್ಚಿನ ಪ್ರಕರಣಗಳು ಬಾಕಿ ಇವೆ. ಶಿಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಶೀಘ್ರ ನಡೆಯುವ ಸಾಧ್ಯತೆ ಇಲ್ಲ ಎಂದು ವಕೀಲರು ಹೇಳಿದರು.

ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸುವುದಕ್ಕೆ ಇದು ಕಾರಣ ಆಗುವುದಿಲ್ಲ ಎಂದು ಪೀಠವು ಹೇಳಿತು. ನಂತರ ವಕೀಲರು ಅರ್ಜಿಯನ್ನು ಹಿಂಪಡೆದರು. ಈ ಕಾರಣಕ್ಕೆ ಅರ್ಜಿಯನ್ನು ವಜಾಗೊಳಿಸಲಾಯಿತು.

ಮಗಳ ಮೇಲೆ ಈತ ಲೈಂಗಿಕ ಹಲ್ಲೆ ನಡೆಸಿದ್ದಾನೆ ಎಂದು ಬಾಲಕಿಯ ತಾಯಿ ದೂರು ನೀಡಿದ್ದರು. ಮಗುವಿನ ತಂದೆ ಮತ್ತು ತಾಯಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. 2018ರ ಮಾರ್ಚ್ 23ರಂದು ಮಗಳನ್ನು ಕರೆದುಕೊಂಡು ಹೋಗಿದ್ದ ತಂದೆಯು, ಮಾರ್ಚ್ 30ರಂದು ಪತ್ನಿಗೆ ಕರೆ ಮಾಡಿ ಮಗಳನ್ನು ವಾಪಸ್ ಕರೆದೊಯ್ಯುವಂತೆ ಹೇಳಿದ್ದ.

ನಂತರ ಆ ಬಾಲಕಿಯು, 'ಅಪ್ಪ ಕೆಟ್ಟ ಮನುಷ್ಯ, ಆತ ಕೆಟ್ಟದ್ದಾಗಿ ತನ್ನನ್ನು ಮುಟ್ಟಿದ್ದಾನೆ' ಎಂದು ತಾಯಿಯ ಬಳಿ ಹೇಳಿದ್ದಳು.

ಸಂಕ್ಷಿಪ್ತ ಸುದ್ದಿ

ಪಿಒಕೆ ಜನ ಭಾರತದ ಕುಟುಂಬ: ಸಿಂಗ್

ನವದೆಹಲಿ (ಪಿಟಿಐ): ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಜನರು ಭಾರತದ 'ಕುಟುಂಬಕ್ಕೆ' ಸೇರಿದವರು, ಅವರು ತಮ್ಮ ಅಂತರಾತ್ಮದ ಕರೆಗೆ ಓಗೊಟ್ಟು ಭಾರತದ ಮುಖ್ಯವಾಹಿನಿಗೆ ಮರಳುವ ದಿನ ದೂರವಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುರುವಾರ ಹೇಳಿದ್ದಾರೆ.



ರಾಜನಾಥ ಸಿಂಗ್

ಭಯೋತ್ಪಾದನೆಗೆ ನೀಡುವ ಪ್ರತಿಕ್ರಿಯೆ ಹಾಗೂ ಅದನ್ನು ನಿರ್ವಹಿಸುವ ಕಾರ್ಯತಂತ್ರವನ್ನು ಭಾರತವು ಮರುರೂಪಿಸಿದೆ, ಪಾಕಿಸ್ತಾನದ ಜೊತೆ ಮಾತುಕತೆ ನಡೆಯಬಹುದು ಎಂದಾದರೆ ಅದು ಭಯೋತ್ಪಾದನೆ ಮತ್ತು ಪಿಒಕೆ ಕುರಿತಾಗಿ ಮಾತ್ರ ಎಂದು ಸಿಂಗ್ ಹೇಳಿದ್ದಾರೆ.

'ಸಿಐಐ ವಾಣಿಜ್ಯ ಶೃಂಗ'ದಲ್ಲಿ ಮಾತನಾಡಿದ ಅವರು, 'ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 'ಮೇಕ್ ಇನ್ ಇಂಡಿಯಾ' ಅಭಿಯಾನವು ದೇಶದ ರಾಷ್ಟ್ರೀಯ ಭದ್ರತೆಯಲ್ಲಿ ಮಹತ್ವದ ಅಂಶ, ಇದು ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲಿ ಭಯೋತ್ಪಾದನೆಯ ವಿರುದ್ಧ ಭಾರತವು ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ' ಎಂದಿದ್ದಾರೆ.

ಅಮರನಾಥ ಯಾತ್ರೆ: ಬಿಗಿ ಭದ್ರತೆ

ನವದೆಹಲಿ (ಪಿಟಿಐ): ಅಮರನಾಥ ಯಾತ್ರೆಗೆ ಭದ್ರತೆಯನ್ನು ಒದಗಿಸುವ ಸಲುವಾಗಿ 42,000 ಯೋಧರನ್ನು ಒಳಗೊಂಡ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) 580 ಕಂಪನಿಗಳನ್ನು ನಿಯೋಜಿಸಲು ಕೇಂದ್ರ ಸರ್ಕಾರ ಆದೇಶಿಸಿದೆ ಎಂದು ಅಧಿಕೃತ ಮೂಲಗಳು ಗುರುವಾರ ತಿಳಿಸಿವೆ.

424 ಕಂಪನಿಗಳು ಕೇಂದ್ರಾಡಳಿತ ಪ್ರದೇಶಕ್ಕೆ ಕಳುಹಿಸಲಾಗಿದ್ದು, 'ಆಪರೇಷನ್ ಸಿಂಧೂರ' ಸಮಯದಲ್ಲಿ ಕೇಂದ್ರಾಡಳಿತ ಪ್ರದೇಶಕ್ಕೆ ಸ್ಥಳಾಂತರಗೊಂಡಿದ್ದ 80 ಕಂಪನಿಗಳನ್ನು, ಶ್ರೀನಗರ ಸೇರಿದಂತೆ ಯಾತ್ರೆಯ ಮಾರ್ಗದಲ್ಲಿ ಭಕ್ತರ ಮತ್ತು ಇತರ ಪ್ರದೇಶಗಳ ಭದ್ರತೆಗೆ ಸ್ಥಳಾಂತರಿಸಲಾಗುವುದು. ಜೂನ್ ಎರಡನೇ ವಾರದೊಳಗೆ ಜಮ್ಮು ಮತ್ತು ಕಾಶ್ಮೀರಕ್ಕೆ ತೆರಳುವಂತೆ ಈ ಪಡೆಗಳಿಗೆ ನಿರ್ದೇಶಿಸಲಾಗಿದೆ ಎಂದು ಗೃಹಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಅಮರನಾಥ ಯಾತ್ರೆಯು ಜುಲೈ 3ರಂದು ಆರಂಭಗೊಂಡು, ಆಗಸ್ಟ್ 9ಕ್ಕೆ ಕೊನೆಗೊಳ್ಳಲಿದೆ.

'ಬ್ರಿಟಿಷರ ಪ್ರಭಾವ: ಇತಿಹಾಸದಲ್ಲಿ ತಪ್ಪು ದಾಖಲು'

ಜೈಪುರ(ಪಿಟಿಐ): 'ಬ್ರಿಟಿಷರಿಂದ ಪ್ರಭಾವಿತವಾದ ಭಾರತದ ಇತಿಹಾಸದಲ್ಲಿ ಹಲವು ತಪ್ಪುಗಳು ದಾಖಲಾಗಿವೆ. ಜೋಧಾ-ಅಕ್ಬರ್ ನಡುವೆ ಮದುವೆಯಾಗಿದೆ ಎನ್ನುವ ಇತಿಹಾಸವೂ ಸುಳ್ಳು' ಎಂದು ರಾಜಸ್ಥಾನದ ರಾಜ್ಯಪಾಲ ಹರಿಭಾವು ಬಗಾಡೆ ಅಭಿಪ್ರಾಯಪಟ್ಟಿದ್ದಾರೆ.

ಉದಯಪುರದಲ್ಲಿ ಬುಧವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಜೋಧಾ ಬಾಯಿ ಮತ್ತು ಮೊಗಲ್ ಚಕ್ರವರ್ತಿ ಅಕ್ಬರ್ ಮದುವೆಯಾಗಿದ್ದರೆಂದು ಇತಿಹಾಸ ಪುಸ್ತಕಗಳಲ್ಲಿ ವ್ಯಾಪಕವಾಗಿ ಉಲ್ಲೇಖಿಸಲಾಗಿದೆ. ಆದರೆ, ಇದು ತಪ್ಪು ಮಾಹಿತಿ. ಈ ಕಥೆಯನ್ನು ಇಟ್ಟುಕೊಂಡು ಚಲನ ಚಿತ್ರವೊಂದನ್ನು ಸಹ ಮಾಡಿದ್ದಾರೆ. ಆದರೆ, 'ಅಕ್ಬರ್‌ನಾಮ'ದಲ್ಲಿ ಜೋಧಾ ಮತ್ತು ಅಕ್ಬರ್ ಮದುವೆಯ ಬಗ್ಗೆ ಉಲ್ಲೇಖವೇ ಇಲ್ಲ. ಇದಲ್ಲದೆ, ಭಾರತದ ಇತಿಹಾಸದಲ್ಲಿ ಹಲವು ತಪ್ಪುಗಳನ್ನು ದಾಖಲಿಸಲಾಗಿದೆ' ಎಂದರು.

ಪಾಕಿಸ್ತಾನದ ಪರ ಗೂಢಚರ್ಯೆ ಆರೋಪ: ಸರ್ಕಾರಿ ನೌಕರ ವಶಕ್ಕೆ

ಜೈಪುರ/ನವದೆಹಲಿ (ಪಿಟಿಐ): ಪಾಕಿಸ್ತಾನದ ಪರವಾಗಿ ಗೂಢಚರ್ಯೆ ನಡೆಸಿದ ಅನುಮಾನದ ಅಡಿಯಲ್ಲಿ ರಾಜಸ್ಥಾನದ ಸರ್ಕಾರಿ ನೌಕರ ಶಕೂರ್ ಖಾನ್ ಎನ್ನುವವರನ್ನು ವಶಕ್ಕೆ ಪಡೆಯಲಾಗಿದೆ. ಇವರು ಮಾಜಿ ಸಚಿವ, ಕಾಂಗ್ರೆಸ್ಸಿನ ಸಾಲೇಹ್ ಮೊಹಮ್ಮದ್ ಅವರ ಸಹಾಯಕ ಆಗಿ ಕೆಲಸ ಮಾಡಿದ್ದರು ಎಂದು ಮೂಲಗಳು ಹೇಳಿವೆ.

ಜಿಲ್ಲಾ ಉದ್ಯೋಗ ಕಚೇರಿಯಲ್ಲಿ ಕೆಲಸ ಮಾಡುವ ಶಕೂರ್ ಅವರಿಗೆ ಸೇರಿದ ಮೊಬೈಲ್ ಫೋನ್‌ನಲ್ಲಿ ಪಾಕಿಸ್ತಾನದ ಜೊತೆ ನಂಟು ಹೊಂದಿರುವ ದೂರವಾಣಿ ಸಂಖ್ಯೆಗಳು ಇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಕೂರ್ ಪಾಕಿಸ್ತಾನದವರ ಜೊತೆ ಸಂಪರ್ಕದಲ್ಲಿದ್ದರು, ಭದ್ರತೆಗೆ ಸಂಬಂಧಿಸಿದ ವಿವರಗಳನ್ನು ಜೈಸಲ್ಮೇರ್‌ನಿಂದ ಹಂಚಿಕೊಳ್ಳುತ್ತಿದ್ದರು ಎನ್ನಲಾಗಿದೆ.

ಕೇರಳ: 8 ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಭಾರಿ ಮಳೆಯಿಂದಾಗಿ ವ್ಯಾಪಕ ಹಾನಿ ಉಂಟಾಗಿದ್ದು, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಗುರುವಾರ ರಾಜ್ಯದ ಎಂಟು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.

ಪತ್ತನಂತಿಟ್ಟ, ಕೋಟಯಂ, ಎರ್ನಾಕುಳಂ, ಇಡುಕ್ಕಿ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಿಗೆ ಗುರುವಾರ 'ರೆಡ್ ಅಲರ್ಟ್' ಘೋಷಿಸಲಾಗಿದ್ದು, ಉಳಿದ ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಇಡುಕ್ಕಿ, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಿಗೆ ಶುಕ್ರವಾರವೂ 'ರೆಡ್ ಅಲರ್ಟ್' ಘೋಷಿಸಲಾಗಿದ್ದು, ಉಳಿದ 11 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಗಂಟೆಗೆ 40-60 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಐಎಂಡಿ ತಿಳಿಸಿದೆ.


ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಮುಂದಿನ ಕೆಲವು ದಿನಗಳು ಕೇರಳದ ಕೆಲವು ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ಗುರುವಾರ ತಿಳಿಸಿದೆ.

'ಭಾರಿ ಮಳೆಯಿಂದಾಗಿ, ರಾಜ್ಯದ ವಿವಿಧ ನದಿಗಳಲ್ಲಿನ ನೀರಿನ ಮಟ್ಟ ಏರುತ್ತಿದೆ. ನದಿ ದಡದಲ್ಲಿ ವಾಸಿಸುತ್ತಿರುವವರು ಎಚ್ಚರಿಕೆ ವಹಿಸಬೇಕು' ಎಂದು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಕೆಎಸ್‌ಡಿಎಂಎ) ತಿಳಿಸಿದೆ.

ಗಾಳಿ ಮತ್ತು ಮಳೆಯಿಂದಾಗಿ ಕೆಲವು ಮನೆಗಳಿಗೆ ಹಾನಿಯಾಗಿದ್ದು, ತಗ್ಗು ಪ್ರದೇಶಗಳು ಜಲಾವೃತವಾಗಿವೆ. ವಯನಾಡ್ ಸೇರಿದಂತೆ ರಾಜ್ಯದ ಅನೇಕ ಭಾಗಗಳಿಂದ ನೂರಾರು ಜನರನ್ನು ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.

ನಿಗದಿತ ಸಮಯಕ್ಕಿಂತ ಎಂಟು ದಿನ ಮುಂಚಿತವಾಗಿ ರಾಜ್ಯಕ್ಕೆ ಮುಂಗಾರು ಪ್ರವೇಶಿಸಿದೆ.

ಆಂಧ್ರದಲ್ಲೂ ಮಳೆ: ಶನಿವಾರದವರೆಗೆ ಆಂಧ್ರಪ್ರದೇಶದ ಹಲವೆಡೆ ವೇಗವಾಗಿ ಗಾಳಿ ಬೀಸುವ ಸಾಧ್ಯತೆ ಇದ್ದು, ಜೋರು ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಭಾರಿ ಮಳೆಯಿಂದಾಗಿ ಕೇರಳದ ಇಡುಕ್ಕಿಯಲ್ಲಿ ಗುರುವಾರ ರಸ್ತೆ ಮೇಲೆ ಬುಡಸಮೇತವಾಗಿ ಉರುಳಿ ಬಿದ್ದ ಮರಗಳು ಪಿಟಿಐ ಚಿತ್ರ

'ಪಟೇಲರನ್ನು ದ್ವೇಷ ರಾಜಕಾರಣಕ್ಕೆ ಬಳಸಿಕೊಳ್ಳುವುದು ನಿಲ್ಲಿಸಿ'

ನವದೆಹಲಿ (ಪಿಟಿಐ): 'ತಮ್ಮ ದ್ವೇಷದ ರಾಜಕಾರಣಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ತಪ್ಪಾಗಿ ಬಳಸಿಕೊಳ್ಳುತ್ತಿದ್ದಾರೆ ಮತ್ತು ಅವರನ್ನು ತಪ್ಪುತಪ್ಪಾಗಿ ಉಲ್ಲೇಖಿಸುತ್ತಿದ್ದಾರೆ. ಅವರು ಇದನ್ನು ನಿಲ್ಲಿಸಬೇಕು' ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ಕಾಶ್ಮೀರ ವಿಚಾರದ ಕುರಿತು ವಿಶ್ವಸಂಸ್ಥೆಗೆ ವಿಷಯಗಳನ್ನು ಮನದಟ್ಟು ಮಾಡಿಬಂದಿದ್ದ ಭಾರತದ ನಿಯೋಗದ ನೇತೃತ್ವವಹಿಸಿದ್ದ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಗೆ ಪಟೇಲರು 1948ರಲ್ಲಿ ಬರೆದ ಪತ್ರವನ್ನು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ಗುಜರಾತ್‌ಗೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರು ಗಾಂಧಿನಗರದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ್ದರು. '1947ರಲ್ಲಿ ಭಾರತ ಮಾತೆಯನ್ನು ವಿಭಜನೆ ಮಾಡಲಾಯಿತು. ಸರಪಳಿಗಳನ್ನು ತುಂಡು ಮಾಡುವ ಬದಲು, ಕೈಗಳನ್ನು ತುಂಡು ಮಾಡಲಾಯಿತು. ದೇಶವು ಮೂರು ಭಾಗವಾಯಿತು. ಅದೇ ರಾತ್ರಿಯೇ ಕಾಶ್ಮೀರದಲ್ಲಿ ಮೊದಲ ಭಯೋತ್ಪಾದಕ ದಾಳಿ ನಡೆದಿತ್ತು' ಎಂದಿದ್ದರು.

'ಮುಜಾಹಿದೀನ್ ಹೆಸರಿನಲ್ಲಿ ಭಯೋತ್ಪಾದಕರನ್ನು ಬಳಸಿಕೊಂಡು ಭಾರತದ ಒಂದು ಭಾಗವನ್ನು ಪಾಕಿಸ್ತಾನವು ತನ್ನ ವಶ ಮಾಡಿಕೊಂಡಿತು. ಅವತ್ತಿನ ದಿನವೇ ಈ ಮುಜಾಹಿದೀನ್‌ಗಳನ್ನು ಹತ್ಯೆ ಮಾಡಿದ್ದರೆ ಮತ್ತು ಪಿಒಕೆ ಅನ್ನು ವಾಪಸು ಪಡೆದುಕೊಳ್ಳುವವರೆಗೂ ನಮ್ಮ ಸೇನೆಯನ್ನು ತಡೆಯಬಾರದು ಎಂಬುದು ಪಟೇಲರ ಆಸೆಯಾಗಿತ್ತು. ಆದರೆ, ಪಟೇಲರ ಮಾತನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ಈಗ ಕಳೆದ 75 ವರ್ಷಗಳಿಂದ ನಾವು ಭಯೋತ್ಪಾದನೆಯನ್ನು ಅನುಭವಿಸುತ್ತಿದ್ದೇವೆ. ಪಹಲ್ಗಾಮ್ ದಾಳಿ ಕೂಡ ಇದರ ಮುಂದುವರಿದ ಭಾಗವೇ ಆಗಿದೆ' ಎಂದಿದ್ದರು.

ಗೆಲುವಿನ ಹಳಿಗೆ ಮರಳಿದ ಗುಕೇಶ್

ಸ್ಟಾವೆಂಜರ್ (ಜರ್ಮನಿ), (ಪಿಟಿಐ): ಸತತ ಎರಡು ಸೋಲುಗಳ ಬಳಿಕ ವಿಶ್ವ ಚಾಂಪಿಯನ್ ಡಿ.ಗುಕೇಶ್ ಕೊನೆಗೂ ಗೆಲುವಿನ ಹಾದಿಗೆ ಮರಳಿದರು. ಗುರುವಾರ 19ನೇ ವರ್ಷಕ್ಕೆ ಕಾಲಿಟ್ಟ ಭಾರತದ ಆಟಗಾರ, ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಹಿಕಾರು ನಕಾಮುರ ಅವರನ್ನು ಸೋಲಿಸಿದರು.

ಮೊದಲ ಎರಡು ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ (4.5 ಅಂಕ) ಅವರು ಮೂರನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ (6 ಅಂಕ) ಎದುರು ಸೋಲನುಭವಿಸಿದರು.

ಮೊದಲ ಎರಡು ಸುತ್ತುಗಳಲ್ಲಿ ಗುಕೇಶ್ ಕ್ರಮವಾಗಿ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಸ್ವದೇಶದ ಅರ್ಜುನ್ ಕೈಲಿ ಸೋಲನುಭವಿಸಿದ್ದರು. ಮೂರನೇ ಸುತ್ತಿನಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಗುಕೇಶ್ ಅವರು ವಿಶ್ವದ ಶ್ರೇಷ್ಠ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಆಟಗಾರರಲ್ಲಿ ಒಬ್ಬರಾದ ನಕಾಮುರಾ (4.5) ಅವರನ್ನು ಸಮಯದ ಒತ್ತಡಕ್ಕೆ ಸಿಲುಕಿಸಿ 42 ನಡೆಗಳಲ್ಲಿ ಗೆದ್ದು ಮೂರು ಅಂಕ ಪಡೆದರು.



ಗುಕೇಶ್

ಈ ಟೂರ್ನಿಯಲ್ಲಿ ಇನ್ನೂ ಮೂರು ಸುತ್ತುಗಳಿವೆ.

ಚೀನಾದ ವೀ ಯಿ ಇನ್ನೊಂದು ಪಂದ್ಯದಲ್ಲಿ (2.5) ಇನ್ನೊಂದು ಪಂದ್ಯದಲ್ಲಿ ಕಾರ್ಲ್‌ಸನ್ (5) ಅವರನ್ನು ಅವರನ್ನು 'ಆರ್ಮಗೆಡನ್' (ಟೈಬ್ರೇಕ್)ನಲ್ಲಿ ಸೋಲಿಸಿದರು. ಇವರಿಬ್ಬರ ನಡುವಣ ಕ್ಲಾಸಿಕಲ್ ಪಂದ್ಯ ಡ್ರಾ ಆಗಿತ್ತು. ಆರು ಆಟಗಾರರ ಟೂರ್ನಿಯಲ್ಲಿ ಕರುವಾನ ಅಗ್ರಸ್ಥಾನದಲ್ಲಿದ್ದರೆ, ಕಾರ್ಲ್‌ಸನ್ ಎರಡನೇ ಸ್ಥಾನದಲ್ಲಿದ್ದಾರೆ. ಇರಿಗೇಶಿ ಮತ್ತು ನಕಾಮುರ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಗುಕೇಶ್ ಐದನೇ ಹಾಗೂ ವೀ ಯಿ ಕೊನೆಯ ಸ್ಥಾನದಲ್ಲಿದ್ದಾರೆ.

ಫ್ರೆಂಚ್ ಓಪನ್: ಕೋಕೊ ಗಾಫ್, ಜೆಸಿಕಾ ಪೆಗುಲಾ ಮುನ್ನಡೆ

ಮೂರನೇ ಸುತ್ತಿಗೆ ಯಾನಿಕ್ ಸಿನ್ನರ್

ಪ್ಯಾರಿಸ್ (ರಾಯಿಟರ್ಸ್): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಗುರುವಾರ 6-3, 6-0, 6-4 ರಲ್ಲಿ ನೇರ ಸೆಟ್‌ಗಳಿಂದ ಸ್ಥಳೀಯ ತಾರೆ ರಿಚರ್ಡ್ ಗ್ಯಾಸ್ಕೆ ಅವರನ್ನು ಸದೆಬಡಿದು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ದಾಪುಗಾಲಿಟ್ಟರು.

ಇದು 38 ವರ್ಷ ವಯಸ್ಸಿನ ಗ್ಯಾಸ್ಕೆ ಅವರಿಗೆ ವಿದಾಯದ ಪಂದ್ಯವಾಗಿತ್ತು. 22ನೇ ಮತ್ತು ಕೊನೆಯ ಬಾರಿ ಕಣಕ್ಕಿಳಿದ ಅವರಿಗೆ ಪ್ರೇಕ್ಷಕರು ಹರ್ಷೋದ್ಗಾರಗಳ ಬೆಂಬಲ ನೀಡಿದರು. ಆದರೆ ಉತ್ತಮ ಲಯದಲ್ಲಿರುವ ಸಿನ್ನರ್ ಎರಡು ಗಂಟೆಗಳ ಒಳಗೆ ಪಂದ್ಯ ಗೆದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಕೊಕೊ ಗಾಫ್ ಕೂಡ ಮುನ್ನಡೆದರು. ಅಮೆರಿಕದ ಆಟಗಾರ್ತಿ 6-2, 6-4 ರಿಂದ ಝೆಕ್ ರಿಪಬ್ಲಿಕ್‌ನ ತೆರೇಸಾ ವೆಲೆನ್‌ಟೋವಾ ಅವರನ್ನು ಬಗ್ಗುಬಡಿದರು.



ಯಾನಿಕ್ ಸಿನ್ನರ್

ಇನ್ನೊಂದು ಪಂದ್ಯದಲ್ಲಿ ಫ್ರೆಂಚ್ ಓಪನ್ ಮಾಜಿ ರನ್ನರ್ ಅಪ್ ಮರ್ಕೆತಾ ವೊಂದ್ರುಸೋವಾ 6-0, 4-6, 6-3 ರಿಂದ ಪೋಲೆಂಡ್‌ನ ಮ್ಯಾಗ್ಡಲಿನಾ ಫ್ರೆಚ್ ಅವರನ್ನು ಸೋಲಿಸಿದರು. ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಅವರ ಮುಂದಿನ ಎದುರಾಳಿ. 2024ರ ರನ್ನರ್ ಅಪ್, ಅಮೆರಿಕದ ಪೆಗುಲಾ ಫಿಲಿಪ್ ಶಾಟ್ರಿಯೆ ಕೋರ್ಟ್‌ನಲ್ಲಿ 6-3, 7-6 (7/3) ರಿಂದ ಸ್ವದೇಶದ ಆ್ಯನ್ ಲಿ ಅವರನ್ನು ಹಿಮ್ಮೆಟ್ಟಿಸಿದರು.

ಮಿನೋರ್ ನಿರ್ಗಮನ: ಒಂಬತ್ತನೇ ಶ್ರೇಯಾಂಕದ ಆಸ್ಟ್ರೇಲಿಯಾದ ಆಟಗಾರ ಅಲೆಕ್ಸ್ ಡಿ ಮಿನೋರ್ ಹೊರಬಿದ್ದರು. ಸೋಲಿನ ನಿರೀಕ್ಷೆಯೊಡನೆ ತವರಿಗೆ ಹೊರಡಲು ಸಜ್ಜಾಗಿದ್ದ ಮೊನಾಕೊ ಮೂಲದ ಆಟಗಾರ ಅಲೆಕ್ಸಾಂಡರ್ ಬುಬ್ಲಿಕ್ 2-6, 2-6, 6-4, 6-3, 6-2 ರಿಂದ ಅಲೆಕ್ಸ್ ಅವರನ್ನು ಸೋಲಿಸಿದರು.

'ಈ ಪಂದ್ಯಕ್ಕೆ ತೆರಳುವ ಮೊದಲು, ಊರಿಗೆ ಹೊರಡಲು ವಿಮಾನ ಟಿಕೆಟ್‌ಗಳು ಲಭ್ಯವಿದೆಯೇ ಎಂದು ನಾನು ಪರಿಶೀಲಿಸುತ್ತಿದ್ದೆ' ಎಂದು ಬುಬ್ಲಿಕ್ ಪಂದ್ಯದ ನಂತರ ಬಹಿರಂಗಪಡಿಸಿದರು.

ಮಹಿಳೆಯರ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಮಿಯೆರಾ ಆಂಡ್ರೀವಾ (ರಷ್ಯಾ) 6-3, 6-4ರಿಂದ ಅಮೆರಿಕದ ಆಶ್ಲಿನ್ ಕ್ರೂಜೆರ್ ಅವರ ಮೇಲೆ ಸುಲಭ ಜಯಗಳಿಸಿದರು.

ನರೇಶ್ ದಹಿಯಾಗೆ ಬೇಷರತ್ ಕ್ಷಮೆ ಯಾಚಿಸಿದ ಬಜರಂಗ್

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಹಿರಿಯ ಕೋಚ್ ನರೇಶ್ ದಹಿಯಾ ಅವರಲ್ಲಿ ಬೇಷರತ್ ಕ್ಷಮೆಯಾಚಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನಿಕಟಪೂರ್ವ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕುಸ್ತಿಪಟುಗಳು ನಡೆಸಿದ್ದ ಧರಣಿಯ ಸಂದರ್ಭದಲ್ಲಿ ಬಜರಂಗ್ ಅವರು 'ನರೇಶ್ ದಹಿಯಾ ಅತ್ಯಾಚಾರ ಆರೋಪಿ. ನಮ್ಮ ಪ್ರತಿಭಟನೆಯನ್ನು ಪ್ರಶ್ನಿಸುವ ಹಕ್ಕು ಅವರಿಗಿಲ್ಲ' ಎಂದು ದೂಷಿಸಿದ್ದರು.

'ನರೇಶ್ ವಿರುದ್ಧ ತಪ್ಪು ಮತ್ತು ಅಸೂಕ್ಷ್ಮ ಹೇಳಿಕೆ ನೀಡಿದ್ದಕ್ಕಾಗಿ ಬೇಷರತ್ ಕ್ಷಮೆಯಾಚಿಸುತ್ತೇನೆ. ನನ್ನ ಹೇಳಿಕೆಯಿಂದ ನರೇಶ್ ಅವರಿಗೆ ಉಂಟಾಗಿರುವ ನೋವು ಮತ್ತು ಅವರ ವ್ಯಕ್ತಿತ್ವಕ್ಕಾಗಿರುವ ಹಾನಿಗೆ ವಿಷಾದವಿದೆ. ಅವರೊಬ್ಬ ನುರಿತ ಮತ್ತು ಉತ್ತಮ ಕೋಚ್ ಆಗಿದ್ದಾರೆ. ದೇಶಕ್ಕೆ ಉತ್ತಮ ಕಾಣಿಕೆ ನೀಡಿದ್ದಾರೆ' ಎಂದು ಬಜರಂಗ್ ನೀಡಿರುವ ಕ್ಷಮಾಪಣೆ ಪತ್ರವು ಪಿಟಿಐಗೆ ಲಭ್ಯವಾಗಿದೆ. ಕ್ಷಮಾಪಣೆಯನ್ನು ಸ್ವೀಕರಿಸಿದ್ದೇನೆ ಎಂದು ನರೇಶ್ ಪ್ರತಿಕ್ರಿಯಿಸಿದ್ದಾರೆ.



ಬಜರಂಗ್

ಏಷ್ಯನ್ ಅಥ್ಲೆಟಿಕ್ಸ್: 4x400 ಮೀ. ಮಹಿಳಾ ರಿಲೇ ತಂಡಕ್ಕೆ ಚಿನ್ನ • ಪುರುಷರ ತಂಡಕ್ಕೆ ಬೆಳ್ಳಿ

ಜ್ಯೋತಿಗೆ ಹರ್ಡಲ್ಸ್ ಚಿನ್ನ, ಮಿಂಚಿದ ಸಾಬ್ಳೆ

ಗುಮಿ (ದಕ್ಷಿಣ ಕೊರಿಯಾ), (ಪಿಟಿಐ): ಭಾರತದ ಅಗ್ರ ಹರ್ಡಲ್ಸ್ ಓಟಗಾರ್ತಿ ಜ್ಯೋತಿ ಯರ್ರಾಜಿ ಮತ್ತು ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆವೀರ ಅವಿನಾಶ್ ಸಾಬ್ಳೆ ಅವರು ಅತ್ಯಮೋಘ ಪ್ರದರ್ಶನ ನೀಡಿ, 26ನೇ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಗುರುವಾರ ಚಿನ್ನದ ಪದಕಗಳನ್ನು ಗೆದ್ದುಕೊಂಡರು.

ದಿನದ ಕೊನೆಗೆ ಮಹಿಳೆಯರ 4x400 ಮೀ. ರಿಲೇ ಓಟದಲ್ಲೂ ಬಂಗಾರದ ಪದಕ ಭಾರತದ ಪಾಲಾಯಿತು. ಭಾರತ ಒಂದೇ ದಿನ ಮೂರು ಚಿನ್ನ, ಎರಡು ಬೆಳ್ಳಿ, ಒಂದು ಕಂಚಿನ ಪದಕ ಗೆದ್ದುಕೊಂಡು ಪ್ರಾಬಲ್ಯ ಮೆರೆಯಿತು.

ಪದಕ ಪಟ್ಟಿಯಲ್ಲಿ ಐದು ಚಿನ್ನ ಸೇರಿ 14 ಪದಕಗಳೊಂದಿಗೆ ಭಾರತವು ಎರಡನೇ ಸ್ಥಾನದಲ್ಲಿದೆ. 12 ಚಿನ್ನ ಸೇರಿದಂತೆ 21 ಪದಕಗಳೊಂದಿಗೆ ಚೀನಾ ಅಗ್ರಸ್ಥಾನದಲ್ಲಿದೆ.

ಜ್ಯೋತಿ 100 ಮೀ. ಹರ್ಡಲ್ಸ್‌ನಲ್ಲಿ ನೂತನ ಕೂಟ ದಾಖಲೆಯೊಡನೆ (12.96 ಸೆ) ಚಿನ್ನ ಗೆದ್ದರು. 13.04 ಸೆ.ಗಳ ಹಳೆಯ ದಾಖಲೆಯನ್ನು ಕಜಕಸ್ತಾನದ ಓಲ್ಗಾ ಶಿಶಿಗಿನಾ (1998ರಲ್ಲಿ) ಮತ್ತು ಸುನ್ ಯಾವಿಗಿ (2011ರಲ್ಲಿ) ಜಂಟಿಯಾಗಿ ಹೊಂದಿದ್ದರು.

ಜ್ಯೋತಿ 2023ರ ಆವೃತ್ತಿಯಲ್ಲೂ 13.09 ಸೆ.ಗಳ ಅವಧಿಯೊಡನೆ ಚಿನ್ನ ಗೆದಿದ್ದರು. ಆದರೆ ಅವರ ವೈಯಕ್ತಿಕ ಶ್ರೇಷ್ಠ ಅವಧಿ (12.78 ಸೆ.) ಇಂದಿನ ಕಾಲಾವಧಿಗಿಂತ ಉತ್ತಮವಾಗಿದೆ. ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ ಜ್ಯೋತಿ, ಹಿಂದೆ ಈ ಕೂಟದಲ್ಲಿ ಹರ್ಡಲ್ಸ್ ಚಿನ್ನ ಉಳಿಸಿಕೊಂಡ ನಾಲ್ವರು ಅಥ್ಲೀಟ್‌ಗಳ ಸಾಲಿಗೆ ಸೇರಿದರು. ಜಪಾನ್‌ನ ಎಮಿ ಅಕಿಮೊಟೊ (1979, 1981, 1983), ಚೀನಾದ ಝೂಂಗ್ ಯು (1991, 93), ಸು ಯಿನ್‌ಪಿಂಗ್ (2003, 2005) ಮತ್ತು ಸುನ್ ಯಾವಿ (2009, 2011) ಈ ನಾಲ್ವರು.



ಜ್ಯೋತಿ ಯರ್ರಾಜಿ ಪಿಟಿಐ ಚಿತ್ರ



ಅವಿನಾಶ್ ಸಾಬ್ಳೆ ಪಿಟಿಐ ಚಿತ್ರ

3000 ಮೀ. ಸ್ಟೀಪಲ್‌ಚೇಸ್ ಓಟವನ್ನು ಸಾಬ್ಳೆ 8ನಿ.20.92 ಸೆ.ಗಳಲ್ಲಿ ಪೂರೈಸಿದರು. ಅವರು 2019ರ ಆವೃತ್ತಿಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಈ ಚಾಂಪಿಯನ್‌ಷಿಪ್‌ನ ಸ್ಟೀಪಲ್‌ಚೇಸ್‌ನಲ್ಲಿ 36 ವರ್ಷಗಳ ನಂತರ ಚಿನ್ನ ಗೆದ್ದ ಗೌರವ ಸಾಬ್ಳೆ ಅವರದಾಯಿತು. ಈ ಹಿಂದೆ, 1989ರಲ್ಲಿ ದೀನಾ ರಾಮ್ ಕೊನೆಯ ಬಾರಿ ಸ್ಟೀಪಲ್‌ಚೇಸ್‌ನಲ್ಲಿ ಭಾರತದ ಪರ ಚಿನ್ನ ಗೆದಿದ್ದರು.

ಜಪಾನ್‌ನ ಯುತಾರೊ ನೀನೆ (8:24.41 ಸೆ.) ಬೆಳ್ಳಿ, ಕತಾರ್‌ನ ಝುಕಾರಿಯಾ ಇಲಾಹ್ಲಾಮಿ (8:27.12 ಸೆ.) ಕಂಚಿನ ಪದಕ ಗೆದ್ದರು.

ಮಹಿಳೆಯರ 4x400 ಮೀ. ರಿಲೇ ಸ್ಪರ್ಧೆಯಲ್ಲಿ ಜಿಸ್ನಾ ಮ್ಯಾಥ್ಯೂ, ರೂಪಲ್ ಚೌಧರಿ, ಕುಂಜಾ ರಜಿತಾ ಮತ್ತು ಶುಭಾ ವೆಂಕಟೇಶನ್ ಅವರನ್ನು ಒಳಗೊಂಡ ಭಾರತದ 3ನಿ.34.18 ಸೆ.ಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆಯಿತು. ಇದು ತಂಡದ ಈ ವರ್ಷದ ಉತ್ತಮ ಅವಧಿ. ವಿಯೆಟ್ನಾಮ್ (3:34.77) ಬೆಳ್ಳಿ ಗೆದ್ದರೆ, ಶ್ರೀಲಂಕಾ (3:36.67 ಸೆ.) ಕಂಚಿನ ಪದಕ ತನ್ನದಾಗಿಸಿಕೊಂಡಿತು.

ಲಾಂಗ್‌ಜಂಪ್‌ನಲ್ಲಿ ಆನ್ಸಿ ಸೋಜನ್ (6.33 ಮೀ.) ಮತ್ತು ಶೈಲಿ ಸಿಂಗ್ (6.30 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಇರಾನಿನ ರೀಹಾನೇಶ್ ಮೊಬಿನಿ ಅರನಿ ಅವರು 6.40 ಮೀ. ಜಿಗಿದು ಚಿನ್ನ ಗೆದ್ದರು.

ಪುರುಷರ ತಂಡಕ್ಕೆ ಬೆಳ್ಳಿ: ಜಯ್ ಕುಮಾರ್, ಧರ್ಮವೀರ ಚೌಧರಿ, ಮನು ಶಾಜಿ ಮತ್ತು ವಿಶಾಲ್ ಟಿ.ಕೆ. ಅವರನ್ನು ಒಳಗೊಂಡ ಪುರುಷರ 4x400 ಮೀ. ರಿಲೇ ತಂಡ 3ನಿ.03.67 ಸೆ.ಗಳಲ್ಲಿ ಓಟ ಪೂರೈಸಿ ಬೆಳ್ಳಿ ಪದಕ ಪಡೆಯಿತು. ಇದು ತಂಡದ ಇದುವರೆಗಿನ ಉತ್ತಮ ಸಾಧನೆ ಎನಿಸಿತು. ಕತಾರ್ ತಂಡ (3:03.52) ಚಿನ್ನದ ಪದಕ ಗೆದ್ದರೆ, ಚೀನಾ (3:03.73 ಸೆ.) ಕಂಚಿನ ಪದಕ ಗಳಿಸಿತು.

ಎಂಟರ ಘಟ್ಟಕ್ಕೆ ಸಾತ್ವಿಕ್– ಚಿರಾಗ್

ಸಿಂಗಪುರ (ಪಿಟಿಐ): ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ – ಚಿರಾಗ್ ಶೆಟ್ಟಿ ಅವರು ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಗುರುವಾರ ಎಂಟರ ಘಟ್ಟ ತಲುಪಿದರು. ಆದರೆ ಸಿಂಗಲ್ಸ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರ ಸವಾಲು ಅಂತ್ಯಗೊಂಡಿತು.

ಸಾತ್ವಿಕ್– ಚಿರಾಗ್ ಜೋಡಿ 19-21, 21-16, 21-19 ರಿಂದ ಸಬರ್ ಕಾರ್ಯಮನ್ ಗುತಮ- ಮೊಹಮ್ಮದ್ ರೇಜಾ ಪೆಹ್ಲವಿ ಇಸ್ಫಹಾನಿ ಜೋಡಿಯನ್ನು (ಇಂಡೊನೇಷ್ಯಾ) ಸೋಲಿಸಿತು.

ಮಾಜಿ ವಿಶ್ವ ಚಾಂಪಿಯನ್ ಸಿಂಧು, ತೀವ್ರ ಹೋರಾಟ ಕಂಡ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಐದನೇ ಶ್ರೇಯಾಂಕದ ಚೆನ್ ಯೂಫಿ (ಚೀನಾ) ಅವರಿಗೆ 9-21, 21-18, 16-21 ರಲ್ಲಿ ಸೋತರು. ಪ್ರಣಯ್ ಪುರುಷ ಸಿಂಗಲ್ಸ್‌ನ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 16-21, 14-21ರಲ್ಲಿ ಫ್ರಾನ್ಸ್‌ನ ಕ್ರಿಸ್ಟೊ ಪೊಪೋವ್ ಅವರಿಗೆ ಮಣಿದರು.



ಯಶ್, ಜೋಶ್ ಮತ್ತು ಸುಯಶ್ ತಂದ ಯಶಸ್ಸು • ಪ್ರಶಸ್ತಿ ಸುತ್ತಿಗೆ ಆರ್‌ಸಿಬಿ ಲಗ್ಗೆ

ಕಿರೀಟಧಾರಣೆಗೆ ಒಂದೇ ಹೆಜ್ಜೆ ಬಾಕಿ

ಪ್ರಜಾವಾಣಿ ವಾರ್ತೆ

ಮುಲ್ಲನಪುರ (ಚಂಡೀಗಡ): ಯಶ್, ಜೋಶ್ ಮತ್ತು ಸುಯಶ್..

ಈ ಮೂರು ಹೆಸರುಗಳು ಈಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳ ನಾಲಿಗೆಗಳ ಮೇಲೆ ನಲಿಯುತ್ತಿವೆ. ಈ ಮೂವರು ಬೌಲರ್‌ಗಳ ಕಾರಣದಿಂದಲೇ ಆರ್‌ಸಿಬಿ ತಂಡವು, ಗುರುವಾರ ನಡೆದ ಕ್ವಾಲಿಫೈಯರ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಎಂಟು ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಹಂತವನ್ನು ಸುಲಭವಾಗಿ ಪ್ರವೇಶಿಸಿತು.

ಆರ್‌ಸಿಬಿಯು 2016ರ ನಂತರ ಫೈನಲ್ ಪ್ರವೇಶಿಸಿದ್ದು ಈಗಲೇ. ತಂಡದ ಚೊಚ್ಚಲ ಪ್ರಶಸ್ತಿ ವಿಜಯದ ಸಾಧನೆಗೆ ಈಗ ಒಂದೇ ಹೆಜ್ಜೆ ಬಾಕಿ ಇದೆ. ಜೂನ್ 3ರಂದು ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ರಜತ್ ಬಳಗ ಕಣಕ್ಕಿಳಿಯಲಿದೆ.

ಸಮಬಲಶಾಲಿ ತಂಡಗಳ ಹೋರಾಟವೆಂದೇ ಬಿಂಬಿತವಾಗಿದ್ದ ಈ ಪಂದ್ಯದಲ್ಲಿ ರಜತ್ ಪಾಟೀದಾರ್ ಬಳಗವು ಏಕಪಕ್ಷೀಯ ಗೆಲುವು ಸಾಧಿಸಿತು. ಮಹಾರಾಜ ಯಾದವೀಂದ್ರ ಸಿಂಗ್ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ರಜತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅವರ ನಿರ್ಧಾರವನ್ನು ಬೌಲರ್‌ಗಳು ಸಮರ್ಥಿಸಿಕೊಂಡರು. ಯಶ್ ದಯಾಳ್ (26ಕ್ಕೆ2), ಜೋಶ್ ಹ್ಯಾಜಲ್‌ವುಡ್ (21ಕ್ಕೆ3) ಮತ್ತು ಸ್ಪಿನ್ನರ್ ಸುಯಶ್ ಶರ್ಮಾ (17ಕ್ಕೆ3) ಅವರ ನಿಖರ ದಾಳಿಯಿಂದಾಗಿ ಪಂಜಾಬ್ ತಂಡವು 14.1 ಓವರ್‌ಗಳಲ್ಲಿ 101 ರನ್‌ಗಳಿಗೆ ಆಲೌಟ್ ಆಯಿತು. ಈ ಸುಲಭ ಮೊತ್ತವನ್ನು ಆರ್‌ಸಿಬಿಯು 10 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ದಾಟಿತು. ಆರಂಭಿಕ ಬ್ಯಾಟರ್ ಫಿಲಿಪ್ ಸಾಲ್ಟ್ (ಅಜೇಯ 56; 27ಎ, 4X6, 6X3) ಅರ್ಧಶತಕ ಹೊಡೆದು ತಂಡವನ್ನು ಗೆಲುವಿನ ದಡ ಸೇರಿಸಿದರು.

ವೇಗಿಗಳಾದ ಯಶ್ ದಯಾಳ್ ಜೋಶ್ ಹ್ಯಾಜಲ್‌ವುಡ್ ಮತ್ತು ಭುವನೇಶ್ವರ್ ಕುಮಾರ್ (17ಕ್ಕೆ1) ಅವರ ಪರಿಣಾಮಕಾರಿ ಬೌಲಿಂಗ್ ಮುಂದೆ ಪವರ್‌ಪ್ಲೇ ಹಂತದಲ್ಲಿಯೇ ಪಂಜಾಬ್ ತಂಡವು 38 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತು.


ಎಡಗೈ ವೇಗಿ ಯಶ್ ದಯಾಳ್ ಅವರು ತಮ್ಮ ಮೊದಲ ಓವರ್‌ನಲ್ಲಿಯೇ ಪ್ರಿಯಾಂಶ್ ಆರ್ಯ ವಿಕೆಟ್ ಗಳಿಸುವುದರೊಂದಿಗೆ ಖಾತೆ ತೆರೆದರು.

ಬಿರುಬಿಸಿಲಿಗೆ ದಿನವಿಡೀ ಮೈಯೊಡ್ಡಿದ್ದ ಪಿಚ್‌ನಲ್ಲಿ ಚೆಂಡು, ಬ್ಯಾಟರ್‌ಗಳ ನಿರೀಕ್ಷೆಗಿಂತಲೂ ತುಸು ಹೆಚ್ಚು ಪುಟಿದು ಧಾವಿಸುತ್ತಿತ್ತು. ಲೆಂಗ್ತ್ ಎಸೆತಗಳನ್ನು ಅಂದಾಜಿಸುವುದು ನುರಿತ ಬ್ಯಾಟರ್‌ಗಳಿಗೂ ಕಷ್ಟವಾಗುತ್ತಿತ್ತು. ಇದರ ಲಾಭ ಪಡೆದ ಬೌಲರ್‌ಗಳು ಮೇಲುಗೈ ಸಾಧಿಸಿದರು.

ಗಾಯದಿಂದಾಗಿ ಸುಮಾರು 25 ದಿನಗಳಿಂದ ಆಟದಿಂದ ದೂರವಿದ್ದ ಆಸ್ಟ್ರೇಲಿಯಾ ವೇಗಿ ಹ್ಯಾಜಲ್‌ವುಡ್ ಕಣಕ್ಕಿಳಿದಿದ್ದು ಆರ್‌ಸಿಬಿಗೆ ಲಾಭವಾಯಿತು. ಜೋಶ್ ಇಂಗ್ಲಿಸ್ ಮತ್ತು ನಾಯಕ ಶ್ರೇಯಸ್ ಅಯ್ಯರ್ ಅವರ ವಿಕೆಟ್‌ಗಳನ್ನು ಕಬಳಿಸಿದರು.

ಕಣಕ್ಕಿಳಿದ ಸುಯಶ್ ಶರ್ಮಾ ತಮ್ಮ ಒಂದೇ ಓವರ್‌ನಲ್ಲಿ (9ನೇ ಓವರ್) ಶಶಾಂಕ್ ಸಿಂಗ್ ಮತ್ತು ಮುಷೀರ್ ಖಾನ್ ಅವರ ವಿಕೆಟ್‌ಗಳನ್ನು ಗಳಿಸಿದರು. ಮಧ್ಯಮ ಕ್ರಮಾಂಕ ಕುಸಿಯಿತು. ಇನ್ನೊಂದೆಡೆ ಮಾರ್ಕಸ್ ಸ್ಟೊಯಿನಿಸ್ (26ರನ್) ಅವರು ರನ್ ಹೆಚ್ಚಳಕ್ಕೆ ಪ್ರಯತ್ನಿಸುತ್ತಿದ್ದರು. ಅವರ ವಿಕೆಟ್ ಅನ್ನೂ 11ನೇ ಓವರ್‌ನಲ್ಲಿ ಪಡೆದ ಸುಯಶ್ ಉತ್ಸಾಹ ಮುಗಿಲುಮುಟ್ಟಿತು. ಈ ಸಂದರ್ಭದಲ್ಲಿ ಮಾರ್ಕಸ್ ಮತ್ತು ಸುಯಶ್ ನಡುವೆ 'ದೃಷ್ಟಿಯುದ್ಧ' ಮತ್ತು ಮಾತಿನ ಚಕಮಕಿ ನಡೆಯಿತು.

15ನೇ ಓವರ್‌ನಲ್ಲಿ ಅಜ್ಮತ್‌ವುಲ್ಲಾ ವಿಕೆಟ್ ಪಡೆಯುವುದರೊಂದಿಗೆ ಹ್ಯಾಜಲ್‌ವುಡ್ ಅವರೇ ಇನಿಂಗ್ಸ್‌ಗೆ ತೆರೆ ಎಳೆದರು. ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಮೂರು ಅಮೋಘ ಕ್ಯಾಚ್ ಪಡೆದು ಮಿಂಚಿದರು. ನಾಯಕ ರಜತ್ ಮತ್ತು ಅನುಭವಿ ವಿರಾಟ್ ಅವರ ಜಂಟಿ ಮಾರ್ಗದರ್ಶನ ರಂಗೇರಿಸಿತು.



ಜೋಶ್ ಹ್ಯಾಜಲ್‌ವುಡ್ ಅವರೊಂದಿಗೆ ವಿರಾಟ್ ಕೊಹ್ಲಿ ಸಂಭ್ರಮಿಸಿದ್ದು ಹೀಗೆ ಪಿಟಿಐ ಚಿತ್ರ



ಕಿಂಗ್ಸ್‌ಗೆ ಇದೆ ಇನ್ನೊಂದು ಅವಕಾಶ

ಲೀಗ್ ಹಂತದಲ್ಲಿ ಅಗ್ರಸ್ಥಾನ ಪಡೆದು ಕ್ವಾಲಿಫೈಯರ್ ಪ್ರವೇಶಿಸಿದ್ದ ಪಂಜಾಬ್ ತಂಡಕ್ಕೆ ಫೈನಲ್ ಪ್ರವೇಶಿಸುವ ಇನ್ನೊಂದು ಅವಕಾಶ ಬಾಕಿ ಇದೆ. ಶುಕ್ರವಾರ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ಜಯಿಸುವ ತಂಡವನ್ನು ಎರಡನೇ ಕ್ವಾಲಿಫೈಯರ್‌ನಲ್ಲಿ ಪಂಜಾಬ್ ಎದುರಿಸಬೇಕಿದೆ. ಈ ಪಂದ್ಯದಲ್ಲಿ ಗೆದ್ದ ತಂಡವು ಫೈನಲ್‌ನಲ್ಲಿ ಆರ್‌ಸಿಬಿಯನ್ನು ಎದುರಿಸಲಿದೆ.

4ನೇ ಬಾರಿ ಫೈನಲ್‌ಗೆ

18 ವರ್ಷಗಳಿಂದ ಐಪಿಎಲ್‌ನಲ್ಲಿ ಆಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇದುವರೆಗೆ ಒಂದು ಬಾರಿಯೂ ಪ್ರಶಸ್ತಿ ಜಯಿಸಿಲ್ಲ. ಆದರೆ ಈ ಹಿಂದೆ ಮೂರು ಸಲ (2009, 2011 ಹಾಗೂ 2016) ಫೈನಲ್ ಪ್ರವೇಶಿಸಿತ್ತು. ಎಲ್ಲ ಸಲವೂ ರನ್ನರ್ಸ್ ಅಪ್ ಆಗಿತ್ತು. ಇದೀಗ ಪ್ರಶಸ್ತಿ ಗೆಲ್ಲುವ ಮತ್ತೊಂದು ಅವಕಾಶ ಒದಗಿಬಂದಿದೆ. ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿದೆ.



ಆರ್‌ಸಿಬಿ ತಂಡದ ಬೌಲರ್ ಸುಯಶ್ ಶರ್ಮಾ ಅವರು ಮಾರ್ಕಸ್ ಸ್ಟೋಯಿನಿಸ್ ವಿಕೆಟ್ ಪಡೆದು ಸಂಭ್ರಮಿಸಿದ ರೀತಿ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 101 (14.1 ಓವರುಗಳಲ್ಲಿ)
ಪ್ರಿಯಾಂಶ್ ಸಿ ಕೃಣಾಲ್ ಬಿ ದಯಾಳ್ 7 (5ಎ, 4x1)
ಪ್ರಭಸಿಮ್ರನ್ ಸಿ ಜಿತೇಶ್ ಬಿ ಭುವನೇಶ್ವರ್ 18 (10ಎ, 4x2, 6x1)
ಇಂಗ್ಲಿಸ್ ಸಿ ಭುವನೇಶ್ವರ್ ಬಿ ಹ್ಯಾಜಲ್‌ವುಡ್ 4 (7ಎ)
ಶ್ರೇಯಸ್ ಸಿ ಜಿತೇಶ್ ಬಿ ಹ್ಯಾಜಲ್‌ವುಡ್ 2 (3ಎ)
ವಧೇರಾ ಬಿ ದಯಾಳ್ 8 (10ಎ, 4x1)
ಸ್ಟೊಯಿನಿಸ್ ಬಿ ಸುಯಶ್ 26 (17ಎ, 4x2, 6x2)
ಶಶಾಂಕ್ ಬಿ ಸುಯಶ್ 3 (5ಎ)
ಮುಷೀರ್ ಎಲ್‌ಬಿಡಬ್ಲ್ಯು ಬಿ ಸುಯಶ್ 0 (3ಎ)
ಒಮರ್‌ಝೈ ಸಿ ಜಿತೇಶ್ ಬಿ ಹ್ಯಾಜಲ್‌ವುಡ್ 18 (12ಎ, 4x1, 6x1)
ಹರ್‌ಪ್ರೀತ್ ಬಿ ಶೆಫರ್ಡ್ 4 (11ಎ)
ಜೇಮಿಸನ್ ಔಟಾಗದೇ 0 (3ಎ)
ಇತರೆ 11 (ಬೈ 5, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-9 (ಪ್ರಿಯಾಂಶ್ ಆರ್ಯ, 1.2), 2-27 (ಪ್ರಭಸಿಮ್ರನ್ ಸಿಂಗ್, 2.6), 3-30 (ಶ್ರೇಯಸ್ ಅಯ್ಯರ್, 3.4), 4-38 (ಜೋಶ್ ಇಂಗ್ಲಿಸ್, 5.1), 5-50 (ನೇಹಲ್ ವಧೇರಾ, 6.3), 6-60 (ಶಶಾಂಕ್ ಸಿಂಗ್, 8.2), 7-60 (ಮುಶೀರ್ ಖಾನ್, 8.5), 8-78 (ಮಾರ್ಕಸ್ ಸ್ಟೊಯಿನಿಸ್, 10.3), 9-97 (ಹರಪ್ರೀತ್ ಬ್ರಾರ್ 13.3), 10-101 (ಅಜ್ಮತ್‌ವುಲ್ಲಾ ಒಮರ್‌ಝೈ, 14.1)
ಬೌಲಿಂಗ್: ಭುವನೇಶ್ವರ್ ಕುಮಾರ್ 2-0-17-1; ಯಶ್ ದಯಾಳ್ 4-0-26-2; ಜೋಶ್ ಹ್ಯಾಜಲ್‌ವುಡ್ 3.1-0-21-3; ಸುಯಶ್ ಶರ್ಮಾ 3-0-17-3; ಕೃಣಾಲ್ ಪಾಂಡ್ಯ 1-0-10-0; ರೊಮಾರಿಯೊ ಶೆಫರ್ಡ್ 1-0-5-1

ರಾಯಲ್ ಚಾಲೆಂಜರ್ಸ್ ಬೆಂಗಳೂರು: 2ಕ್ಕೆ106 (10 ಓವರುಗಳಲ್ಲಿ)
ಸಾಲ್ಟ್ ಔಟಾಗದೇ 56 (27ಎ, 4x6, 6x3)
ಕೊಹ್ಲಿ ಸಿ ಇಂಗ್ಲಿಸ್ ಬಿ ಜೇಮಿಸನ್ 12 (12ಎ, 4x2)
ಮಯಂಕ್ ಸಿ ಶ್ರೇಯಸ್ ಬಿ ಮುಶೀರ್ 19 (13ಎ, 4x2, 6x1)
ಪಾಟೀದಾರ್ ಔಟಾಗದೇ 15 (8ಎ, 4x1, 6x1)
ಇತರೆ 4 (ಲೆಗ್‌ಬೈ 4)
ವಿಕೆಟ್ ಪತನ: 1-30 (ವಿರಾಟ್ ಕೊಹ್ಲಿ, 3.2), 2-84 (ಮಯಂಕ್ ಅಗರವಾಲ್, 7.5)
ಬೌಲಿಂಗ್: ಅರ್ಷದೀಪ್ ಸಿಂಗ್ 2-0-20-0; ಕೈಲ್ ಜೇಮಿಸನ್ 3-1-27-1; ಒಮರ್‌ಝೈ 1-0-10-0; ಹರ್‌ಪ್ರೀತ್ ಬ್ರಾರ್ 2-0-18-0; ಮುಶೀರ್ ಖಾನ್ 2-0-27-1.
ಪಂದ್ಯದ ಆಟಗಾರ: ಸುಯಶ್ ಶರ್ಮಾ

ಫಲಿತಾಂಶ: ಆರ್‌ಸಿಬಿಗೆ 8 ವಿಕೆಟ್ ಜಯ

ಗಿಲ್ ಪಡೆಗೆ ಹಾರ್ದಿಕ್ ಬಳಗದ ಸವಾಲ್


ಮುಂಬೈ ತಂಡದ ವೇಗದ ಜೋಡಿ ಟ್ರೆಂಟ್ ಬೌಲ್ಟ್ ಮತ್ತು ಬೂಮ್ರಾ ಪಿಟಿಐ ಚಿತ್ರ

ಮುಲ್ಲನಪುರ (ಪಿಟಿಐ): ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ನೇತೃತ್ವದ ಮುಂಬೈ ಇಂಡಿಯನ್ಸ್ ತಂಡಗಳು ಶುಕ್ರವಾರ ಐಪಿಎಲ್ ಎಲಿಮಿನೇಟರ್‌ನಲ್ಲಿ ಹಣಾಹಣಿ ನಡೆಸಲಿವೆ.


ಶುಭಮನ್ ಗಿಲ್

ಐದು ಬಾರಿಯ ಚಾಂಪಿಯನ್ ಮುಂಬೈ ತಂಡ ಎಲ್ಲ ವಿಭಾಗಗಳಲ್ಲಿಯೂ ಬಲಿಷ್ಠವಾಗಿದೆ. ಗಿಲ್ ಬಳಗವು ಟೂರ್ನಿಯ ಆರಂಭದಿಂದಲೂ ಉತ್ತಮವಾಗಿ ಆಡಿದೆ. ಟೈಟನ್ಸ್ ತಂಡವು ಕಳೆದ ನಾಲ್ಕು ವರ್ಷಗಳಲ್ಲಿ ಮೂರು ಸಲ ಪ್ಲೇ ಆಫ್ ಪ್ರವೇಶಿಸಿದೆ. 2022ರಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿಯೇ ಟ್ರೋಫಿ ಜಯಿಸಿತ್ತು. ಇದೀಗ ಅದೇ ಹಾರ್ದಿಕ್ ವಿರುದ್ಧ ಕಣಕ್ಕಿಳಿಯಲಿದೆ.

ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕರಾಗಿ ನೇಮಕವಾಗಿರುವ ಗಿಲ್ ಅವರಿಗೆ ಎಲಿಮಿನೇಟರ್‌ನಲ್ಲಿ ಜಯಿಸುವುದು ಪ್ರತಿಷ್ಠೆಯ ವಿಷಯವಾಗಿದೆ. ಅದೇ ರೀತಿ ಹಾರ್ದಿಕ್ ಅವರೂ ತಮ್ಮ ಮುಂಬೈ ತಂಡಕ್ಕೆ ಕಾಣಿಕೆ ನೀಡುವ ದೃಷ್ಟಿಯಿಂದ ಈ ಪಂದ್ಯ ಜಯಿಸುವುದು ಮುಖ್ಯವಾಗಿದೆ. ಈ ಪಂದ್ಯದಲ್ಲಿ ಗೆಲ್ಲುವ ತಂಡವು ಎರಡನೇ ಕ್ವಾಲಿಫೈಯರ್‌ಗೆ ಪ್ರವೇಶಿಸಲಿದ್ದು, ಸೋತ ತಂಡವು ಟೂರ್ನಿಯಿಂದ ನಿರ್ಗಮಿಸಲಿದೆ.

ಈ ಆವೃತ್ತಿಯಲ್ಲಿ ಮುಂಬೈ ತಂಡವು ಆರಂಭದ ಪಂದ್ಯಗಳಲ್ಲಿ ಸೋಲಿನ ಕಹಿ ಅನುಭವಿಸಿತ್ತು. ಆದರೆ ನಂತರ ಸತತ ಆರು ಪಂದ್ಯಗಳಲ್ಲಿ ಜಯಿಸುವ ಮೂಲಕ ಪುಟಿದೆದ್ದಿತು. ಅನುಭವಿ ಬ್ಯಾಟರ್ ರೋಹಿತ್ ಶರ್ಮಾ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ನಮನ್ ಧೀರ್, ಆಲ್‌ರೌಂಡರ್ ಹಾರ್ದಿಕ್, ಮಿಚೆಲ್ ಸ್ಯಾಂಟನರ್, ವೇಗಿ ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್ ಮತ್ತು ದೀಪಕ್ ಚಾಹರ್ ಉತ್ತಮ ಲಯದಲ್ಲಿದ್ದಾರೆ.

ಈ ವರ್ಷ ಹೆಚ್ಚು ರನ್ ಗಳಿಸಿದವರು

ಆಟಗಾರ	ಪಂದ್ಯ	ರನ್	ಶ್ರೇಷ್ಠ
ಗುಜರಾತ್ ಟೈಟನ್ಸ್			
ಶುಭಮನ್‌ಗಿಲ್	14	649	93*
ಸಾಯಿ ಸುದರ್ಶನ್	14	679	108*
ಮುಂಬೈ ಇಂಡಿಯನ್ಸ್			
ಸೂರ್ಯಕುಮಾರ್ ಯಾದವ್	14	640	73*
ರೋಹಿತ್ ಶರ್ಮಾ	13	329	76*

ಹೆಚ್ಚು ವಿಕೆಟ್ ಪಡೆದವರು

ಆಟಗಾರ	ಪಂದ್ಯ	ವಿಕೆಟ್
ಗುಜರಾತ್ ಟೈಟನ್ಸ್		
ಪ್ರಸಿದ್ಧಕೃಷ್ಣ	14	23
ಮೊಹಮ್ಮದ್ ಸಿರಾಜ್	14	15
ಸಾಯಿಕಿಶೋರ್	14	17
ಮುಂಬೈ ಇಂಡಿಯನ್ಸ್		
ಟ್ರೆಂಟ್ ಬೌಲ್ಟ್	14	19
ಜಸ್‌ಪ್ರೀತ್ ಬೂಮ್ರಾ	10	17
ಹಾರ್ದಿಕ್ ಪಾಂಡ್ಯ	13	13

ಟೈಟನ್ಸ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಶಾರೂಕ್ ಖಾನ್, ತೆವಾಟಿಯಾ, ಶೆರ್ಫೆನ್ ರುದರ್ ಫೋರ್ಡ್ ಲಯಕ್ಕೆ ಮರಳುವುದು ಅನಿವಾರ್ಯ. ಅಗ್ರ ಕ್ರಮಾಂಕದ ಶುಭಮನ್ ಮತ್ತು ಸಾಯಿ ಅವರು ವೈಫಲ್ಯ ಅನುಭವಿಸಿದರೆ ಮಧ್ಯಮ ಕ್ರಮಾಂಕದವರ ಮೇಲೆ ಹೊಣೆ ಹೆಚ್ಚಲಿದೆ.

ಟೈಟನ್ಸ್ ತಂಡದ ಬೌಲಿಂಗ್ ವಿಭಾಗವೂ ಉತ್ತಮವಾಗಿದೆ. ವೇಗಿ ಪ್ರಸಿದ್ಧಕೃಷ್ಣ, ಸಿರಾಜ್, ಕಗಿಸೊ ರಬಾಡ, ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರು ಉತ್ತಮ ಲಯದಲ್ಲಿದ್ದಾರೆ. ಮುಂಬೈನ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಅವರ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್